ಸ್ವಯಂಪ್ರೇರಿತವಾಗಿ ಒಂದು ಹೇಳಿಕೆ ಮಾಡಬೇಕಾಗಿತ್ತು, ಹೇಳಿಕೆ ಮಾಡುತ್ತದೆಂದು ನಾವು ನಿರೀಕ್ಷಿಸಿದ್ದೆವು, ಈಗಲಾದರೂ ಹೇಳಿಕೆ ಮಾಡುವ ನಿರೀಕ್ಷೆಯಲ್ಲಿದ್ದೀರಾ? ಇಲ್ಲದಿದ್ದರೆ ನಾವೇ ಅದನ್ನು ಪ್ರಸ್ತಾಪಿಸಬೇಕೇ? ಎಂದು ಕೇಳಿದರು.

ಶ್ರೀ ಸಿದ್ಧರಾಮಯ್ಯ:- ಸರ್ಕಾರ ಆ ಕುರಿತು ಹೇಳಿಕೆ ಮಾಡುತ್ತದೆ.

ಅಧ್ಯಕ್ಷರು:- ಹಾಗಾದರೆ, ಸಮಸ್ಯೆ ಬಗೆಹರಿಯಿತು. ಈಗ ವಿದ್ಯುಚ್ಛಕ್ತಿಗೆ ಸಂಬಂಧಿಸಿದಂತೆ ಚರ್ಚೆ ಪ್ರಾರಂಭಿಸೋಣ.

7. ನಿಯಮ 69ರ ಮೇರೆಗೆ ಚರ್ಚೆ

ವಿಷಯ:- ಅನಧಿಕೃತ ಪಂಪುಸೆಟ್ಟುಗಳಿಗೆ ಬಳಸುತ್ತಿದ್ದ ವಿದ್ಯುತ್ತನ್ನು ಸಕ್ರಮ-ಗೊಳಿಸುವುದು ಹಾಗೂ ವಿದ್ಯುತ್ ಮೀಟರ್ ಶೇವಣಿ ಕುರಿತು.

+ ಶ್ರೀ ವೈ. ರಾಮಕೃಷ್ಣ:- ನಿಯಮಾನುಸಾರ ನಿಲುವಳಿ ಸೂಚನೆಗೆ ನನ್ನ ಪ್ರಸ್ತಾವ ತೆಗೆದುಕೊಳ್ಳಬೇಕೆಂದು ಸೂಚನೆ ಕಳುಹಿಸಿದ್ದು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳುವುದ-ಕ್ಕಾಗುವುದಿಲ್ಲವೆಂದು ತಾವು ನನಗೆ ಉತ್ತರ ಬರೆದಿದ್ದೀರಿ. ಮತ್ತು ಅದನ್ನು ಗಮನ ಸೆಳೆಯುವ ಸೂಚನೆಯಾಗಿ ಸ್ವೀಕರಿಸಿದ್ದೀರಿ. ಈಗ ತಾವು ಯಾರಿಗೆ ಮೊದಲು ಆದ್ಯತೆ ಕೊಡುತ್ತೀರಿ?

MR. SPEAKER:- We are again converting this under rule 69 matter of urgent public importance.

ಶ್ರೀ ವೈ. ರಾಮಕೃಷ್ಣ:- ಇದು ನಮ್ಮ ಪಕ್ಷದ ವತಿಯಿಂದ ಮೂವ್ ಮಾಡಿರುವ ವಿಷಯವಾಗಿರುವುದರಿಂದ ನನಗೆ ನೀವು ಮೊದಲು ಮಾತನಾಡಲು ಅವಕಾಶ ಮಾಡಿಕೊಡಬೇಕು. Let the rule be followed.

ಅಧ್ಯಕ್ಷರು:- ನಿಮಗೆ ಅವಕಾಶ ಕೊಟ್ಟೇ ಕೊಡುತ್ತೇನೆ.

ಶ್ರೀ ವೈ. ರಾಮಕೃಷ್ಣ:- ಅಧ್ಯಕ್ಷರೆ, Let the rule be followed. ನಾನು ಸೂಚನೆ ಕಳುಹಿಸಿದ್ದುದು, ನೀವು ನನಗೆ ಅದರ ಎಂಡಾರ್ಸ್‌ಮೆಂಟ್ ಕೊಟ್ಟಿದ್ದೀರಿ. ನಾನು ನಿನ್ನೆಯೇ ಪ್ರಸ್ತಾಪಿಸಬೇಕೆಂದಿದ್ದೆ, ಆದರೆ, ಬಿಡದಿ ಬಳಿಯ ಹೆಜ್ಜಾಲದಲ್ಲಿ ಗೋಲಿಬಾರ್ ಪ್ರಕರಣವನ್ನು ಪ್ರಸ್ತಾಪಿಸಲು ತಾವು ಆದ್ಯತೆ ಕೊಟ್ಟಿದ್ದರಿಂದ ನಾನು ಕುಳಿತುಕೊಂಡೆ.

ಅಧ್ಯಕ್ಷರು:- ಮಾನ್ಯ ರಾಮಕೃಷ್ಣರವರೆ, ತಾವು ನಿಲುವಳಿ ಸೂಚನೆಗೆ ನೋಟೀಸ್ ಕಳುಹಿಸಿಕೊಟ್ಟಿದ್ದೀರಿ. ನಾನು ಹೇಳಿದೆ ಇದನ್ನು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳಲು ಆಗುವುದಿಲ್ಲ, ಗಮನ ಸೆಳೆಯುವ ಸೂಚನೆಯಾಗಿ ತೆಗೆದುಕೊಳ್ಳುತ್ತೇನೆಂದು. ನೀವು (ಬಿಜೆಪಿ) ಈ ಸದನದಲ್ಲಿ ಒಟ್ಟಾರೆ 40 ಜನ ಸದಸ್ಯರಿದ್ದೀರಿ, ಅವರು (ಕಾಂಗ್ರೆಸ್) ಸಹ ಸದಸ್ಯರುಗಳನ್ನು ಸೇರಿಸಿಕೊಂಡು 45 ಜನ ಸದಸ್ಯರಿದ್ದಾರೆ, ಇದನ್ನು ಗಮನ ಸೆಳೆಯುವ ಸೂಚನೆಯಾಗಿ ತೆಗೆದುಕೊಳ್ಳುವುದು ಬೇಡವೆಂದು ಇಷ್ಟೊ ಜನರು ಹೇಳುತ್ತಿದ್ದಾರೆ.

ಶ್ರೀ ವೈ. ರಾಮಕೃಷ್ಣ:- ನೀವು ನನಗೂ ನೋಟೀಸ್ ಕೊಟ್ಟಿರುವಂತೆ ಅವರಿಗೂ ಕೊಟ್ಟಿದ್ದರೆ ನಾನು ಕುಳಿತುಕೊಂಡು ಬಿಡುತ್ತಿದ್ದೆ.

MR. SPEAKER:- Please hear me. If you hear me, the doubt will be cleared. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, ತಾವು ಮತ್ತು ಅವರು ಕೊಟ್ಟಿದ್ದನ್ನು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳಬೇಕೆಂದು ನಾನು ತಮಗೆ ಎಂಡಾರ್ಸ್‌ಮೆಂಟ್ ಕೊಟ್ಟಿದೆ. I will take it up as Calling attention notice. ಎಂದು ಹೇಳಿದ್ದೆ. ಆದರೆ ಇತ್ತೊತ್ತು ಅವರೂ ಕೊಟ್ಟನಂತರ ನಾನು ಆಲೋಚಿಸಿದೆ, ತಾವು ಎರಡೂ ಪಕ್ಷದವರು ಸೇರಿದರೆ ಈ ಸದನದಲ್ಲಿನ ಸಂಖ್ಯಾಬಲ ಸುಮಾರು 85 ಆಗುತ್ತದೆ. ಇಷ್ಟು ಸಂಖ್ಯಾಬಲ ಹೊಂದಿರತಕ್ಕ ಎರಡೂ ಪಕ್ಷಗಳ ಮುಖಂಡರು ಇದನ್ನು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ಆದರೆ, ಇದನ್ನು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳುವುದು ಬೇಡ, ಗಮನ ಸೆಳೆಯುವ ಸೂಚನೆಯಾಗಿ ತೆಗೆದುಕೊಂಡರೆ ಬಹಳ ಕಡಿಮೆ ವೇಳೆ ಸಿಗುತ್ತದಾದ್ದರಿಂದ ಅದನ್ನು ನಿಯಮ 69ರಡಿಯಲ್ಲಿ ತೆಗೆದುಕೊಳ್ಳೋಣವೆಂದು ನಾನು ಈಗ ನನ್ನ ಅಧಿಕಾರ ಮತ್ತು ವಿವೇಚನೆ ಎರಡನ್ನೂ ಉಪಯೋಗಿಸಿ ನಿರ್ಣಯ ತೆಗೆದುಕೊಂಡಿದ್ದೇನೆ. ಅರ್ಥವಾಯಿತೇ? ನಾನು ನೀವು ಹೇಳಿದ ನಿಯಮದಲ್ಲೂ ತೆಗೆದುಕೊಂಡಿಲ್ಲ, ಅವರು ಹೇಳಿದ ನಿಯಮದಲ್ಲೂ ತೆಗೆದುಕೊಂಡಿಲ್ಲ I have conveted it under rule 69. You know the rules and we are familiar with rules. ಆದುದರಿಂದ, ಪ್ರೈಮಸಿ ಅವರಿಗೆ ಸಿಗುತ್ತದೆ. Again privilege will be with you if you manage to come back in 2-3 by elections.

ಡಾ: ಎಂ.ಪಿ. ಕರ್ಕಿ:- ಸಭಾಧ್ಯಕ್ಷರೆ, ಯಾರು ಮೊದಲು ನಿಲುವಳಿ ಸೂಚನೆಯನ್ನು ಕಳುಹಿಸಿದ್ದಾರೋ ಅವರಿಗೆ ತಾವು ಪ್ರಥಮ ಪ್ರಾಶಸ್ತ್ಯ ಕೊಡಬೇಕಾಗುತ್ತದೆ. ಈ ಸದನದಲ್ಲಿ ಕಾಂಗ್ರೆಸ್ ಪಕ್ಷದವರು ಹೆಚ್ಚು ಸಂಖ್ಯೆಯಲ್ಲಿದ್ದಾರೆಂಬ ಕಾರಣದಿಂದ ಮೊದಲ ಪ್ರಾಶಸ್ತ್ಯ ಅವರಿಗೆ ಕೊಡುತ್ತಿರುವುದು ಸರಿಯಲ್ಲವೆಂದು ನನ್ನ ಭಾವನೆಯಾಗಿದೆ.

ಅಧ್ಯಕ್ಷರು:- ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ನಿಲುವಳಿ ಸೂಚನೆಗೆ ತಾವು ಕೊಟ್ಟಿದ್ದು ಮತ್ತು ಅವರು ಕೊಟ್ಟಿದ್ದು ಎರಡೂ ಟೆನಬಲ್ ಅಲ್ಲ. You should have heard me. The notice served under rule 60 by the Hon'ble leader representing the BJP Legislature Party as well as the Leader of the opposition are not tenable. That is why I have suggested it to be taken up under rule 69. Now it has been changed and it will be taken up as a matter of urgent public importance. Therefore, when I changed the rule, the primacy vests with the leader of the opposition.

1. 10 ಪಿ.ಎಂ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಪಂಪುಸೆಟ್ಟುಗಳ ಬಗ್ಗೆ, ಎ.ಇ.ಹೆಚ್.ನ ಬಗ್ಗೆ ಮತ್ತು ವಿದ್ಯುತ್ ಸರಬರಾಜಿನ ಕೊರತೆಯ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳಿಸಿದ್ದೆವು. ಅದನ್ನು ನಿಲುವಳಿ ಸೂಚನೆಯಲ್ಲಿ ತೆಗೆದುಕೊಳ್ಳಲು ಆಗುವುದಿಲ್ಲ, ನಿಯಮ 69ರಲ್ಲಿ ಇದರ ಬಗ್ಗೆ ತಕ್ಷಣವೇ ಚರ್ಚೆ ಮಾಡಬೇಕೆಂದು ಅವಕಾಶವನ್ನು ತಾವು ಮಾಡಿಕೊಟ್ಟಿದ್ದೀರಿ. ನಾನು ಯಾವ ವಿಷಯದ ಬಗ್ಗೆ ನಿಲುವಳಿ ಸೂಚನೆ ತರಬೇಕು ಎಂಬ ಬಗ್ಗೆ ಕಳಿಸಿಕೊಟ್ಟಿದ್ದೆ ಅದರ ಬಗ್ಗೆ ಓದುತ್ತೇನೆ. ಏಕೆಂದರೆ, ಯಾವ ವಿಷಯದ ಮೇಲೆ ಸರ್ಕಾರ ಉತ್ತರ ಕೊಡಬಹುದು, ಸರ್ಕಾರಿ ಆಜ್ಞೆಗಳನ್ನು ಹೇಗೆ ಬದಲಾವಣೆ ಮಾಡಬಹುದು ಎನ್ನುವುದರ ಬಗ್ಗೆ ಹೇಳಲು ಸುಲಭವಾಗುತ್ತದೆ. ನಾವು ಕೊಟ್ಟಂಥ ನೋಟೀಸ್ ಈ ರೀತಿ ಇದೆ. ರಾಜ್ಯದ ರೈತರು ಅನಧಿಕೃತವಾಗಿ ಕೃಷಿ ಪಂಪುಸೆಟ್ಟುಗಳಿಗೆ ಬಳಸುತ್ತಿದ್ದ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸಲು ವಿದ್ಯುತ್ ಮಂಡಳಿಯವರು ಇತ್ತೀಚೆಗೆ ವಿಧಿಸಿರುವಂಥ ದುಭಾರಿ ದಂಡ ಮತ್ತು ಈ ದಂಡವನ್ನು ಕಟ್ಟಲು ಮೂವತ್ತು ದಿನಗಳ ಕಾಲಾವಧಿ, ಇಲ್ಲದಿದ್ದರೆ ರೈತರ ಮೇಲೆ ಮೊಕದ್ದಮೆ ಹೂಡಲು ಹೊರಡಿಸಿರುವ ಕರಾಳ ಆಜ್ಞೆಯ ಬಗ್ಗೆ ಮತ್ತು ವಿದ್ಯುತ್‌ನ ಅಸಮರ್ಪಕ ಸರಬರಾಜಿನಿಂದ ರೈತರಿಗೆ ಆಗುತ್ತಿರುವ ನಷ್ಟದ ಬಗ್ಗೆ ಹಾಗೂ ಸರ್ವ ವಿದ್ಯುತ್ ಮೀಟರ್‌ಗಳನ್ನು ತೆಗೆದು ಎಲೆಕ್ಟ್ರಾನಿಕ್ ವಿದ್ಯುತ್ ಮೀಟರ್‌ಗಳನ್ನು ಅಳವಡಿಸಲು ವಿಧಿಸಿರುವ ಹೆಚ್ಚುವರಿ ಮೀಟರ್ ಠೇವಣಿಗೆ ಸಂಬಂಧಪಟ್ಟಂತೆ ಹೊರಡಿಸಿರುವ ಸರ್ಕಾರಿ ಆಜ್ಞೆಯ ಬಗ್ಗೆ ಚರ್ಚಿಸಲು ಈ ನಿಲುವಳಿ ಸೂಚನೆಯನ್ನು ನೀಡಲಾಗಿದೆ. ತಾವು ಇದನ್ನು ನಿಯಮ 69ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದೀರಿ, ಅದಕ್ಕಾಗಿ ನಾನು ತಮಗೆ ಅಭಾರಿಯಾಗಿದ್ದೇನೆ. ಆದರೆ ಈ ವಿಷಯದ ಮಹತ್ವವನ್ನು ತಿಳಿಸಿಕೊಡಬೇಕು ಎನ್ನತಕ್ಕ ದೃಷ್ಟಿಯಿಂದ ಈ ನಿಲುವಳಿ ಸೂಚನೆಯನ್ನು ನಾವು ಕಳಿಸಿಕೊಟ್ಟಿದ್ದೆವು. ಸರ್ಕಾರ ಹೋದ ಅಧಿವೇಶನದಲ್ಲೇ ಪಂಪುಸೆಟ್ಟುಗಳ ಮೇಲೆ, ಸರ್ವ ವಿದ್ಯುತ್ ಗೃಹಗಳ ಮೇಲೆ ಮತ್ತು ಉಳಿದಂಥ ಹೆಚ್.ಟಿ. ಮತ್ತು ಎಲ್.ಟಿ. ಇವೆಲ್ಲವುದರ ಮೇಲೆ ಏನು ಹೆಚ್ಚಿನ ದರವನ್ನು ಮಾಡಿದ್ದರು ಅದರ ಬಗ್ಗೆ ಇದೇ ಸದನದಲ್ಲಿ ನಾವೆಲ್ಲರೂ ಸಹ ದೊಡ್ಡ ಚಳುವಳಿಯನ್ನು ಮಾಡಬೇಕಾದಂಥ ಪ್ರಸಂಗ ಬಂತು. ಕಾಂಗ್ರೆಸ್ ಪಕ್ಷದವರು, ಬಿ.ಜೆ.ಪಿ.ಯವರು, ವಾಟಾಳ್ ನಾಗರಾಜ್‌ರವರು, ಶ್ರೀರಾಮರೆಡ್ಡಿ ಈ ರೀತಿ ಎಲ್ಲಾ ಪಕ್ಷದವರು ಒಂದಾಗಿ ಸೇರಿ ಇಲ್ಲಿ ಧರಣಿ ಮಾಡಿದ ಮೇಲೆ ತಾವು ಕೊನೆಗೆ ಸದನದ ಸಮಿತಿಯನ್ನು ಮಾಡುವುದಕ್ಕೆ ಒಪ್ಪಿಕೊಂಡಮೇಲೆ ನಾವು ಧರಣಿಯನ್ನು ಮುಕ್ತಾಯ ಮಾಡಿದ್ದೆವು. ಸದನದ ಸಮಿತಿಯ ಶಿಫಾರಸ್ಸಿನ ಪ್ರಕಾರ ತಾವು ನಡೆದುಕೊಳ್ಳಬೇಕು ಎನ್ನತಕ್ಕ ಅಭಿಪ್ರಾಯದಿಂದ ನಮ್ಮ ಚಳುವಳಿಯನ್ನು ವಾಪಸ್ ಪಡೆದುಕೊಂಡೆವು. ಆದರೆ, ಸದನವಿಲ್ಲವೆಂದು ತಿಳಿದುಕೊಂಡು ಜಂಟಿ ಸದನದ ಸಮಿತಿಯು ವಿದ್ಯುತ್ ದರಗಳ ಬಗ್ಗೆ ಯಾವ ವರದಿಯನ್ನು ಕೊಟ್ಟಿತ್ತೋ ಅದನ್ನು ಬದಿಗೊತ್ತಿ ನಿಮ್ಮದೇ ಆದಂಥ ಹೊಸ ನಿರ್ಣಯವನ್ನು ನೀವು ಜನರ ಮೇಲೆ ಏರಿಸತಕ್ಕಂಥ ಪ್ರಯತ್ನವನ್ನು ಈ ಆರು ತಿಂಗಳಲ್ಲಿ ಮಾಡಿದ್ದೀರಿ. ಅದರಲ್ಲೂ ಇತ್ತೀಚೆಗೆ 31-12-96ಕ್ಕೆ ಒಂದು ಆಜ್ಞೆಯನ್ನು ಹೊರಡಿಸಿದ್ದೀರಿ ಮತ್ತೆ 1-2-97ಕ್ಕೆ ಒಂದು ಆಜ್ಞೆಯನ್ನು ಹೊರಡಿಸಿ ರೈತರಿಗೆ ತಾವು ಕೊಟ್ಟಂಥ ಆಶ್ವಾಸನೆ ಏನಿತ್ತು ಅದಕ್ಕೆ ವಿರುದ್ಧವಾಗಿ ರೈತರಿಗೆ ಮೋಸ ಮಾಡತಕ್ಕಂಥ ಕೆಲಸ ಮತ್ತು

ಸಾಮಾನ್ಯವಾಗಿ ಮಧ್ಯಮವರ್ಗದವರು, ಉಪಯೋಗ ಮಾಡತಕ್ಕಂಥ ಸರ್ವ ಗೃಹೋಪಯೋಗಿ ಜನರಿಗೂ ತೊಂದರೆ ಮಾಡತಕ್ಕಂಥ ಕೆಲಸ ಮಾಡಿ ಅವರ ಮೆಂಟಲ್ ಟಾರ್ಚ್‌ರ್ ಮಾಡತಕ್ಕ ರೀತಿಯಲ್ಲಿ ನಿಮ್ಮ ಆಜ್ಞೆಯನ್ನು ಹೊರಡಿಸಿದ್ದೀರಿ.

(ಅಧ್ಯಕ್ಷರ ಪೀಠದಲ್ಲಿ ಉಪಾಧ್ಯಕ್ಷರು ಸ್ಥಾನವನ್ನು ಅಲಂಕರಿಸಿದರು)

ಅಂದರೆ ಇದನ್ನು contempt of House ಎಂದು ನಾನು ಹೇಳಬೇಕಾಗುತ್ತದೆ. ಏಕೆಂದರೆ, ಜಂಟಿ ಸದನದ ಸಮಿತಿಯು ಮಾಡಿದ್ದ ಶಿಫಾರಸ್ಸಿಗೆ ತದ್ವಿರುದ್ಧವಾಗಿ ಕೆಲವು ಅಂಶಗಳನ್ನು ಅದರಲ್ಲಿ ಸೇರಿಸಿ ಇವತ್ತಿನ ದಿವಸ ಆ ರೀತಿ ಸರ್ಕಾರಿ ಆಜ್ಞೆಯನ್ನು ಹೊರಡಿಸಿ ರೈತರ ಮೇಲೆ, ಎ.ಇ.ಹೆಚ್. ಬಳಕೆದಾರರ ಮೇಲೆ ಮತ್ತು ಉಳಿದಂಥ ಎಲ್ಲಾ ವಿದ್ಯುತ್ ಬಳಕೆದಾರರ ಮೇಲೆ ಪೆನಾಲ್ಟಿಯನ್ನು ವಸೂಲಿ ಮಾಡಬೇಕೆಂಬ ಆಜ್ಞೆಯನ್ನು ಹೊರಡಿಸಿ ಏನು ಹಠವನ್ನು ಇಟ್ಟುಕೊಂಡಿದ್ದೀರಿ ಮತ್ತು ರಾಜ್ಯದ ಮೂಲೆ ಮೂಲೆಯ ಪ್ರತಿಯೊಂದು ಊರಿನಲ್ಲೂ ಲಕ್ಷಾಂತರ ನೋಟಿಸ್‌ನ್ನು ಕೊಟ್ಟಿದ್ದಾರೆ, ಆ ರೀತಿ ನೋಟೀಸ್ ಕೊಡಲು ಪೇಪರ್ ಸಾಕಾಯಿತೇನೋ ಗೊತ್ತಿಲ್ಲ, ಕೆಲವು ಕಡೆಗಳಲ್ಲಿ ಬಿಳಿ ಹಾಳೆಯ ಮೇಲೆ ನೋಟೀಸ್ ಕೊಟ್ಟಿದ್ದಾರೆ. ಈ ರೀತಿಯಾಗಿ ಸರ್ಕಾರ ಸದನದಲ್ಲಿ ಆದಂಥ ನಿರ್ಣಯಕ್ಕೆ ತದ್ವಿರುದ್ಧವಾಗಿ ಹೋಗಬೇಕೆಂದರೆ ಇದು ಕಂಟೆಂಪ್ಟ್ ಆಗುತ್ತದೆ. ಅದರ ಬಗ್ಗೆ ನಾನು ಪರಿಶೀಲಿಸಿ, ಅದರ ಬಗ್ಗೆ ನಿಯಮಗಳನ್ನು ನೋಡಿಕೊಂಡು ಅದರ ಬಗ್ಗೆ ಕಂಟೆಂಪ್ಟ್ ಅಪ್ಲಿಕೇಷನ್ ತಮ್ಮ ಮುಂದೆ ಕೊಡ ಬೇಕಾಗುತ್ತದೆ. ಏಕೆಂದರೆ, ಈ ರೀತಿ ನಾವು ಹೋದರೆ ಆ ಸದನಕ್ಕೇನು ಮಹತ್ವವಿರುವುದಿಲ್ಲ. ನಮ್ಮ ಮುಂದೆ ಹೇಳುವುದು ಒಂದು, ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡುವುದು ಒಂದು, ಆನಂತರ ತಾವು ಸರ್ಕಾರಿ ಆದೇಶವನ್ನು ಹೊರಡಿಸುವುದು ಮತ್ತೊಂದು. ತಾವು ಇಂದು ಏನು ಮಾಡಿದ್ದೀರಿ, ಜಂಟಿ ಸದನದ ಸಮಿತಿಯು ಕೊಟ್ಟಂಥ ವರದಿಯ ಶಿಫಾರಸ್ಸಿನಂತೆ "Report on power tariff revision by Joint Committee Constituted by both the Houses of Legislature'

ಇದರಲ್ಲಿ ಏನು ಶಿಫಾರಸ್ಸು ಇದೆ? ಅದನ್ನು ನಾನು ಓದುತ್ತೇನೆ. ಮೊದಲನೆಯದಾಗಿ "The Joint House Committee after detailed discussions recommends unanimously the revised power tariff w.e.f. 1st July 1996 as furnished in Annexure-IV. The reduction in revenue consequent on proposed revised power tariff is Rs. 243 crores per annum. on account of this KEB will get additional annual revenue of Rs. 630 crores. As per the recommendation of revised tariff, the % increase in power tariff revision for various category of installations is between 13% and 40%.

CATEGORY		PERCENTAGE OF INCREASE
Domestic Lighting	:	36.18
A.E.H	:	26.88
Commerical Lighting	:	19.33
L.T. Industries	:	24.00
H.T. Industries	:	40.33
Street lights	:	29.85
Lift Irrigation Schemes (RT)	:	13.64

Government may release subsidy to the KEB every year for subsidised power supply being given to I.P. sets and Bhagya Jyothi/Kuteera Jyothi installations".

ಈ ಶಿಫಾರಸ್ಸಿನ ಪ್ರಕಾರ ತಾವು ಕೆ.ಇ.ಬಿ.ಗೆ ಸಿಬ್ಸಿಡಿಯನ್ನು ಕೊಡಬೇಕು. ಕೆ.ಇ.ಬಿ. ಯಲ್ಲಾಗತಕ್ಕಂಥ ಸುಮಾರು ಸಾವಿರಕೋಟಿ ರೂಪಾಯಿ ನಷ್ಟದ ಬಗ್ಗೆ 1995-96ರ ಆಡಿಟ್/ವರದಿಯಲ್ಲಿಯೇ ಸ್ಪಷ್ಟವಾಗಿ ಹೇಳಿದ್ದಾರೆ. ಆ ಸಾವಿರ ಕೋಟಿ ನಷ್ಟ ಯಾರ್ಯಾರಿಂದ ಆಗಿದೆ ಎಂಬ ಬಗ್ಗೆ ತಮ್ಮ ಗಮನಕ್ಕೆ ತರುವುದಾದರೆ, ಆ ನಷ್ಟದಲ್ಲಿ ಡಿಫಾಲ್ಟರ್ಸ್ ಯಾರಿದ್ದಾರೆಂದರೆ ಸೆಂಟ್ರಲ್ ಅಂಡ್ ಸ್ಟೇಟ್ ಗೌನ್‌ಮೆಂಟ್ ಅಂಡರ್ ಟೇಕಿಂಗ್ಸ್ 187 ಕೋಟಿ, ಲೋಕಲ್ ಬಾಡೀಸ್ 157 ಕೋಟಿ, ಕರ್ನಾಟಕ ಅರ್ಬನ್ ಡೆವಲಪ್‌ಮೆಂಟ್ ಅಂಡ್ ವಾಟರ್ ಸಪ್ಲೈ 78 ಕೋಟಿ, ಬೆಂಗಳೂರು ವಾಟರ್ ಸಪ್ಲೈ ಅಂಡ್ ಸಿವಿರೇಜ್ 77 ಕೋಟಿ, ವಿ.ಐ.ಎಸ್.ಎಲ್. ಸ್ಟೀಲ್ ಪ್ಲಾಂಟ್ 4 ಕೋಟಿ, ಇತರೆ 143 ಕೋಟಿ, ಕೋರ್ಟ್‌ನಲ್ಲಿ ಇರತಕ್ಕ ಕೇಸ್‌ಗಳಿಂದ 53 ಕೋಟಿ ರೂಪಾಯಿ. ರೈತರ ಪಂಪುಸೆಟ್ಟಿನ ಮೇಲೆ ಇರತಕ್ಕದ್ದು ಕೇವಲ 67 ಕೋಟಿ ಮಾತ್ರ. ಅಂದರೆ 768 ಕೋಟಿಯಲ್ಲಿ ಕೇವಲ 67 ಕೋಟಿ ಬಾಕಿ ಇರತಕ್ಕ ರೈತರದ್ದು ಎಂದು ಕೆ.ಇ.ಬಿ. ನವರ ಭಾವನೆ. ಕೆ.ಇ.ಬಿ. ನವರು ಕೊಟ್ಟಂಥ ಅಂಕಿಅಂಶಗಳ ಪ್ರಕಾರವೇ 67 ಕೋಟಿ ಬಾಕಿ ಇರತಕ್ಕ ರೈತ ಸಮುದಾಯಕ್ಕೆ ಕೊಡಲಿ ಪೆಟ್ಟನ್ನು ಹಾಕತಕ್ಕ ಪ್ರಯತ್ನವನ್ನು, ಅಂಥ ಕರಾಳಾ ಆಜ್ಞೆಯನ್ನು ಹೊರಡಿಸಿ ಮಾಡುತ್ತಿದ್ದೀರಿ. ಅಂದರೆ ತಮಗೆ, ತಮ್ಮ ಸರ್ಕಾರಕ್ಕೆ ರೈತರ ಬಗ್ಗೆ ಎಷ್ಟರ ಮಟ್ಟಿಗೆ ಕಾಳಜಿ ಇದೆಯೆಂಬುದು ಗೊತ್ತಾಗುತ್ತದೆ. ಸುಮಾರು ಸಾವಿರ ಕೋಟಿ ನಷ್ಟವಾಗುತ್ತಿರತಕ್ಕದ್ದನ್ನು ತಾವು ಭರ್ತಿ ಮಾಡಬೇಕೆಂದಿದ್ದರೆ ಆ ನಷ್ಟವನ್ನು ಭರಿಸಬೇಕು ಎನ್ನತಕ್ಕ ಹಠ, ಚಲ ಇದ್ದರೆ ತಾವು ಮೊದಲು 700 ಕೋಟಿ ರೂಪಾಯಿ ಹಣವನ್ನು ವಸೂಲಿ ಮಾಡಿ. 700 ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡಲಿಕ್ಕೆ ನಿಮ್ಮ ಕೈಯಿಂದ ಆಗದೇ ಹೋದಾಗ ಪುನಃ ಈ ಜಾಯಿಂಟ್ ಸೆಲೆಕ್ಟ್ ಸಮಿತಿಯೊಳಗೆ ಏನು ರೆಕ್ಮಂಡೇಷನ್ ಇತ್ತು

ಅದನ್ನು ನೋಡಿ. ಈ ರೆಕ್ಮಂಡೇಷನ್ ನಾವೂ ನೀವೂ ಕೂಡಿಯೇ ಮಾಡಿದ್ದು. ಸಮಿತಿ ಮಾಡಿದ ರೆಕ್ಮಂಡೇಷನ್‌ನಲ್ಲಿ ಏನಿದೆ ಎಂದರೆ, "The Government may release subsidy to the KEB every year for subsidised power supply being given to IP sets and Bhagyajyothi and Kutirajyothi installations."

ಈ 60 ಕೋಟಿ ರೂಪಾಯಿಗಳನ್ನು ನೀವು ಕೊಡಬೇಕಾಗಿತ್ತು. ಅದನ್ನು ಇವತ್ತಿನ ದಿವಸ ಬದಿಗಿಟ್ಟಿರುವುದು ಸರಿಯಲ್ಲ. ಮಾನ್ಯ ಉಪಾಧ್ಯಕ್ಷರೇ, ತಮಗೆ ಗೊತ್ತಿದೆ, ಅನೇಕ ಸಾರಿ ರೈತರು ನೇರವಾಗಿ ಅಪ್ಲಿಕೇಷನ್ ಕೊಟ್ಟು ಕನೆಕ್ಷನ್ ತೆಗೆದುಕೊಳ್ಳುತ್ತಾರೆ. ಆದರೆ ಅಲ್ಲಿರತಕ್ಕ ಲೆಡ್ಜರ್‌ನಲ್ಲಿ ಅಥವಾ ದಾಖಲೆಗಳಲ್ಲಿ ಅದು ಎಂಟ್ರಿ ಆಗುವುದಿಲ್ಲ. ಆಗ ಅದನ್ನು ಅನ್‌ಅಥರೈಸ್ಡ್ ಎಂದು ಟ್ರೀಟ್ ಮಾಡುತ್ತಾರೆ. ಈ ರೀತಿ ಅಕ್ರಮ ಸಂಪರ್ಕ ತೆಗೆದುಕೊಂಡಿರುವುದನ್ನು ಸಕ್ರಮಗೊಳಿಸಲು ದಂಡವಾಗಿ ರೈತರು ಸುಮಾರು 10-13 ಸಾವಿರ ರೂಪಾಯಿಗಳನ್ನು ಕೊಡಬೇಕು ಎಂದರೆ ಇದು ಯಾವ ನ್ಯಾಯ? ರೈತರಿಗೆ ಒಂದು ಕಡೆ ನಾವು ಪುಕ್ಕಟೆಯಾಗಿ ವಿದ್ಯುತ್ ಕೊಡಬೇಕೆಂದು ಹೇಳಿ ಇಲ್ಲಿಯವರೆಗೆ ಪ್ರಯತ್ನ ಮಾಡಿದ್ದೇವೆ. ಹಿಂದಿನ ಸರ್ಕಾರಗಳು ಸುಮಾರು 10 ಹಾರ್ಸ್‌ಪವರ್‌ವರೆಗೆ ವಿದ್ಯುತ್ ಅನ್ನು ಪುಕ್ಕಟೆಯಾಗಿ ಕೊಟ್ಟಿದ್ದೆವು. ನಂತರ ನಿಮ್ಮ ಸರ್ಕಾರ ಬಂದಾಗ ಪರ್ ಹಾರ್ಸ್ ಪವರ್ 300 ರೂಪಾಯಿಗಳನ್ನು ನಿಗದಿಪಡಿಸಿದ್ದಿರಿ. ಆದರೆ ಅದನ್ನು ಇಳಿಸಬೇಕೆಂದು ನಾವೆಲ್ಲರೂ ಈ ಸದನದಲ್ಲಿ ಹಠ ಹಿಡಿದಾಗ ಅದನ್ನು 100 ರೂಪಾಯಿಗಳಿಗೆ ಇಳಿಸಿದಿರಿ. ಆದರೆ 100 ರೂಪಾಯಿಗಳಿಗೆ ನಿದಗಿಪಡಿಸಿದ್ದರೂ ಕೂಡ ನಿಮಗೆ ಸಮಾಧಾನ ಆಗಲಿಲ್ಲ. ಪುನಃ ರೈತರ ರಕ್ತ ಹೀರುವುದಕ್ಕಾಗಿ ಇವತ್ತಿನ ದಿವಸ ಹಿಂದಿನ ಬಾಗಿಲಿನಿಂದ ಹಣ ವಸೂಲಿ ಮಾಡತಕ್ಕ ಪ್ರಯತ್ನವನ್ನು ನಡೆಸಿದ್ದೀರಿ. ಅದಕ್ಕಾಗಿ ನಾನು ನಿಮ್ಮನ್ನು ಕೇಳುತ್ತೇನೆ, ನಿಮ್ಮಲ್ಲಿ ಶಕ್ತಿ ಇದ್ದರೆ, ತಾಕತ್ತು ಇದ್ದರೆ ಸೆಂಟ್ರಲ್ ಮತ್ತು ಸ್ಟೇಟ್ ಗೌರ್ನ್‌ಮೆಂಟ್ ಅಂಡರ್ ಟೇಕಿಂಗ್ಸ್, ವಾಟರ್ ಸಪ್ಲೈ ಬೋರ್ಡ್, ವಿ.ಎಸ್.ಐ.ಎಲ್. ಇತ್ಯಾದಿಯವರಿಂದ ಬಾಕಿ ಇರುವ ಸುಮಾರು 700 ಕೋಟಿ ರೂಪಾಯಿಗಳನ್ನು ವಸೂಲು ಮಾಡಬೇಕಾಗಿತ್ತು. ಆದರೆ ನೀವು ಅದನ್ನು ಮಾಡದೇ ಬರೀ 62 ಕೋಟಿ ರೂಪಾಯಿಗಳಿಗೋಸ್ಕರ ಇವತ್ತಿನ ದಿವಸ ರೈತರನ್ನು ಬಲಿ ಕೊಡತಕ್ಕದ್ದು ಮತ್ತು ಅವರಿಗೆ ತೊಂದರೆ ಕೊಡತಕ್ಕ ಪ್ರಯತ್ನವನ್ನು ನೀವು ಮಾಡುತ್ತಿದ್ದೀರಿ. ಇದರಿಂದ ರೈತರ ಬಗ್ಗೆ ನಿಮಗೆ ಎಷ್ಟರಮಟ್ಟಿಗೆ ಕಾಳಜಿ ಇದೆ ಎಂಬುದನ್ನು ಈ ಸರ್ಕಾರಿ ಆಜ್ಞೆ ಸೂಚಿಸುತ್ತದೆ. ಆ ಆಜ್ಞೆಯನ್ನು ಸರ್ಕಾರ ತಕ್ಷಣ ವಾಪಸ್ ತೆಗೆದುಕೊಳ್ಳಬೇಕು. ರೈತರು ಅಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ತೆಗೆದುಕೊಂಡಿದ್ದಾರೆ ಎಂಬ ಭಾವನೆಯಿಂದ ಸರ್ಕಾರ ಅದನ್ನು ಸಕ್ರಮಗೊಳಿಸಲು 13 ಸಾವಿರ ರೂಪಾಯಿಗಳನ್ನು ದಂಡವಾಗಿ ವಸೂಲು ಮಾಡಲು ಆದೇಶಿಸಿರುವ ಸರ್ಕಾರಿ ಆಜ್ಞೆಯನ್ನು ತಾವು ತಕ್ಷಣ ವಾಪಸ್ ತೆಗೆದುಕೊಳ್ಳಬೇಕು. ಯಥಾಸ್ಥಿತಿಯಲ್ಲಿದ್ದಂತೆ ಅವುಗಳನ್ನು ರೆಗ್ಯೂಲರೈಸ್ ಮಾಡಿಕೊಡಬೇಕು. ನಾವು ಅನೇಕ ಸಾರಿ ಸರ್ಕಾರಿ ಭೂಮಿಗಳನ್ನು ಒತ್ತುವರಿ ಮಾಡಿಕೊಂಡು ಅನಧಿಕೃತವಾಗಿ ಯಾರು ಕಲ್ಟಿವೇಟ್ ಮಾಡಿರುತ್ತಾರೋ ಅಂತಹವರಿಗೇ ಆ ಆಸ್ತಿಯನ್ನೇ ನೀಡಿರುವಾಗ, ಇಲ್ಲಿ ಒಂದು ಕನೆಕ್ಷನ್ ಕೊಡುವುದಕ್ಕೂ ಕೂಡ ನಿಮಗೆ ಯೋಗ್ಯತೆ ಇಲ್ಲ, ಅಂದರೆ ನಾವು ಸರ್ಕಾರಕ್ಕೆ ಏನು ಹೇಳಬೇಕು? ಇವತ್ತು ಎಲ್ಲಿ ದೊಡ್ಡ ದೊಡ್ಡ ಕಾಫಿ ಪ್ಲಾಂಟರ್‌ಗಳು ತಮ್ಮ ಜಮೀನಿನ ಸುತ್ತಮುತ್ತ

ಇರತಕ್ಕ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಸಾಗುವಳಿ ಮಾಡುತ್ತಿದ್ದಾರೋ ಅವುಗಳನ್ನು ಮತ್ತು ಜಮೀನುಗಳ ಮಧ್ಯದಲ್ಲಿ ಇರತಕ್ಕ ಕೆಲವು ಪಾಂಡ್‌ಗಳನ್ನು ಮತ್ತು ಟ್ಯಾಂಕ್‌ಗಳನ್ನು ಕಾಫಿ ಪ್ಲಾಂಟರ್‌ಗಳಿಗೇ ಕೊಡಬೇಕೆಂಬ ಯೋಚನೆಯನ್ನು ಸರ್ಕಾರ ಮಾಡುತ್ತಿದೆ. ಅನೇಕ ಸರ್ಕಾರಿ ಭೂಮಿಗಳನ್ನು ನಾವು ರೆಗ್ಯೂಲರೈಸ್ ಮಾಡಬಹುದು ಅಥವಾ ಬಡವರಿಗೆ ಸೈಟುಗಳನ್ನು ಕೊಡಬಹುದು. ಆದರೆ ಇಲ್ಲಿ ಸುಮಾರು 11 ಲಕ್ಷ ಪಂಪ್‌ಸೆಟ್ ಇರತಕ್ಕ ರೈತರಿಗೆ ಕನೆಕ್ಷನ್ ಕೊಡುವುದಕ್ಕೆ ತಾವು ಈ ರೀತಿಯಾಗಿ ತೊಂದರೆ ಕೊಟ್ಟರೆ ನಾವು ಈ ಸರ್ಕಾರಕ್ಕೆ ರೈತರ ಸರ್ಕಾರವೆಂದು ಹೇಳೋಣವೇ? ಅಥವಾ ರೈತರ ಪರ ನೀವು ಇದ್ದೀರಾ ಎಂದು ಹೇಳೋಣವೇ? ರೈತರ ಬಗ್ಗೆ ತಮಗೆ ಕಾಳಜಿ ಇದೆ ಎಂದು ನಾವು ಹೇಳೋಣವೇ? ನಾವು ನಿಮ್ಮ ಸರ್ಕಾರಕ್ಕೆ ಏನೆಂದು ಹೇಳೋಣ? ಯಾವ ಮಾತಿನಿಂದ ಬೈದರೆ ನಿಮಗೆ ಅರ್ಥವಾಗುತ್ತದೋ ಹೇಳಿ, ಆ ಮಾತಿನಲ್ಲೇ ನಿಮ್ಮನ್ನು ಬೈಯುತ್ತೇವೆ. ಇಷ್ಟು ಫ್ಯಾಕ್ಟ್ಸ್ ನಿಮ್ಮ ಗಮನಕ್ಕೆ ತಂದಿದ್ದರೂ ಪ್ರಯೋಜನವಾಗಿಲ್ಲ. ಈ ಜಂಟಿ ಸದನ ಸಮಿತಿ ವರದಿಯನ್ನು ನಾವೂ ನೀವೂ ಸೇರಿಯೇ ತಯಾರಿಸಿದ್ದು. ಈ ವರೆವಿಗೂ ನಿಮ್ಮ ಸರ್ಕಾರ ಮಹತ್ವ ಕೊಟ್ಟಿಲ್ಲ ಎಂದರೆ ಸಮಿತಿ ಬಗ್ಗೆ ನಿಮಗಿರುವ ಗೌರವ ಎಷ್ಟರಮಟ್ಟಿನದು ಎಂಬುದು ಇದರಿಂದ ಗೊತ್ತಾಗುತ್ತದೆ. ವಿಧಾನ ಸಭೆಯಲ್ಲಿ ನಡೆಯತಕ್ಕ ಚರ್ಚೆಗೂ ನೀವು ಗೌರವ ಕೊಡುವುದಿಲ್ಲ. ನಾವೂ ನೀವೂ ಸೇರಿ ನೀಡಿರತಕ್ಕ ಜಂಟಿ ಸದನ ಸಮಿತಿಯ ವರದಿಯ ಬಗೆಗೂ ನಿಮಗೆ ಗೌರವ ಇಲ್ಲ ನಂಬಿಕೆ ಇಲ್ಲ ಎನ್ನುವುದಾದರೆ ನಾವು ಇನ್ನು ಎಲ್ಲಿಗೆ ಹೋಗಬೇಕು? ನೀವೇ ವಿಧಾನ ಸೌಧಕ್ಕೆ ನುಗ್ಗಿ ಯಾರು ಈ ರೀತಿಯ ಆಜ್ಞೆಗಳನ್ನು ಮಾಡುತ್ತಿದ್ದಾರೆ ಅವರನ್ನು ನೇರವಾಗಿ ನೋಡಿಕೊಳ್ಳಿ ಎಂದು ರೈತರಿಗೆ ಹೇಳಬೇಕಾಗುತ್ತದೆ. ಲಾಲಿಸ್‌ನೆಸ್ ಕ್ರಿಯೇಟ್ ಮಾಡತಕ್ಕ ಪರಿಸ್ಥಿತಿ ಉಂಟು ಮಾಡಿ ಎಂದು ರೈತರಿಗೆ ಕರೆ ಕೊಡಬೇಕಾಗುತ್ತದೆ. ನಾವು ಅವರಿಗೆ ಹೇಳಬೇಕಾಗುತ್ತದೆ, ನಾವೂ ಬಹಳಷ್ಟು ಚರ್ಚೆ ಮಾಡುತ್ತಿದ್ದೇವೆ, ಸರ್ಕಾರಕ್ಕೆ ಹೇಳುವಷ್ಟು ಹೇಳುತ್ತಿದ್ದೇವೆ, ಆದರೆ ಸರ್ಕಾರಕ್ಕೆ ನಮ್ಮ ಮೇಲೆ ನಂಬಿಕೆ ಇಲ್ಲ, ಸರ್ಕಾರ ಕೊಟ್ಟಂತಹ ಮಾತನ್ನೂ ಕೂಡ ಉಳಿಸಿಕೊಳ್ಳುತ್ತಿಲ್ಲ, ಆದಕ್ಕಾಗಿ ಕಾನೂನನ್ನು ನಿಮ್ಮ ಕೈಗೆ ನೀವೇ ತೆಗೆದುಕೊಂಡು ಈ ರೀತಿಯಾಗಿ ಮಾಡಿ ಎಂದು ಜನರನ್ನು ಪ್ರಚೋದನೆ ಮಾಡತಕ್ಕ ಅನಿವಾರ್ಯ ಸಂದರ್ಭ ಉದ್ಭವವಾಗುತ್ತದೆ ಎನ್ನತಕ್ಕ ಮಾತನ್ನು ನಾನು ಇವತ್ತಿನ ದಿವಸ ಹೇಳಬೇಕಾಗುತ್ತದೆ. ಈ ರೀತಿಯಾಗಿ ಕಾನೂನನ್ನು ಮುರಿಯತಕ್ಕ ಪರಿಸ್ಥಿತಿಗೆ ಅವಕಾಶ ಮಾಡಿಕೊಡಬೇಡಿ. ನಾವೂ ನೀವೂ ಸೇರಿ ತಯಾರಿಸಿರುವಂತಹ ಈ ಜಂಟಿ ಸದನದ ಸಮಿತಿಯ ವರದಿಯನ್ನು ಕಡೆಗಣಿಸತಕ್ಕ ಕಾರ್ಯವನ್ನು ಸರ್ಕಾರ ಮಾಡಬಾರದು ಎಂದು ನಾನು ಇವತ್ತಿನ ದಿವಸ ಸರ್ಕಾರಕ್ಕೆ ಒಂದು ಎಚ್ಚರಿಕೆ ಕೊಡುತ್ತಿದ್ದೇನೆ, ಒಂದು ವೇಳೆ ನೀವು ಈ ಸರ್ಕಾರಿ ಆಜ್ಞೆಯನ್ನು ಜಾರಿಗೊಳಿಸಿದರೆ ನಾವು ಈ ಸದನದ ಹೊರಗೆ ಚಳುವಳಿ ಮಾಡಬೇಕಾಗುತ್ತದೆ ಮತ್ತು ಈ ಸದನದಲ್ಲೂ ಕೂಡ ಎಲ್ಲಾ ಪಕ್ಷದ ಸದಸ್ಯರು ಒಟ್ಟಾಗಿ ಸೇರಿ ಕೊನೆಯವರೆಗೆ ಹೋರಾಟ ಮಾಡುತ್ತೇವೆ, ಎಂಬ ಮಾತನ್ನು ನಾನು ಇವತ್ತು ಹೇಳಬೇಕಾಗುತ್ತದೆ. ಇವತ್ತು ನೀವು ನಂಬಿಕೆ ಇರತಕ್ಕವರು. ಯಾವುದೋ ಒಂದು ಬದಲಾವಣೆಯನ್ನು ಮಾಡಬೇಕು ಅಂದರೆ, ನಾವು ಹಿಂದೆ ಈ ರೀತಿ ರೆಕ್ಮಂಡೇಷನ್ ಮಾಡಿದ್ದೇವೆ, ಇದರಲ್ಲಿ ಸ್ವಲ್ಪ ತಪ್ಪಾಗಿದೆ ಪುನಃ ನಾವು ಸೇರೋಣ ಎಂದು ಒಂದು ಕಡೆ ಸೇರಿಸಿ ನೀವು ಚರ್ಚೆ ಮಾಡಿ ಏನಾದರೊಂದು ಹೊಸ

ಬದಲಾವಣೆ ಮಾಡಿದ್ದರೆ ಅದಕ್ಕೆ ಅರ್ಥ ಇರುತ್ತಿತ್ತು. ಆದರೆ ತಾವು ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೇ ಏಕಾ ಏಕಿ ನಿಮ್ಮ ಮನಸ್ಸಿಗೆ ಬಂದಂತೆ ವರ್ತಿಸಿದ್ದೀರಿ. ಈ ಸರ್ಕಾರಿ ಆಜ್ಞೆಯನ್ನು ದಿನಾಂಕ 2-1-97 ರಂದು, ಸುಮಾರು ಒಂದು ತಿಂಗಳ ಹಿಂದೆ ಹೊರಡಿಸಿದ್ದೀರಿ. ಸದ್ಯದಲ್ಲೇ ವಿಧಾನ ಮಂಡಲದ ಉಭಯ ಸದನಗಳು ಸಮಾವೇಶಗೊಳ್ಳಲಿದ್ದ ಸಂದರ್ಭದಲ್ಲಿ ಅಲ್ಲಿಯವರೆಗೆ ತಾವು ಕಾಯಬೇಕಾಗಿತ್ತು. ಏಕೆ ಇಷ್ಟು ಆತುರ ಮಾಡಿದಿರಿ? ನನಗಂತೂ ಅರ್ಥವಾಗುತ್ತಿಲ್ಲ. ಜಂಟಿ ಸದನ ಸಮಿತಿಯ ಎರಡನೇ ಶಿಫಾರಸ್ಸು ಏನಿದೆ ಎಂದರೆ "Government may direct KEB to conduct special drive to recover the outstanding revenue arrears within six months. Government of Karnataka may clear dues outstanding against urban water supply." ಇದು ಅವರ ಮೂರನೇ ಶಿಫಾರಸ್ಸು.

ಜಂಟಿ ಸದನ ಸಮಿತಿಯ ಮೇಲ್ಕಂಡ ಶಿಫಾರಸ್ಸಿನ ಪ್ರಕಾರ ತಾವು ಬಾಕಿ ಇರುವ ಹಣ ಎಷ್ಟು ಕಲೆಕ್ಟ್ ಮಾಡಿದ್ದೀರಿ? ಎಷ್ಟು ಹಣ ರೆಕವರಿ ಮಾಡಿದ್ದೀರಿ? ಈ ಬಗ್ಗೆ ಸರ್ಕಾರ ಇಲ್ಲಿ ಹೇಳಬೇಕು. ಸದನ ಸಮಿತಿ ಶಿಫಾರಸ್ಸುಗಳನ್ನು ಜಾರಿಗೊಳಿಸಲು ಆರು ತಿಂಗಳ ಗಡುವು ನೀಡಲಾಗಿತ್ತು. ಇಂದಿಗೆ ಆ ಗಡುವೂ ಮುಕ್ತಾಯವಾಗಿದೆ. ಈ ಗಡುವು ಮುಗಿದ ಮೇಲೆ ನೀವು ಎಷ್ಟು ಹಣ ಕಲೆಕ್ಟ್ ಮಾಡಿದ್ದೀರಿ? ಎಷ್ಟು ಔಟ್ ಸ್ಟ್ಯಾಂಡಿಂಗ್ ಡ್ಯೂಸ್ ತಾವು ಕಲೆಕ್ಟ್ ಮಾಡಿದ್ದೀರಿ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು. ಇವತ್ತು ನಾನೇನು ಹೇಳುತ್ತಿದ್ದೇನೆ, ಇದೆಲ್ಲಾ ನಾವೂ ನೀವೂ ಸೇರಿ ತಯಾರು ಮಾಡಿರುವಂತಹ ಜಂಟಿ ಸದನ ಸಮಿತಿಯ ಪುಟ 28ರಲ್ಲೇ ಇದೆ. ಸದನ ಸಮಿತಿ ವರದಿಯ 4ನೇ ಶಿಫಾರಸ್ಸು ಏನಿದೆ ಅಂದರೆ, "Government may direct KEB to examine the possibility of stopping benefit of extending the free power supply to an extent of 200 to 400 units per month to their employees or at least to bring it down."

ಈ ಶಿಫಾರಸ್ಸನ್ನು ನೀವು ಜಾರಿಗೊಳಿಸಿದ್ದಿರೋ? ನಿಮ್ಮ ಎಂಪ್ಲಾಯೀಸ್‌ಗೆ ಪುಕ್ಕಟೆಯಾಗಿ ಕೊಡತಕ್ಕ ವಿದ್ಯುತ್ ಅನ್ನು ನಿಲ್ಲಿಸತಕ್ಕ ತಾಕತ್ತು ನಿಮಗಿಲ್ಲ. ಆದರೆ ರೈತರಿಗೆ ಕೊಡತಕ್ಕ ಸವಲತ್ತುಗಳನ್ನು ನಿಲ್ಲಿಸತಕ್ಕ ಕೆಲಸ ಮಾಡಿ, ಇವತ್ತು ಅವರಿಂದ 13 ಸಾವಿರ ರೂಪಾಯಿಗಳನ್ನು ದಂಡವಾಗಿ ವಸೂಲು ಮಾಡಲು ಸರ್ಕಾರಿ ಆಜ್ಞೆ ಹೊರಡಿಸಿದ್ದೀರಿ. ಈ ಸರ್ಕಾರಕ್ಕೆ ನಾನೇನು ಹೇಳಬೇಕು? ನಾಚಿಕೆ ಇದೆ ಎಂದು ಹೇಳಬೇಕೇ? ಸರ್ಕಾರ ಇದೆ ಎಂದು ಹೇಳಬೇಕೇ? ಸತ್ತಿದೆ ಎಂದು ಹೇಳಬೇಕೇ? ನಾನೇನೂ ಹೊಸದಾಗಿ ಹೇಳುತ್ತಿಲ್ಲ. ಈ ಜಂಟಿ ಸದನ ಸಮಿತಿ ನೀಡಿರತಕ್ಕ ವರದಿಯಲ್ಲಿನ ಶಿಫಾರಸ್ಸುಗಳನ್ನಷ್ಟೇ ನಾನಿಲ್ಲಿ ಹೇಳುತ್ತಿದ್ದೇನೆ. ಈ ಸಮಿತಿಯ ಶಿಫಾರಸ್ಸಿಗೆ ನೀವು ಗೌರವ ಕೊಡುತ್ತಿಲ್ಲ. ಔಟ್ ಸ್ಟ್ಯಾಂಡಿಂಗ್ ಡ್ಯೂಸ್ ನೀವು ರೆಕವರಿ ಮಾಡುತ್ತಿಲ್ಲ ಕೆ.ಇ.ಬಿ.ಯ 43 ಸಾವಿರ ಎಂಪ್ಲಾಯೀಸ್‌ಗೆ ಕೊಡತಕ್ಕ ಉಚಿತ ವಿದ್ಯುತ್ ಸರಬರಾಜನ್ನು ನಿಲ್ಲಿಸಿ ಎಂದು ಸಮಿತಿ ಶಿಫಾರಸ್ಸು ಮಾಡಿದ್ದರೆ ಅದನ್ನು ನೀವು ಇವತ್ತು ಜಾರಿಗೆ ತಂದಿಲ್ಲ. ಆದರೆ ರೈತರಿಗೆ ವಿದ್ಯುತ್

ಸರಬರಾಜು ನಿಲ್ಲಿಸಿದ್ದೀರಿ. ರೈತರ ಪಂಪ್‌ಸೆಟ್ಟುಗಳಿಗೆ ನೀಡಿದ್ದ ಕನೆಕ್ಷನ್‌ಗಳನ್ನು ಡಿಸ್ಕನೆಕ್ಟ್ ಮಾಡುತ್ತಿದ್ದೀರಿ. ಅವರಿಂದ ಅರಿಯರ್ಸ್ ಕಲೆಕ್ಟ್ ಮಾಡುತ್ತಿದ್ದೀರಿ, ಅವರಿಗೆ ನೋಟೀಸ್‌ಗಳನ್ನು ಕಳುಹಿಸುತ್ತಿದ್ದೀರಿ. 1995ರಲ್ಲಿ ಕೊಟ್ಟಂತಹ ಕನೆಕ್ಷನ್ಸ್‌ಗೆ ಇವತ್ತಿನ ದಿವಸ ನೀವು ದಂಡ ಕಟ್ಟಿ ರೆಗ್ಯೂಲರೈಸ್ ಮಾಡಿಕೊಳ್ಳಿ ಎಂದು ನೋಟೀಸ್‌ಗಳನ್ನು ನೀಡುತ್ತಿದ್ದೀರಿ. ಇದರಿಂದಾಗಿ ರೈತರ ಬಗ್ಗೆ ನಿಮಗೆ ಎಷ್ಟರಮಟ್ಟಿಗೆ ಕಾಳಜಿ ಇದೆ ಎಂಬುದು ಸ್ಪಷ್ಟವಾಗುತ್ತದೆ. ನಾನೇನೂ ಹೊಸದಾಗಿ ಹೇಳುತ್ತಿಲ್ಲ, ನೀವೂ ನಾವೂ ಸೇರಿ ನೀಡಿದ ಜಂಟಿ ಸದನ ಸಮಿತಿಯ ವರದಿಯಲ್ಲಿರುವುದನ್ನೇ ನಾನಿಲ್ಲಿ ಹೇಳುತ್ತಿದ್ದೇನೆ. ವರದಿಯ 5ನೇ ಶಿಫಾರಸ್ಸು ಏನಿದೆ ಅಂದರೆ,

"Government may direct KEB to fix energy meters to the I.P. sets in order to assess the correct consumption of energy by the agricultural sector.';

ಜಂಟಿ ಸದನ ಸಮಿತಿಯ ವರದಿಯಲ್ಲಿನ ಮೊದಲ ನಾಲ್ಕು ಶಿಫಾರಸ್ಸುಗಳನ್ನು ಬಿಟ್ಟು ಐದನೇ ಶಿಫಾರಸ್ಸನ್ನು ಮಾತ್ರ ನೀವು ಜಾರಿಗೆ ತಂದಿರಿ, ಯಾವುದು ಕೇವಲ 63 ಕೋಟಿ ರೂಪಾಯಿಗಳ ಬಾಕಿ ಇತ್ತು, ಅದರ ಬಗೆಗಿನ ಶಿಫಾರಸ್ಸನ್ನು ಮಾತ್ರ ಜಾರಿಗೆ ತಂದಿರಿ. ಆದರೆ 700 ಕೋಟಿ ರೂಪಾಯಿಗಳು ಬಾಕಿ ಇರತಕ್ಕಂತಹವರನ್ನು ಮುಟ್ಟತಕ್ಕ ಧೈರ್ಯ ನೀವು ತೋರಲಿಲ್ಲ. ಈ ರೀತಿಯಾಗಿ ತಾರತಮ್ಯ ಮಾಡತಕ್ಕದ್ದು ಮತ್ತು ರೈತ ಸಮಾಜವನ್ನು, ರೈತ ಸಮುದಾಯವನ್ನು ತುಳಿಯತಕ್ಕ ಕೆಲಸ ತಾವು ಪ್ರತ್ಯಕ್ಷವಾಗಿ ಮಾಡುತ್ತಿದ್ದೀರಿ ಎಂಬ ಆರೋಪವನ್ನು ನಾನಿವತ್ತು ನಿಮ್ಮ ಮೇಲೆ ಚಾರ್ಜ್ ಮಾಡಬೇಕಾಗುತ್ತದೆ. ಮತ್ತು ಅಲ್ಲಿರತಕ್ಕವರಿಗೆ ಈ ರೀತಿಯ ಸರ್ಕಾರಿ ಆಜ್ಞೆ ಹೊರಡಿಸಲು ವಿವೇಚನೆ ಇದಯೋ ಇಲ್ಲವೋ? ನೀವು ಕನಿಷ್ಟ ಪಕ್ಷ ಮೊದಲ 4-5 ಶಿಫಾರಸ್ಸುಗಳನ್ನು ಒಪ್ಪಿಕೊಂಡು ನಂತರ ಎಲ್ಲಾ ರೆಮಿಡೀಸ್ ಎಗ್ಸಾಸ್ಟ್ ಆದಮೇಲೆ, ಕಡೆಗೆ ಕೆ.ಇ.ಬಿ. ಪ್ರಾಫಿಟ್‌ನಲ್ಲಿ ನಡೆಯುತ್ತಿಲ್ಲ, ನೋ ಪ್ರಾಫಿಟ್, ನೋ ಲಾಸ್‌ನಲ್ಲೂ ನಡೆಯುತ್ತಿಲ್ಲ ಅದಕ್ಕಾಗಿ ಇವತ್ತಿನ ದಿವಸ ನಾವು ಈ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ ಎನ್ನತಕ್ಕಂತಹ ಮಾತನ್ನು ನೀವು ಹೇಳಿದ್ದರೆ ಯಾರಾದರೂ ಒಪ್ಪಬಹುದಾಗಿತ್ತು. ಅದೂ ಕೂಡ ಇಲ್ಲ. ಹೀಗೆ ಸುಮಾರು 13 ರೆಕಮಂಡೇಷನ್ಸ್‌ನಲ್ಲಿ ನೀವು ಯಾವುದು ಕೂಡ ಇಂಪ್ಲಿಮೆಂಟ್ ಮಾಡಿಲ್ಲ. ಬರೀ ಅಗ್ರಿಕಲ್ಚರಲ್ ಸೆಕ್ಟಾರ್‌ಗೆ ಸಂಬಂಧಪಟ್ಟಿದ್ದು ಮಾತ್ರ ಈ ಜಿ.ಓ.ನಲ್ಲಿ ಅಳವಡಿಸಿ ಇವತ್ತಿನ ದಿವಸ ಆ ಮೀಟರ್ ಫಿಕ್ಸ್ ಮಾಡಬೇಕು, ಅನ್-ಅಥರೈಸ್ಡ್ ಕನೆಕ್ಷನ್ಸ್ ಎಲ್ಲಾ ರೆಗ್ಯುಲರೈಸ್ ಮಾಡಬೇಕು. ಇವು ಅನ್-ಅಥರೈಸ್ಡ್ ಅಲ್ಲೇ ಅಲ್ಲ, ಆರ್.ಆರ್.ನಲ್ಲಿ ಮತ್ತು ರೆಕಾರ್ಡ್ಸ್‌ನಲ್ಲಿ ಬಂದಿಲ್ಲವೆಂದು ತಿಳಿದುಕೊಂಡು ಅದನ್ನು ಅನ್-ಅಥರೈಸ್ಡ್ ಎಂದು ಟ್ರೀಟ್ ಮಾಡಿಕೊಂಡು ಇವತ್ತಿನ ದಿವಸ ವಿತ್ ಫೈನ್ ಕಲೆಕ್ಟ್ ಮಾಡುತ್ತಿದ್ದಾರೆ. " The Government may direct the Karnataka Electricity Board to reduce O and M expenses and Establishment Charges." ನಾನು ಕೇಳುತ್ತೇನೆ, ಎಷ್ಟು ಹಣ ತಾವು ರೆಡ್ಯೂಸ್ ಮಾಡಿದ್ದೀರಿ, ಇವತ್ತಿನ ದಿವಸ ಆಪರೇಷನ್ ಅಂಡ್ ಮೇಂಟನೆನ್ಸ್‌ನಲ್ಲಿ ಎಷ್ಟು ಹಣ ಉಳಿತಾಯ ಮಾಡಿದ್ದೀರಿ, ಎಷ್ಟು ಖರ್ಚು ಕಡಿಮೆಯಾಯಿತು ಇವೆಲ್ಲಾ ಮೆಶರ್ಸ್ ನೀವು

ತೆಗೆದುಕೊಳ್ಳಬೇಕಾಗಿತ್ತು. ಈ ಮೆಶರ್ಸ್ ತೆಗೆದುಕೊಳ್ಳದೆ ನಮ್ಮ ಜಾಯಿಂಟ್ ಸೆಲೆಕ್ಟ್ ಕಮಿಟಿ, ನಮ್ಮ ಹೌಸ್ ಕಮಿಟಿ ರೆಕಮಂಡೇಷನ್ಸ್‌ನ್ನು ನಿರ್ಲಕ್ಷ್ಯ ಮಾಡಿ ತೆಗೆದುಕೊಂಡಂತಹ ನಿರ್ಣಯಕ್ಕೆ ಬದ್ಧರಾಗದೆ ಅದಕ್ಕೆ ತದ್ವಿರುದ್ಧವಾಗಿ ತಾವು ಇವತ್ತಿನ ದಿವಸ ಈ ನಿರ್ಣಯವನ್ನು ತೆಗೆದುಕೊಂಡು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೀರಿ. ಈ ಸರ್ಕಾರಕ್ಕೆ ಮನಸ್ಸಿಲ್ಲ ಈ ರೆಕಮಂಡೇಷನ್ಸ್ ಅವರು ನೋಡಿದ್ದಾರೋ ಅಥವ ಇಲ್ಲವೋ ಎಂದು ಹೇಳಬೇಕಾಗುತ್ತದೆ. ತಾವು ಆಜ್ಞೆ ಮಾಡುವಾಗ ನಮ್ಮ ರೆಕಮಂಡೇಷನ್ಸ್ ಆದರೂ ನೀವು ನೋಡಬೇಕಾಗಿತ್ತು. ನಾವು ನೀವು ಏನು ಒಪ್ಪಿದ್ದೇವೆಂದು ಹೇಳಬೇಕಾಗುತ್ತದೆ. ಆದರೆ ಅದೂ ಕೂಡ ಇಲ್ಲ. ಇನ್ನೊಂದು "The Government may direct K.P.C. to improve PLF for running of Thermal Generating Stations." ಇದು 60-70 ಕೆಲವು ಸಲ 75 ಪರ್ಸೆಂಟ್ ಮೇಲೆ ಹೋಗೇ ಇಲ್ಲ. ಎಫಿಷಿಯನ್ಸಿ ಇಂಪ್ರೂವ್‌ಮೆಂಟ್ 100 ಪರ್ಸೆಂಟ್ ಬರಬೇಕು, 100 ಪರ್ಸೆಂಟ್ ಬರುವುದಿಲ್ಲ. 75-80 ಪರ್ಸೆಂಟ್ ಬಗ್ಗೆ ಅವರ ಚಿಂತನೆಗಳೇ ಬೇರೆ. ಎಲ್ಲೆಲ್ಲಿ ಅವರ ಎಫಿಷಿಯೆನ್ಸಿ ಇದೆ, ಎಲ್ಲೆಲ್ಲಿ ಅವರು ನೇರವಾಗಿ ಕೆಲಸ ಮಾಡಬಹುದು ಇದನ್ನು ಬಿಟ್ಟು ಇವರ ಡೈರೆಕ್ಷನ್ ಏನೆಂದರೆ, ಐ.ಪಿ. ಸೆಟ್ ಮೇಲೆ ಆಲ್ ಎಲೆಕ್ಟ್ರಿಕ್ ಹೋಮ್ಸ್ ಮತ್ತು ಸಣ್ಣವರ ಮೇಲೆ ದೊಡ್ಡವರ ಮೇಲೆ ಇವರ ಕಣ್ಣು ಇಲ್ಲ. ದೊಡ್ಡವರ ಮುಲಾಜಿನಲ್ಲಿ ಈ ಸರ್ಕಾರ ನಡೆದಿದೆ ಎನ್ನತಕ್ಕಂತಹ ಮಾತನ್ನು ಹೇಳಬೇಕಾಗುತ್ತದೆ. ಇಲ್ಲದೆ ಹೋದರೆ 700 ಕೋಟಿ ರೂಪಾಯಿ ರೆಕವರಿ ಮಾಡುವುದಕ್ಕೆ ಏಕೆ ಸಾಧ್ಯವಿಲ್ಲ? ನೀವು ಬಿಗಿ ಆದ ಮೇಲೆ ಎಲ್ಲರಿಗೂ ಬಿಗಿ ಆಗಬೇಕು. ಬರೀ ರೈತರಿಗೆ ಬಿಗಿ ಆಗಬೇಕೇ? ನಮ್ಮ ಕಾಂಟ್ರಿಬ್ಯೂಷನ್ ಹೇಳಿಕೊಂಡು ಎಷ್ಟು ವರ್ಷ ಹೋಗುತ್ತೀರಿ? ನಮ್ಮ ಕಾಂಟ್ರಿಬ್ಯೂಷನ್ ಇದೆ ಎಂದರೆ ನಾವು ಪುಕ್ಕಟೆ ಕೊಟ್ಟಿದ್ದೇವೆ. ಪುಕ್ಕಟೆ ಕೊಟ್ಟಿದ್ದಾದರೂ ಅಟ್‌ಲೀಸ್ಟ್ ಎಷ್ಟು ಸಾಲ ಇದೆ ಎಂದು ಹೇಳಿ, ನಾವು ಪುಕ್ಕಟೆ ಕೊಟ್ಟಿದ್ದು ನೀವು ರೈತರ ಬಳಿ ತೆಗೆದುಕೊಂಡು 700 ಕೋಟಿ ರೂಪಾಯಿ ದೊಡ್ಡ ದೊಡ್ಡ ಶ್ರೀಮಂತರ ಮೇಲೆ ಬಾಕಿ ಇದೆಯಲ್ಲ ಅದನ್ನು ವಸೂಲು ಮಾಡುತ್ತಿಲ್ಲ. ದೊಡ್ಡವರಿಂದ ಏನಾದರೂ ಕಾಂಟ್ರಿಬ್ಯೂಷನ್ ಬರುತ್ತಾ ಇದೆಯೇ?

ಶ್ರೀ ಸಿದ್ಧರಾಮಯ್ಯ:- ಮಾನ್ಯ ಉಪಾಧ್ಯಕ್ಷರೆ, 700 ಕೋಟಿ ರೂಪಾಯಿ ಎರಡು ವರ್ಷಗಳಿಂದ ಉಳಿದುಕೊಂಡು ಬಂದಿದ್ದು ಅಲ್ಲ. ಇವರ ಕಾಲದಿಂದ ಉಳಿದುಕೊಂಡು ಬಂದ ಅರಿಯರ್ಸ್. ನಾವು ಎರಡು ವರ್ಷಗಳಿಂದ ಶ್ರೀಮಂತರ ಪರವಾಗಿದ್ದೇವೆ, ಅವರ ಜೊತೆ ಶಾಮೀಲಾಗಿದ್ದೇವೆ ಎಂದರೆ ನೀವು ಆಗಿಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಮ್ಮ ಸರ್ಕಾರ ಶ್ರೀಮಂತರ ಪರ ಇರಲಿಲ್ಲ, ನಾವು ಬಡವರ ಪರ ಇದ್ದೇವೆಂದು ಹೇಳುವುದಕ್ಕೆ ಒಂದೇ ಉದಾಹರಣೆ ಸಾಕು. ಐ.ಪಿ.ಸೆಟ್. ಈ ರೆಕಮಂಡೇಷನ್ ಯಾರದು ಎಂದು ಹೇಳಬೇಕು. ಜಂಟಿ ಸದನದ ಮತ್ತು ಈ ಸದನದ ರೆಕಮಂಡೇಷನ್. ಈ ಸದನದ ರೆಕಮಂಡೇಷನ್ ನೀವು ಧಿಕ್ಕರಿಸಿ ಇಂತಹ ಕರಾಳ ಆಜ್ಞೆಯನ್ನು ತಂದು ಇವತ್ತು ಈ ಸದನದ ಮುಂದೆ ಇಟ್ಟರೆ ನೀವು ಬಡವರ ಪರ ಇದ್ದೀರಿ ಎಂದು ಹೇಳಬೇಕಾ? ರೈತರ ಪರ ಇದ್ದೀರಿ ಎಂದು ಹೇಳಬೇಕಾ? ಇವತ್ತಿನ ದಿವಸ 13 ರೆಕಮಂಡೇಷನ್ಸ್‌ನಲ್ಲಿ ನೀವು

ಯಾವುದನ್ನು ಮಾಡಿದ್ದೀರಿ? 13 ರೆಕಮಂಡೇಷನ್ ಮಾಡಿ ಒಂದು ವೇಳೆ ತೃಪ್ತಿ ಪಡದೆ ಹೋಗಿದ್ದರೆ ಕೊನೆಗೆ ಇದೇ ಸದನದಲ್ಲಿ ಬಂದು ನಾವೆಲ್ಲರೂ ಸೇರಿ ಇದು ಸರಿ ಹೋಗುವುದಿಲ್ಲ ಎಂದು ಹೇಳಬಹುದಿತ್ತು ಕೊನೆಗೆ ಯಾವ ರೀತಿ ಬಗೆಹರಿಸಬೇಕೆಂಬ ಬಗ್ಗೆ ನಮ್ಮ ಮಾತನ್ನು ನೀವು ಕೇಳಿದ್ದರೆ ನಾವು ತಿಳಿಸುತ್ತಿದ್ದೆವು. ಈ ಸದನದಲ್ಲಿ ಎಲ್ಲ ಸದಸ್ಯರೂ ನಿಮ್ಮ ಹಾಗೆ ಈ ರಾಜ್ಯವನ್ನು ನಡೆಸಬೇಕು, ರೈತರಿಗೆ ಒಳ್ಳೆಯದಾಗಬೇಕು, ಇಂಡಸ್ಟ್ರೀಸ್‌ಗೆ ಒಳ್ಳೆಯದಾಗಬೇಕು, ಎಂದು ಚಿಂತನೆ ಮಾಡತಕ್ಕಂತಹವರು ಇದ್ದಾರೆ. ಇಲ್ಲಿರುವವರೆಲ್ಲಾ ವಿರೋಧ ಮಾಡಬೇಕು ಅಥವಾ ಈ ರಾಜ್ಯದ ಇಂಡಸ್ಟ್ರೀಸ್ ಎಲ್ಲಾ ಹೊರಗೆ ಹೋಗಬೇಕು, ಎಲ್ಲರ ಮನೆ ಕತ್ತಲಿರಬೇಕೆಂಬ ಭಾವನೆ ಇರುವವರು ಇಲ್ಲಿ ಯಾರೂ ಇಲ್ಲ. ನಾನು ಕೇಳುವುದು ಏನೆಂದರೆ, ನೀವು 13 ರೆಕಮಂಡೇಷನ್ಸ್‌ನಲ್ಲಿ ಯಾವುದೂ ನೋಡಲಿಲ್ಲ. ಆರನೆಯ ರೆಕಮಂಡೇಷನ್ ಏನು ಇದೆ, "The Government may direct K.E.B., to strengthen the Vigilance and Technical Audit Cell in order to increase their activity." ನಾನು ಕೇಳುವುದು ಇವೆಲ್ಲಾ ಮಾಡಲೇ ಇಲ್ಲ. ಐದನೇ ರೆಕಮಂಡೇಷನ್ "The Government may fix energy Meters to all the IP Sets in order to assess the correct consumption of energy by the agricultural sector. ಇದು ಒಂದು ಬಿಟ್ಟರೆ ಬಾಕಿ 12 ಏಕೆ ಮಾಡಲಿಲ್ಲ, ಎಂದು ಕೇಳುತ್ತಿದ್ದೇನೆ. ಅದನ್ನು ಕೇಳುವಾಗ ನಿಮಗೆ ಸಿಟ್ಟು ಬರುತ್ತದೆ ಅಂದರೆ ನಾವು ಏನು ಹೇಳುವುದು. ಸುಮಾರು 768 ಕೋಟಿ ರೂಪಾಯಿ ಐ.ಪಿ. ಸೆಟ್‌ದು ಬಾಕಿ ಇದೆ. ಅದು ರಾಂಗ್ ಅಸೆಸ್‌ಮೆಂಟ್, ಅನೇಕ ಸಾರಿ ಆಗಿತ್ತು. ಏಕೆಂದರೆ ಹಳ್ಳಿಯಲ್ಲಿ ಬಡವರು ಏನಿದ್ದಾರೆ ಅವರಿಗೆ ಗೊತ್ತಾಗುವುದಿಲ್ಲ. ಕೆಲವು ಸಲ ಪೆನಾಲ್ಟಿ ಹಾಕಿರುತ್ತಾರೆ. ಕೆಲವು ಸಾರಿ ನಿಮ್ಮ ವಿದ್ಯುಚ್ಛಕ್ತಿ ತ್ರೀಫೇಸ್ ಸರಿಯಾಗಿರುವುದಿಲ್ಲ, ಸರಬರಾಜು ಇರುವುದಿಲ್ಲ ಆ ಸಂದರ್ಭಗಳಲ್ಲಿ ನಮ್ಮ ಪಂಪ್‌ಸೆಟ್ಸ್ ಅನೇಕ ಸಾರಿ ಹಾಳಾಗಿ ಹೋಗಿವೆ. ಇಂತಹ ಪರಿಸ್ಥಿತಿಯಲ್ಲಿ ನೀವು ಇವೆಲ್ಲವನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ, ತರಾತುರಿಯಾಗಿ ಸರ್ಕಾರೀ ಆಜ್ಞೆ ಹೊರಡಿಸಿ ಹಣ ವಸೂಲು ಮಾಡುವುದು, ಸೀಸ್ ಮಾಡುವುದು, ಪೆನಾಲ್ಟಿ ಹಾಕುವುದು, ಅವರ ಮನೆ ನುಗ್ಗುವುದು ಮತ್ತು ಡಿಸ್-ಕನೆಕ್ಟ್ ಮಾಡುವುದು, ಹೀಗೆಲ್ಲ ಮಾಡುವುದು ಸರಿಯೇ? ಯಾರಿಗೆ ಅಧಿಕಾರ ಇದೆ, ಯಾರಿಗೆ ಪವರ್ ಇದೆ, ಅವರು ಫೋನ್ ಮಾಡಿದರೆ ಅವರಿಗೆ ಕನೆಕ್ಷನ್ ಕೊಡುವುದು, ಈ ರೀತಿಯಾಗಿ ನಡೆದುಕೊಂಡರೆ ನಾವು ಸರ್ಕಾರಕ್ಕೆ ಏನು ಹೇಳಬೇಕು, ಈ ಒಂದು ಸಂದರ್ಭದಲ್ಲಿ ರೈತರ ಮತ್ತು ಮಧ್ಯಮ ವರ್ಗದ ಹಿತದೃಷ್ಟಿಯಿಂದ ಈಗಾಗಲೇ ತಾವು ಏನು 1-2-97 ಮತ್ತು 31-12-96 ರಂದು ಆಜ್ಞೆಗಳನ್ನು ಹೊರಡಿಸಿದ್ದೀರಿ ಅವುಗಳನ್ನು ತಾವು ವಾಪಸ್ ತೆಗೆದುಕೊಳ್ಳಬೇಕು. ಏಕೆಂದರೆ ಇದೇ ಸದನದಲ್ಲಿ ನಾವು ಮತ್ತೆ ಚರ್ಚೆ ಮಾಡಿದ ಮೇಲೆ ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಲೆಜಿಸ್ಲೇಚರ್‌ನ ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಂದೆ ಪುನಃ ಇದನ್ನು ತೆಗೆದುಕೊಂಡು ಹೋಗಿ ಚರ್ಚೆ ಮಾಡಿ ಎಷ್ಟರ ಮಟ್ಟಿಗೆ ನಾವು ಇದರಲ್ಲಿ ಸಹಾಯ ಮಾಡಬಹುದು ಎನ್ನತಕ್ಕಂಥದ್ದರ ಬಗ್ಗೆ ನಾವು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಈಗ ಸಧ್ಯಕ್ಕೆ ತಾವು ಇಶ್ಯೂ ಮಾಡಿರತಕ್ಕ ಎರಡೂ ಸರ್ಕ್ಯುಲರ್‌ಗಳನ್ನು ವಿತ್‌ಡ್ರಾ ಮಾಡಬೇಕೆಂದು ತಮ್ಮ ಮುಖಾಂತರ ಅವರಿಗೆ ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ಎಲ್ಲೆಲ್ಲಿ ಪೆನಾಲ್ಟಿ ಹಾಕಿ ರೆಕವರಿ

ಮಾಡುತ್ತಿದ್ದಾರೆ, ಅದು ಸ್ಟಾಪ್ ಮಾಡುವುದಕ್ಕೆ ತಕ್ಷಣ ತಾವು ಆಜ್ಞೆ ಕೊಡಬೇಕು. till a fresh order is issued. ಹೊಸದಾಗಿ ನಾವೆಲ್ಲರೂ ಕೂಡಿ ಚರ್ಚೆ ಮಾಡಿ ಒಂದು ನಿರ್ಣಯಕ್ಕೆ ಬರುವವರೆಗೆ ಈ ಆಜ್ಞೆಗಳನ್ನು ತಾವು ರದ್ದು ಪಡಿಸಬೇಕು, ರೆಕವರಿ ಸ್ಟಾಪ್ ಮಾಡಬೇಕು. ಆ ಹಿಂದೆ ಕಾನ್‌ಸ್ಟಿಟ್ಯೂಟ್ ಆಗಿದ್ದಂತಹ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಪುನಃ ಈ ಕೆಲಸವನ್ನು ಒಪ್ಪಿಸಿ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಹೇಳಿ ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಏಕೆಂದರೆ ಇದು ಸುಮಾರು 10,44,918 ಪಂಪ್‌ಸೆಟ್‌ಗಳಿಗೆ ಸಂಬಂಧಪಟ್ಟಿದ್ದು, ನಾವು ಜನಸಂಖ್ಯೆ ಆಧಾರದ ಮೇಲೆ ಮಾತನಾಡುವುದಾದರೆ ಸುಮಾರು ಒಂದೂವರೆ ಕೋಟಿ ಜನಸಂಖ್ಯೆಗೆ ಸಂಬಂಧಪಟ್ಟಿದ್ದು. ಅದಲ್ಲದೆ ಅಗ್ರಿಕಲ್ಚರಲ್ ಪ್ರೊಡಕ್ಷನ್ ನಮಗೂ ನಿಮಗೂ ಬೇಕಾಗಿರುವಂಥಾದ್ದು. ಅದರ ಮೇಲೆ ನಾವೆಲ್ಲರೂ ಜೀವನ ಮಾಡುವುದು. ಅಲ್ಲಿ ರೈತ ಸರಿಯಾಗಿ ಬೆಳೆದರೆ ದೇಶಕ್ಕೆ ಮತ್ತು ರಾಜ್ಯಕ್ಕೆ ಆಹಾರ ಕೊಡುವುದಕ್ಕಾಗುತ್ತದೆ. ಅಂತಹ ಸಂದರ್ಭದಲ್ಲಿ ನೀವು ಅವರ ಮೇಲೆ ಒಂದು ವಿಶೇಷವಾಗಿ ದೃಷ್ಟಿ ಹಾಕಿ, ಕಣ್ಣು ಹಾಕಿ, ಇವತ್ತು ಕೆಂಡವನ್ನು ಕಾರಿದ್ದೀರಿ. ಅದನ್ನು ತಕ್ಷಣ ವಾಪಸ್ ತೆಗೆದುಕೊಳ್ಳಬೇಕು. ಆದೇ ರೀತಿಯಾಗಿ ಸುಮಾರು 10 ಲಕ್ಷ ಎ.ಇ.ಹೆಚ್. ಕನೆಕ್ಷನ್ ಇದೆ. ಅದರ ಬಗ್ಗೆ ಸಹ ಈ ಒಂದು ಹೊಸ ಆಜ್ಞೆಯನ್ನು ಹೊರಡಿಸಿ ಹೆಚ್ಚಿಗೆ ಭಾರವನ್ನು ಹಾಕತಕ್ಕಂತಹ ಪ್ರಯತ್ನ ಮಾಡಿದ್ದೀರಿ. ಇವತ್ತು ಫೇಸ್‌ಗೆ 1,300 ಎಲೆಕ್ಟ್ರಾನಿಕ್ ಮೀಟರ್ಸ್ ಬಗ್ಗೆ ಮೂರು ಫೇಸ್‌ಗೆ 3,000, three-phase with CTS-Tamper Proof Box-5570-11KV. ದೊಡ್ಡ ದೊಡ್ಡ ಇಂಡಸ್ಟ್ರೀಯಲಿಸ್ಟ್ ಇದ್ದರೆ ಅವರಿಗೆ ಕೊಡುವ ಶಕ್ತಿ ಇರುತ್ತದೆ, ಅವರ ಬಳಿ ವಸೂಲು ಮಾಡಿ.

1.40 ಪಿಎಂ.

ಆದರೆ ಇದು ಎಲ್ಲವನ್ನೂ ಕೂಡ ಒಂದರಿಂದ ಮೂರು, ಎಲೆಕ್ಟ್ರಾನಿಕ್ ಮೀಟರ್ ಫಿಕ್ಸ್ ಮಾಡತಕ್ಕಂಥದ್ದು, ಅನ್ ಆಥರೈಸ್ಡ್ ಪಂಪಸೆಟ್ಸ್‌ಗೆ ರೆಗ್ಯೂಲರೈಸ್ ಮಾಡತಕ್ಕಂಥದ್ದು, ಮತ್ತು ಆಲ್ ಎಲೆಕ್ಟ್ರಿಕ್ ಹೋಮ್ಸ್ ಬಗ್ಗೆ ಈಗ ತಾವು ಏನು ನಿರ್ಣಯ ತೆಗೆದುಕೊಂಡಿದ್ದೀರಿ ಅದನ್ನು ತಕ್ಷಣ ವಿತ್‌ಡ್ರಾ ಮಾಡಬೇಕು. ರಿಕವರಿ ಕೂಡ ಸಧ್ಯಕ್ಕೆ ನಿಲ್ಲಿಸಬೇಕು. ಮತ್ತೆ ಚರ್ಚೆ ಆಗಿ ಬಂದ ಮೇಲೆ ರಿಕವರಿ ಪ್ರಾರಂಭವಾಗಲಿ ಎಲ್ಲರ ಒಪ್ಪಿಗೆಯ ಮೇರೆಗೆ ಮಾಡತಕ್ಕಂಥದ್ದು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಜಾಯಿಂಟ್ ಸೆಲೆಕ್ಟ್ ಕಮಿಟಿಯ ತೀರ್ಮಾನದ ಮೇರೆಗೆ ಮಾಡಬೇಕೆಂದು ನನ್ನ ಅಭಿಪ್ರಾಯ ಇದೆ. ದಯವಿಟ್ಟು ಸರ್ಕಾರದವರು ಇದನ್ನು ಒಪ್ಪಿ ಈಗ ಹೊರಡಿಸಿರತಕ್ಕ ಆಜ್ಞೆಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ:- ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಕಳುಹಿಸಿದಂಥ ನಿರ್ಣಯ ಏನು ಇತ್ತು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೆ, ಈಗ ನಲವತ್ತೈದು ನಿಮಿಷ ಸಭೆಯನ್ನು ಮುಂದಕ್ಕೆ ಹಾಕುತ್ತೀರೋ?

ಉಪಾಧ್ಯಕ್ಷರು:- ಅವರು ಹದಿನೈದು ಇಪ್ಪತ್ತು ನಿಮಿಷದಲ್ಲಿ ಮುಗಿಸುತ್ತಾರೆ. ನಂತರ ಮುಂದೂಡೋಣ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಅಧ್ಯಕ್ಷರೆ, ಎರಡೂವರೆವರೆಗೆ ಮುಂದೂಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಅಧ್ಯಕ್ಷರೆ, ಎರಡೂವರೆಗೆ ಪುನಃ ಪ್ರಾರಂಭ ಮಾಡಿ.

ಉಪಾಧ್ಯಕ್ಷರು:- ಎರಡೂವರೆಗೆ ಯಾರು ಬರುವುದಿಲ್ಲ ಮತ್ತೆ ಮೂರು ಗಂಟೆಯಾಗುತ್ತದೆ. ಅವರು ಹದಿನೈದು ನಿಮಿಷದಲ್ಲಿ ಮುಗಿಸುತ್ತಾರೆ. ಆನಂತರ ಮುಂದೂಡೋಣ.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ಶ್ರೀರಾಮಕೃಷ್ಣರವರ ವಿಚಾರ ನನಗೆ ಗೊತ್ತು. ಅವರು ಕಾಲಕಾಲಕ್ಕೆ ಊಟ ಮಾಡತಕ್ಕಂಥವರು. ಮಾತನಾಡುತ್ತಾ ಅವರು ಬಹಳ ತೊಂದರೆಗೆ ಸಿಕ್ಕಿಕೊಳ್ಳುತ್ತಾರೆ. ಅವರು ಹದಿನೈದು ನಿಮಿಷದಲ್ಲಿ ಮುಗಿಸುವುದಿಲ್ಲ.

ಉಪಾಧ್ಯಕ್ಷರು:- ಈಗ ಸಭೆಯು ಮುಕ್ತಾಯವಾಗಿ ಮಧ್ಯಾಹ್ನ 2.30 ನಿಮಿಷಕ್ಕೆ ಸೇರುವುದು.

(ಸದನವು ಮಧ್ಯಾಹ್ನ 1.42 ನಿಮಿಷಕ್ಕೆ ಮುಕ್ತಾಗೊಂಡು ಪುನಃ 2.30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(ವಿಧಾನ ಸಭೆಯು ಮಧ್ಯಾಹ್ನ 3-00 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಮಾಮನಿ) ಪೀಠದಲ್ಲಿದ್ದರು)

8. ನಿಯಮ 69ರ ಮೇರೆಗೆ

ವಿಷಯ:- ಅನಧಿಕೃತ ಕೃಷಿ ಪಂಪುಸೆಟ್ಟುಗಳಿಗೆ ಬಳಸುತ್ತಿದ್ದ ವಿದ್ಯುತ್ತನ್ನು ಸಕ್ರಮ-ಗೊಳುಸುವುದು ಹಾಗು ವಿದ್ಯುತ್ ಮೀಟರ್ ಶೇವಣಿ ಕುರಿತು.

ಉಪಾಧ್ಯಕ್ಷರು:- ಮಾನ್ಯ ರಾಮಕೃಷ್ಣ ಅವರೇ, ತಾವು ಮಾತನಾಡಿ.

\+ ಶ್ರೀ ವೈ. ರಾಮಕೃಷ್ಣ (ಆನೇಕಲ್):- ನಾನು ಮಾತನಾಡುತ್ತೇನೆ. ಆದರೆ ಸಂಬಂಧಪಟ್ಟವರು ಬರಲಿ.

ಉಪಾಧ್ಯಕ್ಷರು:- ಬರುತ್ತಾರೆ, ತಾವು ಮಾತನಾಡಲಿಕ್ಕೆ ಪ್ರಾರಂಭ ಮಾಡಿ.

ಶ್ರೀ ವೈ. ರಾಮಕೃಷ್ಣ:- ಅವರು ಬರಲಿ. ನಾನು ಆಕ್ಷೇಪಣೆ ಮಾಡುತ್ತಿಲ್ಲ.

ಉಪಾಧ್ಯಕ್ಷರು:- ಸಂಬಂಧಪಟ್ಟ ಮಂತ್ರಿಗಳಾದ ದರ್ಶನಾಪುರ್ ಇದ್ದಾರೆ.

ಶ್ರೀ ವೈ. ರಾಮಕೃಷ್ಣ:- ವಿಷಯದ ಮಹತ್ವ ಜಾಸ್ತಿ ಇದೆ. ಇದು ಕೋಟ್ಯಾಂತರ ಜನರಿಗೆ ಸಂಬಂಧಪಟ್ಟಿದ್ದು. ಇದಕ್ಕೆ ಆದ್ಯತೆ ಕೊಟ್ಟು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿರುವುದನ್ನು ರೂಲ್ 93ರ ಕೆಳಗೆ ತಂದು ಇಷ್ಟು ಸೀರಿಯಸ್ಸಾಗಿ ಬಹಳ ಅರ್ಜೆಂಟಾಗಿ ಡಿಸ್ಕಸ್ ಮಾಡುವ ಸಂದರ್ಭದಲ್ಲಿ ಜವಾಬ್ದಾರಿ ಹೊತ್ತಿರತಕ್ಕ ಮುಖ್ಯಮಂತ್ರಿಗಳು ಇರಬೇಕಾಗಿತ್ತು ಎಂದು ನನ್ನ ಆಕ್ಷೇಪಣೆ, ಅವರು ಬರಲಿ. ಇದನ್ನು ಯಾರು ಮಾಡಿದ್ದು? ಎಲೆಕ್ಟ್ರಿಸಿಟಿ ಮಂತ್ರಿಗಳು? ಅವರು

ಇರಬೇಕು ತಾನೆ? ಗೌರ್ನಮೆಂಟ್ ಆರ್ಡರ್ ನೀವು ಮಾಡಿದ್ದೀರಾ? ಗೌರ್ನಮೆಂಟ್ ಆರ್ಡರ್ ಜವಾಬ್ದಾರಿ ನೀವು ತೆಗೆದುಕೊಳ್ಳುತ್ತೀರಾ? ಹಾಗಾದರೆ ನಾನು ಒಂದು ಪ್ರಶ್ನೆ ಕೇಳುತ್ತೇನೆ. ಸ್ವಾಮಿ.

ಉಪಾಧ್ಯಕ್ಷರು:- ವಿಷಯಕ್ಕೆ ಬನ್ನಿ.

ಶ್ರೀ ವೈ. ರಾಮಕೃಷ್ಣ:- ವಿಷಯಕ್ಕೆ ಬರುವುದಕ್ಕಿಂತ ಮುಂಚೆ ಫಂಡಮೆಂಟಲ್ ಇಷ್ಯೂ ಬಗ್ಗೆ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು:- ವಿಷಯಕ್ಕೆ ಬನ್ನಿ. ಸುಮ್ಮನೆ ಟೈಮ್ ಏತಕ್ಕೆ ವೇಸ್ಟ್ ಮಾಡುವುದು? ಅನೇಕ ಜನರು ಮಾತನಾಡುವವರಿದ್ದಾರೆ.

ಶ್ರೀ ವೈ. ರಾಮಕೃಷ್ಣ:- ನಾನು ಮಾತನಾಡುತ್ತಾ ಇದ್ದೇನಲ್ಲ ಸ್ವಾಮಿ. ಸುಮ್ಮನೆ ನಾನು ಹೇಳುತ್ತಿಲ್ಲ. ವಿಷಯದ ಘನತೆಯನ್ನು ಕಾಪಾಡಬೇಕಾದರೆ ಅವರು ಇರಬೇಕಾಗುತ್ತದೆ.

ಉಪಾಧ್ಯಕ್ಷರು:- ಸಂಬಂಧಪಟ್ಟ ಮಂತ್ರಿಗಳಿದ್ದಾರೆ, ತಾವು ಮಾತನಾಡಿ.

ಶ್ರೀ ವೈ. ರಾಮಕೃಷ್ಣ:- ನಿಜವಾಗಿ ಇದು ಬಹಳ ದುಃಖ ತರತಕ್ಕ ವಿಚಾರ.

ಉಪಾಧ್ಯಕ್ಷರು:- ದಯವಿಟ್ಟು ತಾವು ಮಾತನಾಡಿ, ಮಂತ್ರಿಗಳಿದ್ದಾರೆ. ಅವರು ನೋಟ್ ಮಾಡಿಕೊಳ್ಳುತ್ತಾರೆ.

ಶ್ರೀ ವೈ. ರಾಮಕೃಷ್ಣ:- ಸ್ವಾಮಿ, ನಾನೇ ನನ್ನ ಹೆಸರಿನಲ್ಲಿ ನೋಟೀಸ್ ಕಳುಹಿಸಿದ್ದೆ. " I hereby give my notice of intention to move Adjournment Motion for the purpose of discussing definite matter of urgent public importance." ಇದರಲ್ಲಿ ವಿಷಯ ಇಷ್ಟು ಬರೆದಿದ್ದೆ. ಹಳೇ ವಿದ್ಯುತ್ ಮೀಟರನ್ನು ಬದಲಾಯಿಸುವ ಹಾಗೂ ವಿದ್ಯುತ್ ಅಭಾವದ ಬಗ್ಗೆ. ಈಗ ಹಳೇ ವಿದ್ಯುತ್ ಮೀಟರನ್ನು ಬದಲಾಯಿಸಿ ಎಲೆಕ್ಟ್ರಾನಿಕ್ ಮೀಟರನ್ನು ಹಾಕುವುದು. ಹೈಟೆನ್‌ಷನ್ ಬಳಕೆದಾರರಿಂದ ತಲಾ 13,000 ರೂಪಾಯಿಗಳಂತೆ ಮತ್ತೆ ಎ.ಇ.ಹೆಚ್. ಬಳಕೆದಾರರಿಂದ 1,300 ರೂಪಾಯಿಗಳಂತೆ ಮುಂಗಡ ವಸೂಲು ಮಾಡಲು ತೀರ್ಮಾನಿಸಿದ್ದು ವಿದ್ಯುಚ್ಛಕ್ತಿ ಮಂಡಳಿ ತನ್ನ ಅದಕ್ಷತೆಯಿಂದ ಅನುಭವಿಸುತ್ತಿರುವ ನಷ್ಟವನ್ನು ಬಡ ಬಳಕೆದಾರರ ಮೇಲೆ ಏರಿಸುವುದು ಖಂಡನಾರ್ಯವಾದುದು. ನಾನು ಇದನ್ನು ಖಂಡಿಸುತ್ತೇನೆ. ವಿದ್ಯುತ್ ಅಭಾವದಿಂದ ರೈತರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಹಾಗೂ ವಿಧಾನ ಸಭೆಯ ಜಂಟಿ ಸದನ ಸಮಿತಿ ವಿದ್ಯುತ್ ದರ ಏರಿಸಿದಾಗ ಒಂದು ವರದಿಯನ್ನು ನೀಡಿದ ನಂತರವೂ ವಿದ್ಯುತ್ ದರವನ್ನು ಪರಿಷ್ಕರಿಸಿ ರೈತರಿಗೂ ಸೇರಿದಂತೆ ಎಲ್ಲಾ ಗ್ರಾಹಕರ ಮೇಲೆ ದರ ಹೆಚ್ಚಳ ಮಾಡಿತು. ಆದ್ದರಿಂದ ರಾಜ್ಯ ಸರ್ಕಾರದ ಈ ನೀತಿಯ ಬಗ್ಗೆ ನಿಯಮ 60ರ ಪ್ರಕಾರ ಚರ್ಚೆಗೆ ತೆಗೆದುಕೊಳ್ಳಬೇಕೆಂಬುದು ನನ್ನ ನಿಲುವಳಿ ಸೂಚನೆಯ ಸಾರಾಂಶ. ಈ ಒಂದು ನಿಲುವಳಿ ಸೂಚನೆ ತರುವುದಕ್ಕಿಂತ ಮುಂಚೆ ಒಂದೆರಡು ಮಾತುಗಳನ್ನು ನಾನು ಆಡುವುದಕ್ಕೆ ಇಚ್ಛೆಪಡುತ್ತೇನೆ. ನಾನು ಸನ್ಮಾನ್ಯ ಶ್ರೀ ಗುಂಡೂರಾಯರ ಕ್ಯಾಬಿನೆಟ್‌ನಲ್ಲಿ ಕಾನೂನು ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಆ ಸಂದರ್ಭದಲ್ಲಿ ಬಡರೈತರಿಗೆ ಉಚಿತವಾಗಿ ವಿದ್ಯುಚ್ಛಕ್ತಿ ಕೊಡಬೇಕೆಂದು ಹೆಚ್ಚಿನ

ಪಾತ್ರ ವಹಿಸಿರುವವರಲ್ಲಿ ನಾನೂ ಒಬ್ಬ. 1980ನೇ ಇಸವಿಯಲ್ಲಿ ಅಂದಿನ ದಿನಗಳನ್ನು ನಾನು ನೆನೆಸಿಕೊಂಡು 1997ರಲ್ಲಿ ಇಂಥ ಎರಡು ಆರ್ಡರ್‌ಗಳನ್ನು ನೋಡಿದಾಗ ನನ್ನ ಮನಸ್ಸಿಗೆ ಏನಾಗಿದೆ ಎಂದರೆ ನನ್ನ ಆಪ್ತ ಸ್ನೇಹಿತರು ಅಥವಾ ನನ್ನ ಮನೆಯವರು ಯಾರೋ ಒಬ್ಬರು ನನ್ನನ್ನು ಬಿಟ್ಟುಹೋಗಿದ್ದರೆ ಎಷ್ಟು ದುಃಖವಾಗುತ್ತಿತ್ತೋ ಅಷ್ಟೇ ದುಃಖ ಇವತ್ತು ಆಗುತ್ತಿದೆ. ಯಾರದು ಸಬ್ಜೆಕ್ಟ್? ಸಬ್ಜೆಕ್ಟ್ ಅನ್ನದಾತನದು. ಅವನು ಸುಖವಾಗಿರಬೇಕು, ಚೆನ್ನಾಗಿರಬೇಕು. ಯಾವ ಘನ ಉದ್ದೇಶದಿಂದ 17 ವರ್ಷದ ಹಿಂದೆ ರೈತರಿಗೆ ಉಚಿತವಾಗಿ ವಿದ್ಯುಚ್ಛಕ್ತಿಯನ್ನು ಕೊಟ್ಟು ಬೆಳೆಯನ್ನು ಬೆಳೆಯುವುದಕ್ಕೆ ಪ್ರೋತ್ಸಾಹ ಕೊಟ್ಟೆವೋ ಅದೇ ಮನುಷ್ಯ ಇಷ್ಟಿಷ್ಟು ದರ ಹಾಕಿಸಿಕೊಳ್ಳಬೇಕು, ಇವತ್ತು 13000 ರೂಪಾಯಿ ದಂಡ ತರಬೇಕು ಅಂದರೆ. ಪ್ರತಿಯೊಂದಕ್ಕೂ ಮೀಟರೀಕರಣ ಆಗಬೇಕು ಎಂದು ಒಂದೊಂದು ಸಾವಿರ ರೂಪಾಯಿ ದರ ನಿಗದಿ ಮಾಡಿದ್ದಾರೆ. ಷೆಡ್ಯೂಲ್‌ನಲ್ಲಿ ದರ ಇದೆ. ನಾನು ಅದನ್ನೆಲ್ಲಾ ಓದುವುದಿಲ್ಲ. ಏಕೆಂದರೆ ಅದನ್ನೆಲ್ಲಾ ಅವರು ಓದಿದ್ದಾರೆ. ಅದನ್ನೇ ಮತ್ತೆ ಓದಿ ನಾನು ಟೈಮ್ ವೇಸ್ಟ್ ಮಾಡುವುದಿಲ್ಲ. ನಾನು ಬ್ಯಾಕ್‌ಗ್ರೌಂಡ್ ಟಚಪ್ ಮಾಡುತ್ತೇನೆ. ಇದೆಷ್ಟು ಅನ್ಯಾಯ ಎಂಬುದನ್ನು ತಾವು ಆಲೋಚನೆ ಮಾಡಿ. ಅದಕ್ಕೋಸ್ಕರವಾಗಿ ನಮ್ಮ ಭಾರತೀಯ ಜನತಾ ಪಾರ್ಟಿ ಮೊದಲಿನಿಂದಲೂ ಕೂಡ ರೈತರ ವಿಷಯದಲ್ಲಿ ಮತ್ತು ಅವರ ಹಿತಾಸಕ್ತಿ ಕಾಪಾಡುವುದರಲ್ಲಿ ಪ್ರಯತ್ನ ಮಾಡಿದೆ. ಅನೇಕ ಧರಣಿಗಳು ನಡೆದಿವೆ; ಹೋರಾಟಗಳು ನಡೆದಿವೆ. ಮತ್ತು ಏನೇನು ಕಾರ್ಯಕ್ರಮಗಳನ್ನು ಕ್ರಮಬದ್ಧವಾಗಿ ಸಂವಿಧಾನಬದ್ಧವಾಗಿ ಮಾಡಬಹುದೋ ಅದನ್ನೆಲ್ಲಾ ಮಾಡಿದ್ದೇವೆ. ಒಂದು ವಿಚಾರವನ್ನು ಹೇಳಿದರೆ ತಾವು ತಪ್ಪು ತಿಳಿದುಕೊಳ್ಳಬಾರದು. ನಿನ್ನೆಯ ದಿವಸ ನಮ್ಮ ನಾಯಕರಾದ ಯಡಿಯೂರಪ್ಪನವರ ಮನೆಯಲ್ಲಿ ಮದುವೆಯಾಯಿತು. ಅವರು ಹೋಗುವುದಕ್ಕಿಂತ ಮುಂಚೆ ಒಂದು ವಿಷಯ ಹೇಳಿದರು. ರಾಮಕೃಷ್ಣ ಅವರೇ, ಈ ನಿಣರಯ ಕೊಟ್ಟು ಹೋಗುತ್ತಾ ಇದ್ದೇನೆ; ನನ್ನ ಮನಸ್ಸು ಇದರ ಮೇಲೆ ಇರುತ್ತದೆ. ಹೃದಯ ಇಲ್ಲಿರುತ್ತದೆ. ದಯವಿಟ್ಟು ಹೇಗಾದರೂ ಮಾಡಿ ಇದು ಯಶಸ್ವಿಯಾಗುವುದಕ್ಕೆ ತಾವು ಮನಸ್ಸು ಮಾಡಬೇಕು ಎಂದು ಹೇಳಿದರು. ಇದನ್ನು ಏತಕ್ಕೆ ಹೇಳಿದೆ ಅಂದರೆ ಅವರ ಕಳಕಳಿ ಏನು? ಮನೆಯಲ್ಲಿ ಮಗನ ಮದುವೆ ಆಗುತ್ತಿದೆ. ಆದರೂ ಅವರ ಕಳಕಳಿ ಎಷ್ಟಿದೆ ಎಂಬುದಕ್ಕೆ ಹೇಳಿದೆ. ಅವರು ಅನೇಕ ಸಾರಿ ರೈತರ ಬಗ್ಗೆ ಚಳುವಳಿ ಮಾಡಿ ಜೈಲಿಗೆ ಹೋಗಿದ್ದಾರೆ. ಧರಣಿ ಮಾಡಿದ್ದಾರೆ. ಉಪವಾಸ ಮಾಡಿದ್ದಾರೆ. ಕಾಲ್ನಡಿಗೆಯಲ್ಲಿ ನಡೆದಿದ್ದಾರೆ. ಇಂಥ ಸಬ್ಜೆಕ್ಟ್ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ಇರಬೇಕಾಗಿತ್ತು ಎಂದು ಅಷ್ಟೇ ನಾನು ಹೇಳಿದ್ದುದು. ಏಕೆಂದರೆ ಶ್ರೀ ಸಿದ್ಧರಾಮಯ್ಯನವರು ಕಲೆಕ್ಷನ್ ಮಂತ್ರಿಗಳು. ನೀವು ಫೈನಾನ್ಸ್ ಮಿನಿಸ್ಟರ್ ಆಗಿ ಕಲೆಕ್ಷನ್ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಸರ್ಕಾರ ನಡೆಯುವುದಿಲ್ಲ. ಕಲೆಕ್ಷನ್ ಮಾಡುವವರು ಕುಳಿತುಕೊಂಡು ಉತ್ತರ ಕೊಡುತ್ತಾರೆ ಎಂದರೆ ನಿಜವಾಗಿಯೂ ಎಷ್ಟರಮಟ್ಟಿಗೆ ಸರಿ?

ಉಪಾಧ್ಯಕ್ಷರು:- ಕಲೆಕ್ಷನ್, ಡಿಸ್ಟ್ರಿಬ್ಯೂಷನ್, ಎರಡೂ ಇದೆ.

ಶ್ರೀ ವೈ. ರಾಮಕೃಷ್ಣ:- ಡಿಸ್ಟ್ರಿಬ್ಯೂಷನ್ ಆಗುವುದಿಲ್ಲ. ಇದನ್ನು ಏತಕ್ಕೆ ಹೇಳಿದೆ ಎಂದರೆ ಎರಡೂ ಆಗುತ್ತದೆ ಎಂದು ಹೇಳಿದಿರಿ. ಹಾಗಾದರೆ 7 ಸಾವಿರ ಕೋಟಿ ರೂಪಾಯಿ ಏತಕ್ಕೆ ವಸೂಲು ಮಾಡಲಿಲ್ಲ?

ಶ್ರೀ ಸಿದ್ಧರಾಮಯ್ಯ:- ಹೇಳುತ್ತೇನೆ. ಈಗಲೇ ಹೇಳಲೋ ಆಮೇಲೆ ಹೇಳಲೋ.

ಶ್ರೀ ವೈ. ರಾಮಕೃಷ್ಣ:- ಆಮೇಲೆ ಹೇಳಿ. Why you have not collected 700 crores of Rupees? It is not that you are incapable. But you are made incapable, not to collect that amount. It is a challenge. ಒಪ್ಪುತ್ತೀರಾ? ಛಾಲೆಂಜ್ ಮಾಡುತ್ತಿದ್ದೇನೆ ನಾನು. ಒಪ್ಪುತ್ತೀರೋ? ನಿಮಗೆ ದಕ್ಷತೆ ಇದೆ ಕಲೆಕ್ಟ್ ಮಾಡುವುದಕ್ಕೆ. ಆದರೆ ಕಲೆಕ್ಟ್ ಮಾಡುವುದಕ್ಕೆ ಬಿಡುತ್ತಿಲ್ಲ.

ಶ್ರೀ ಸಿದ್ಧರಾಮಯ್ಯ:- ನೀವು ಹಿರಿಯರು. ಛಾಲೆಂಜ್ ಮಾಡುವುದಿಲ್ಲ.

ಶ್ರೀ ವೈ. ರಾಮಕೃಷ್ಣ:- ಛಾಲೆಂಜ್ ಮಾಡುವುದಕ್ಕೆ ಬರುವುದಿಲ್ಲ. ಆದರೆ ಇರುವ ಪ್ರಶ್ನೆಯನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ. ಇದೇನು ತೋರಿಸುತ್ತದೆ? ಇವತ್ತು ವಾರ್ಷಿಕ ಯೋಜನೆಯಲ್ಲಿ 5 ಸಾವಿರ ಕೋಟಿ ರೂಪಾಯಿ ಕಡಿಮೆ ಮಾಡಿದ್ದೇವೆಂದು ಹೇಳಿದ್ದೀರಿ. ಕಾರಣ ಏನು?

ಶ್ರೀ ಸಿದ್ಧರಾಮಯ್ಯ:- ಅದು ಬೇರೆ ವಿಷಯ.

ಶ್ರೀ ವೈ. ರಾಮಕೃಷ್ಣ:- ಇದಕ್ಕೆ ಸಂಬಂಧಪಟ್ಟಿದೆ. ಇದು ಮೈನ್ ಐಟಂ.

ಶ್ರೀ ಸಿದ್ಧರಾಮಯ್ಯ:- ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ.

ಶ್ರೀ ವೈ. ರಾಮಕೃಷ್ಣ:- ಆದರಲ್ಲೂ ಮಾತನಾಡುತ್ತೇನೆ, ಇದರಲ್ಲೂ ಮಾತನಾಡುತ್ತೇನೆ. ಕನ್ನಡದಲ್ಲಿ ಒಂದು ಗಾದೆ ಹೇಳುತ್ತಾರೆ. ''ಎಳೆಯಲಾರದ ಎತ್ತು ಮೆಳೆ ಮೇಲೆ ಬಿತ್ತು'' ಎಂದು. ನೀವು ಬಾಕಿ ವಸೂಲು ಮಾಡುವುದಕ್ಕೆ ಶಕ್ತಿ ಇದ್ದರೂ ಇವತ್ತಿನ ದಿವಸ ಎಲ್ಲಾ ಬಿಟ್ಟು ಬಡರೈತರ ತಲೆಯ ಮೇಲೆ ಹಾಕಿ ಅವರನ್ನು ಇನ್ನೂ ಬಡವರನ್ನಾಗಿ ಮಾಡಬೇಕು ಸಂಪೂರ್ಣವಾಗಿ ಅವರನ್ನು ಸರ್ವನಾಶ ಮಾಡಬೇಕು ಅವರ ಸಾವಿನ ಮೇಲೆ ನಾವು ನಡೆಯಬೇಕು ಎಂದರೆ ಏನಾಯಿತು ರಾಮನಗರದಲ್ಲಿ? ಏತಕ್ಕೆ ಸೋಲಿಸಿದ್ದು ನಿಮ್ಮನ್ನು? ಕಾರಣ ಏನು ಎಂಬುದನ್ನು ಅರ್ಥ ಮಾಡಿಕೊಂಡಿದ್ದೀರಾ? ಅರ್ಥ ಮಾಡಿಕೊಂಡಿದ್ದರೆ ಈ ಎರಡು ಕರಾಳ ಆಜ್ಞೆಗಳು ಆಗುತ್ತಾ ಇರಲಿಲ್ಲ. ನಾನು ಸೆನ್ಸಾರ್ ಮೋಷನ್ ತರುತ್ತಿದ್ದೇನೆ. ಸೆನ್ಸಾರ್ ಮೋಷನ್ ಏತಕ್ಕೆ ಎಂದು ನಾನು ಹೇಳುತ್ತಿದ್ದೇನೆ. ಈ ಸದನ ಜಾಯಿಂಟ್ ಸೆಲೆಕ್ಟ್ ಕಮಿಟಿ ಮಾಡಿತ್ತು. ಸೆಷನ್ ನಡೆಯುವಾಗಲೇ ಬಹಳ ತರಾತುರಿಯಲ್ಲಿ ಡಿಸಿಷನ್ ತೆಗೆದುಕೊಂಡಿರಿ. 13 ರೆಕಮೆಂಡೇಷನ್ಸ್ ಮಾಡಿದಿರಿ. ನಂತರ ನೀವು ಮಾಡಿದ ಕೆಲಸ ಏನು? ವಿರೋಧ ಪಕ್ಷದ ನಾಯಕರು ಸೆನ್ಸಾರ್ ಮೋಷನ್ ತರುತ್ತೇನೆಂದು ಬಾಯಲ್ಲಿ ಹೇಳಿದ್ದಾರೆ. ತಂದು ಬಿಡಬೇಕಾಗಿತ್ತು ಈಗಾಗಲೇ. ಅವರ ಕೀರ್ತಿ ಹೆಚ್ಚುತ್ತಿತ್ತು ತಂದಿದ್ದರೆ. ಸರ್ಕಾರವನ್ನು ಬಿಡಬಾರದು. ಕೋಟ್ಯಾಂತರ ಜನರಿಗೆ ಸಂಬಂಧಪಟ್ಟ ವಿಚಾರ ಇದು. ಏನು ಮಾಡಿದ್ದೀರಿ ನೀವು? ಯಾರು ಕೊಡಬೇಕು? ಏತಕ್ಕೆ ಕೊಡಬೇಕು? ನಾನು ಹೇಳುತ್ತೇನೆ ಇವತ್ತಿನ ದಿವಸ ಏನು ಆರ್ಡರ್ ಮಾಡಿದ್ದೀರೋ ಇದು most unwise, unreasonable, unscientific, arbitrary and against the recommendations of the

Joint Select Committee. It is a political decision, and it is vindictive attitude towards the ryots. ಇಷ್ಟು ಇದರಲ್ಲಿ ಅಡಕವಾಗಿದೆ. ನೀವೆಲ್ಲರೂ ರೈತರ ಮಕ್ಕಳಾಗಿದ್ದರೆ, ನೀವೂ ಬಡ ರೈತ ಪ್ರದೇಶದಿಂದ ಬಂದಿದ್ದರೆ ಇಂತಹ ಕೆಲಸಕ್ಕೆ ಕೈಹಾಕುತ್ತಿರಲಿಲ್ಲ. ನೀವು ಅಧಿಕಾರ ಹೋಗುತ್ತದಲ್ಲ ಎಂದು ಕೈ ಹಾಕಿದ್ದೀರಿ. ಸಿದ್ಧರಾಮಯ್ಯನವರೇ, ಯಾವುದೂ ಕೂಡ ತ್ಯಾಗ ಇಲ್ಲದೆ ಸ್ಥಾನ ಸಿಗುವುದಿಲ್ಲ. ತ್ಯಾಗ ಮಾಡುವುದಕ್ಕೆ ನೀವು ಸಿದ್ಧರಿದ್ದೀರಾ? ಮತ್ತೆ ಇಂಥಾದ್ದು ಆರ್ಡರ್ ಏಕೆ ಮಾಡಿದ್ದೀರಿ? ಇದು ಏನು ತೋರಿಸುತ್ತದೆ ಎಂದರೆ ಸರ್ಕಾರಕ್ಕೆ ರೈತರನ್ನು ಕಂಡರೆ ಅಲಕ್ಷ್ಯ ಮನೋಭಾವ. ಏನು ಮಾಡುತ್ತಾರೆ? Because it is an unorganised sector. ಅದಕ್ಕೋಸ್ಕರವಾಗಿ ನೀವು ಇಂತಹ ಪರಮ ಅನ್ಯಾಯವಾದಂಥ ಎರಡು ಗವರ್ನರ್‌ಮೆಂಟ್ ಆರ್ಡರ್‌ಗಳನ್ನು ಮಾಡಿದ್ದೀರಿ. ಇವತ್ತು ಸರ್ಕಾರದ ಮುಖ್ಯ ಉದ್ದೇಶ ಎಂದರೆ ಬರೀ ಸಾಲ ಮಾಡುವುದು. ಎಷ್ಟು ಕೋಟಿಗಳು ಎಂದು ಲೆಕ್ಕ ಇದೆಯೇ? ನನಗೆ ದಯವಿಟ್ಟು ಹೇಳಿ. ಎಲ್ಲಾ ಇಲಾಖೆಯವರೂ ಕೋಟಿ ಕೋಟಿ ಸಾಲ ಮಾಡಿದ್ದಾರೆ. ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ ಎನ್ನುವ ಹಾಗೆ ಆಗಿದೆ. ಒಂದು ಇಲಾಖೆ ಸಾಲ ಮಾಡಿದರೆ ಡೆವಲಪ್‌ಮೆಂಟ್‌ಗೋಸ್ಕರ ಎಷ್ಟು ಇಲಾಖೆಗಳು ಇವೆಯೋ, ಅವರೆಲ್ಲರೂ ಕೂಡ ಸ್ವಿಜರ್‌ಲ್ಯಾಂಡ್‌ನಿಂದ, ಜಪಾನ್‌ನಿಂದ ಜರ್ಮನ್‌ನಿಂದ, ಅಮೇರಿಕಾದಿಂದ ಯಾರಿಂದಲೇ ಸಿಗಲಿ, ಸಾಲ ಮಾಡುತ್ತಾರೆ.

ಶ್ರೀ ಸಿದ್ಧರಾಮಯ್ಯ:- ಹಾಗೆಯೇ ನೀವು ಮಾತನಾಡುವಾಗ ರಾಜಸ್ಥಾನ, ಮಹಾರಾಷ್ಟ್ರ ಅವರದ್ದೂ ಸ್ವಲ್ಪ ತರಿಸಿಕೊಂಡುಬಿಡಿ, ಅಷ್ಟೇನೆ.

ಶ್ರೀ ವಿಶ್ವೇಶ್ವರ ಹೆಗಡೆ:- ಅಲ್ಲಿ ನಿಮ್ಮ ಸರ್ಕಾರ, ನಿಮ್ಮ ಜನ ಏನಾದರೂ ಇದ್ದರೆ ಮಾತನಾಡಿ. ಇಲ್ಲಿ ನಿಮ್ಮ ಸರ್ಕಾರ ಇದೆ, ನಿಮ್ಮ ಬಗ್ಗೆ ನಾವು ಮಾತನಾಡುತ್ತೇವೆ.

ಉಪಾಧ್ಯಕ್ಷರು:- ಅಲ್ಲ, ನಿಮ್ಮ ನಾಯಕರು ಮಾತನಾಡುವಾಗ ನೀವು ಮಾತನಾಡಬಾರದು, ಕುಳಿತುಕೊಳ್ಳಿ.

ಶ್ರೀ ಚಂದ್ರಕಾಂತ ಬೆಲ್ಲದ್:- ನಿಮ್ಮ ಎಲೆಯಲ್ಲಿ ಏನಿದೆ ಅದನ್ನು ಮೊದಲು ನೋಡಿ.

(ಗೊಂದಲ)

ಉಪಾಧ್ಯಕ್ಷರು:- ಬೆಲ್ಲದ್‌ರವರೇ, ನಿಮ್ಮ ನಾಯಕರು ಮಾತನಾಡುವಾಗ ನೀವೆಲ್ಲ ಎದ್ದುನಿಂತರೆ ಹೇಗೆ? ಸರ್ಕಾರದ ಪರವಾಗಿ ಅವರು ಹೇಳಬೇಕಾಗುತ್ತದೆ. ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವೈ. ರಾಮಕೃಷ್ಣ:- ಈಗ ಪ್ರಜಾಪ್ರಭುತ್ವದಲ್ಲಿ ಇಂತಹ ಕರಾಳ ಶಾಸನಗಳನ್ನು ಮಾಡುವಾಗ ತಮಗೆ ಗೊತ್ತಿದೆ, ಡೇಟ್ ಫಿಕ್ಸ್ ಮಾಡಿದ್ದೀರಿ, ಅಸೆಂಬ್ಲಿ ಕರೆದಿದ್ದೀರಿ. ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟ್ ನಿಮ್ಮ ಮುಂದಿದೆ. ಸಮಸ್ಯೆ ಉಲ್ಬಣವಾದದ್ದು ಇದೆ. ಇವುಗಳನ್ನೆಲ್ಲ ನೀವು ಕನ್ಸಿಡರ್ ಮಾಡಿ You ought to have taken a democratic view.

ಸದಸ್ಯರ ಅಭಿಪ್ರಾಯಗಳನ್ನು ಸಂಗ್ರಹಣೆ ಮಾಡಿ ರೀಸನಬಲ್ ಆಗಿ ಫಿಕ್ಸ್ ಮಾಡಿದ್ದರೆ ನಾನು ತಲೆಬಾಗುತ್ತಿದ್ದೆ. ಇದು ಏನಾಗಿದೆ ಎಂದರೆ ಡಿಕ್ಟೇಟರ್‌ಷಿಪ್. The Government is a dictatorship Government. ಇದನ್ನು ನಾನು ನಿಶ್ಚಯವಾಗಿ ಹೇಳುತ್ತಿದ್ದೇನೆ You are running a Military Government. Is it so? Are you justified? ನಾನು ಹೇಳಿದ್ದು ನೀವು ಕೇಳಬೇಕು ಎನ್ನುವಂಥಾದ್ದು ಇದೆ. ಇದು ಆಗದಿದ್ದರೆ ಬಹುಮತ ಇದೆ, ಕೈ ಎತ್ತಿಸಿಕೊಂಡು ಹೋಗುತ್ತಾ ಇರುತ್ತೇವೆ ಎನ್ನುವುದು ಇದು ಸರಿಯೇ? ಯಾರ ಮೇಲೆ ಎಕ್ಸಪರಿಮೆಂಟ್ ಮಾಡುತ್ತಿದ್ದೀರಿ? You are running a Democratic Government? ನೀವು ತಲೆಬಾಗಿಸಬೇಕಾಗುತ್ತದೆ. ಅದು ತಿಂಗಳಿಗೆ ಒಂದು ಸಲ ಅಧಿವೇಶನ ಕರೆಯುತ್ತೀರಿ. ಏಕೆಂದರೆ ನಿಮಗೆ ಬಹುಮತ ಇದೆ. ರೈತರಿಗೆ ತಿನ್ನುವುದಕ್ಕೆ ಅನ್ನ ಇಲ್ಲ. ಅವರನ್ನು 13 ಸಾವಿರ ರೂಪಾಯಿ ಕೊಡಿ ಎಂದು ಕೇಳುತ್ತಿದ್ದೀರಿ. ಏಕೆಂದರೆ ನಿಮಗೆ ಬಹುಮತ ಇದೆ. ಇದಕ್ಕೇನಾ ನಿಮಗೆ ಬಹುಮತ ಕೊಟ್ಟಿದ್ದು? ಈ ರೀತಿಯಾಗಿ ರೂಲ್ ಮಾಡಿ ಅಂತಾನಾ ನಿಮಗೆ ಅಧಿಕಾರ ಕೊಟ್ಟಿದ್ದು? ಇದಕ್ಕೆ ಒಂದು ಕಡಿವಾಣ ಹಾಕಬೇಕು. ಕೋಡ್ ಆಫ್ ಕಾಂಡೆಕ್ಟ್ ಬೇಕು. ನೀವು ಟ್ಯಾಕ್ಸೇಶನ್ ಮಿನಿಸ್ಟರ್ ಆಗಿದ್ದೀರಿ. ವಸೂಲು ಮಾಡುವಾಗ ಮತ್ತು ಅವರ ಮೇಲೆ ದಂಡ ಹಾಕುವಾಗ ಯಾವ ಪ್ರಕಾರ ಇರಬೇಕು? ಕೋಡ್ ಆಫ್ ಎಥಿಕ್ಸ್ ನಿಮಗೆ ಮರೆತುಹೋಗುತ್ತದಲ್ಲ? ಅಧಿಕಾರದ ಮದ ತಲೆಗೇರಿದೆ. ನೀವೇ ಹೇಳಿ, ನಿಮ್ಮ ಊರಿನಲ್ಲಿ ನಿಮ್ಮ ಮನೆಯ ಪಕ್ಕದಲ್ಲಿರುವ ರೈತನಿಗೆ ನೀನು 13 ಸಾವಿರ ರೂಪಾಯಿ ಕೊಡಬೇಕು ಎಂದರೆ ಆತನು ಕೊಡುತ್ತಾನೋ, ಅವರು ಏನೂ ತಪ್ಪು ಮಾಡಿಲ್ಲ. ಹಾಗಿರುವಾಗ ಆಥರೈಸ್ಡ್‌ಗೆ ಒಂದು, ಅನ್ ಆಥರೈಸ್ಡ್‌ಗೇ ಒಂದು. ನಾನು ಹೇಳುತ್ತಿದ್ದೇನೆ, ರಾಜ್ಯದಲ್ಲಿ ಅನ್ ಆಥರೈಸ್ಡ್ ಪಂಪ್‌ಸೆಟ್ಟುಗಳು ಎಷ್ಟು ಇವೆ? ಇದನ್ನು ಕೊಡುವುದಕ್ಕೆ ಯಾರು ಕಾರಣರು? ರೈತನೇ ಕಂಬ ಹಾಕಿಬಿಟ್ಟು ವೈರ್‌ನ್ನು ಡೈರೆಕ್ಟ್ ಆಗಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಪಾಪ. ಅವನಿಗೆ ವೈರ್ ಎಂದು ಹೇಳುವುದಕ್ಕೂ ಬರುವುದಿಲ್ಲ. ಅವನ ಹತ್ತಿರ ದುಡ್ಡು ತೆಗೆದುಕೊಂಡು, ತಿಂದು ಅವನಿಗೆ ನೀವು ಮೀಟರ್ ಹಾಕದೇನೆ ಕರೆಂಟ್ ಕೊಟ್ಟು ಇವತ್ತಿನ ದಿವಸ ನೀನು ಇಂತಹ ತಪ್ಪು ಮಾಡಿದ್ದೀಯಾ ಎಂದರೆ ಹೇಗೆ? ನಾನೇನೂ ತಪ್ಪು ಮಾಡಿಲ್ಲವಲ್ಲ ಎಂದು ಆತ ಹೇಳುತ್ತಾನೆ. ಸಿದ್ದರಾಮಯ್ಯನವರ ಹತ್ತಿರ ಬಂದು ನಾನೇನೂ ಮಾಡಿಲ್ಲ ಬುದ್ಧಿ, 12 ಸಾವಿರ ರೂಪಾಯಿ ಕಟ್ಟು ಅಂತಾರೆ. ಎನ್ನುತ್ತಾರೆ. ಆತನಿಗೆ ನೀವು ಏನು ಹೇಳುತ್ತೀರಿ? There must be some reasoning. ಇದು ಹುಚ್ಚಾಸ್ಪತ್ರೆಯಲ್ಲಿ ಮಾಡಿದ ಹಾಗೆ ಆಯಿತು. ಆ ರೈತರೆಲ್ಲ ನೇಣು ಹಾಕಿಕೊಂಡು ಸಾಯಬೇಕೇನು? ಪ್ರಜ್ಞೆಯೇ ಇಲ್ಲ. ಸರ್ಕಾರಕ್ಕೆ ಪ್ರಜ್ಞೆ ಇಲ್ಲ ಎನ್ನುವ ಮಾತನ್ನು ನಾನು ಮತ್ತೊಂದು ಸಲ ಹೇಳುತ್ತೇನೆ. ಜೊತೆಗೆ ನೀವು ಏನಾದರೂ ಇದನ್ನು ಮುಂದುವರೆಸಿದ್ದೇ ಆದರೆ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ; ಎಲ್ಲದಕ್ಕೂ ಸಿದ್ಧ ಇರಿ. ಎಲ್ಲದಕ್ಕೂ ಸಿದ್ಧ ಎಂದರೆ ಅದು ಏನೇನು ಆಗಬಹುದು ಎಂದು ಆಲೋಚನೆ ಮಾಡಿ. We will not allow you to run the Government under any circumstances.

(ಉಪಮುಖ್ಯಮಂತ್ರಿಯವರು ನಗುತ್ತಿರುವುದನ್ನು ಗಮನಿಸಿ) ಹೌದು, ನಕ್ಕು ನಕ್ಕು ಹೀಗೆ ಆಗಿದ್ದು ಎಂದೆ. ಅಕ್ರಮವಾಗಿ ಪಡೆದಿರತಕ್ಕಂಥ ಎಲೆಕ್ಟ್ರಿಸಿಟಿಗೆ ಒಂದು ಕಮಿಟಿ ಮಾಡಿ, ಎಷ್ಟು ಮೀಟರ್‌ಗಳು ಇವೆ, ಅವನ್ನು ಸಕ್ರಮ ಮಾಡುವುದಕ್ಕೆ ಏನು ಮಾಡಬೇಕು? ಯಾವ ತರಹ ದಂಡ ಹಾಕಬೇಕು? ಅದರಬಗ್ಗೆ ಸ್ವಲ್ಪ ರೀಸನಬಲ್ ಆಗಿರಿ. ಒಂದು ಸಾವಿರ ರೂಪಾಯಿ ದಂಡ ಹಾಕಿ. ಏಕೆಂದರೆ ಪಾಪ, ಅವನಿಗೆ ಗೊತ್ತಿಲ್ಲದಂತೆ ನಿಮ್ಮ ಡಿಪಾರ್ಟಮೆಂಟ್‌ನವರು ಅವನ ಹತ್ತಿರ ಕಾಸು ತೆಗೆದುಕೊಂಡು ಜೇಬಿನಲ್ಲಿ ಹಾಕಿಕೊಂಡು, ಈಗ ಅನ್ ಆಥರೈಸ್ಡ್ ಕರೇಂಟ್ ಎಂದು ಹೇಳಿ ಇವತ್ತಿನ ದಿವಸ ನೀನು 13 ಸಾವಿರ ರೂಪಾಯಿ ಕಟ್ಟು ಎಂದರೆ ಇದು ಯಾವ ನ್ಯಾಯ? ಒಂದು ಸಾವಿರ ರೂಪಾಯಿ ಯೂನಿಫಾರ್ಮ್ ಆಗಿ ಹಾಕಿ ಅವುಗಳನ್ನೆಲ್ಲಾ ದಯವಿಟ್ಟು ರೆಗ್ಯುಲರೈಸ್ ಮಾಡಿ. ಇದರಿಂದ ನೀವು ಮಾಡಿದಂಥ ಕೆಲಸಕ್ಕೆ ಜಾಸ್ತಿ ಬರದಿದ್ದರೂ ಕೂಡ ಸ್ವಲ್ಪನಾದರೂ ಹಣ ಬರುತ್ತದೆ. ರೈತನಿಗೂ ಒಂದು ನೆಮ್ಮದಿ ಆಗುತ್ತದೆ. ಇವತ್ತು 11 ಲಕ್ಷ ಪಂಪುಸೆಟ್‌ಗಳು ಇವೆ. ಸಿದ್ಧರಾಮಯ್ಯನವರೇ, ತಮಗೆ ರೈತರ ಕಷ್ಟ ಗೊತ್ತಿದೆ. 11 ಲಕ್ಷ ಜನರು ಏನೂ ಕುಬೇರರೂ ಅಲ್ಲ. ತಮ್ಮ ಪವರ್ ಶಟ್‌ಡೌನ್‌ನಿಂದ, ಕರೆಂಟ್ ಸರಿಯಾಗಿ ಸಪ್ಲೈ ಆಗದೇನೆ, ನಿಮ್ಮ ಇಲಾಖೆಯ ಅವ್ಯವಸ್ಥೆಯಿಂದ ಮೋಟಾರುಗಳು ಸುಟ್ಟುಹೋಗಿವೆ. ಬಹುಶಃ 11 ಲಕ್ಷದಲ್ಲಿ ಒಂದಲ್ಲ ಒಂದು ವಿಧದಲ್ಲಿ ಅಷ್ಟೂ ಸುಟ್ಟು ಹೋಗಿವೆ. ಕರೆಂಟ್ ಸರಿಯಾಗಿ ಬರದೇನೋ, ಇಲ್ಲ ನಿಮ್ಮ ಎಲೆಕ್ಟ್ರಿಸಿಟಿ ಫಾಲ್ಟ್‌ನಿಂದಾನೋ, ಪವರ್ ಶಾರ್ಟೇಜ್‌ನಿಂದಾನೋ ಹನ್ನೊಂದು ಲಕ್ಷ ಜನರ ಪಂಪುಸೆಟ್ಟುಗಳು ಸುಟ್ಟು ಹೋಗಿವೆ. ಇದನ್ನು ರಿಪೇರಿ ಮಾಡುವುದಕ್ಕೆ ದುಡ್ಡ ಎಲ್ಲಿಂದ ತರಬೇಕು? ಇದರ ಜೊತೆಗೆ ಕಷ್ಟಪಟ್ಟು ಏನಾದರೂ ಬೆಳೆ ಬೆಳೆದರೆ, ಕಬ್ಬಿಗೆ ಮೊನ್ನೆ ದಿವಸ ಏನಾಯಿತು ಎಂದು ತಮಗೆ ಗೊತ್ತಿದೆ. ಎಷ್ಟು ಜನ ಸತ್ತರು, ಮದುವೆಗಳನ್ನು ಮುಂದುವರೆಸಿದರು, ಮನೆಕಟ್ಟುವುದನ್ನು ಮುಂದುವರೆಸಿದರು, ಸಾಲಗಳನ್ನು ಮುಂದುವರೆಸಿದರು. ಇದು ನಿಮಗೆ ಗೊತ್ತಿಲ್ಲವೆ? ಗೊತ್ತಿದ್ದೂ ಈ ಆರ್ಡರ್‌ಗಳನ್ನು ಏಕೆ ಮಾಡುತ್ತೀರಿ? ಹೂಂ ಅಂತ ಒಪ್ಪುತ್ತೀರಿ. ಮತ್ತೆ ಇಂತಹ ಆರ್ಡರ್‌ಗಳನ್ನು ಏಕೆ ಮಾಡುತ್ತೀರಿ? ಸರ್ಕಾರ ನಡೆಯಬೇಕು ನಿಜ, ನಾನು ಒಪ್ಪುತ್ತೇನೆ. ಜಾಯಿಂಟ್ ಸೆಲೆಕ್ಟ್ ಕಮಿಟಿ ಶಿಫಾರಸ್ಸು ನಿಮ್ಮ ಮುಂದೆ ಬಂದಿರಲಿಲ್ಲವೆ? ಆ ಮನೆಯ ಸದಸ್ಯರು, ಈ ಮನೆಯ ಸದಸ್ಯರು, ತಾವು, ಮುಖ್ಯಮಂತ್ರಿಗಳು ಎಲ್ಲಾ ಸೇರಿ ಯುನಾನಿಮಸ್ ಆಗಿ ಹದಿಮೂರು ರೆಕಮಂಡೇಶನ್ಸ್ ಮಾಡಲಾಯಿತು, ಅದು ನನ್ನ ಎದುರುಗಡೆ ಇದೆ. ಅದನ್ನು ಓದಿದರೆ ಟೈಮ್ ಆಗುತ್ತದೆ. ಏಕೆಂದರೆ ಈಗಾಗಲೇ ಮಾನ್ಯ ಖರ್ಗೆಯವರು ಓದಿಬಿಟ್ಟಿದ್ದಾರೆ. ಅದನ್ನು ತೆಗೆದುಕೊಂಡ ಮೇಲೆ ಇಂಪ್ಲಿಮೆಂಟ್ ಮಾಡಬೇಕಾದ ಏಜೆನ್ಸಿ ಯಾವುದು? ನೀವು ಏಕೆ ಮಾಡಲಿಲ್ಲ? ನಿಮಗೆ ಬೇಕಾದದ್ದು pick and choose. ನಿಮಗೆ ಯಾವುದು ಬೇಕೋ ಅದನ್ನು ಮಾತ್ರ ತೆಗೆದುಕೊಂಡಿದ್ದೀರಿ. ಉಳಿದ ಶಿಫಾರಸ್ಸುಗಳನ್ನು ಕಸದಬುಟ್ಟಿಗೆ ಹಾಕಿದ್ದೀರಿ. Are you not liable for contempt of the House? Sir, I want a definite ruling from the Chair.

ಈಗ ಜಾಯಿಂಟ್ ಸೆಲೆಕ್ಟ್ ಕಮಿಟಿಯೊಳಗೆ ಬಂದಂಥ ರಿಪೋರ್ಟ್‌ನ್ನು ಮಾಡಿಫೈ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆಯೇ? It is a fundamental issue I am raising. ಅದಕ್ಕೇ ನಾನು ಹೇಳಿದ್ದುದು ಮುಖ್ಯಮಂತ್ರಿಗಳು ಇಲ್ಲಿ ಇರಬೇಕಾಗಿತ್ತು ಎಂದು. ನೀವು

ಉತ್ತರ ಕೊಡಿ, ನಾನು ಒಪ್ಪುತ್ತೇನೆ. ಏಕೆಂದರೆ ತಾವು ಹಿಂದುಳಿದ ನಾಯಕರು, ರೈತರ ಮುಖಂಡರು ಫೈನಾನ್ಸ್ ಮಿನಿಸ್ಟರ್ ಇದ್ದೀರಿ. ದಯವಿಟ್ಟು ಉತ್ತರ ಕೊಡಿ. ಜಾಯಿಂಟ್ ಸೆಲೆಕ್ಟ್ ಕಮಿಟಿ ಒಂದು ನಿರ್ಣಯ ಕೊಟ್ಟಾದ ಮೇಲೆ ಆ ನಿರ್ಣಯವನ್ನು ಬದಲಾಯಿಸಿ ದರ ಹೆಚ್ಚಿಗೆ ಮಾಡಿ ಈ ಸಭೆಯ ಮುಂದಿಟ್ಟು ನಮಗೆ ತಿಳಿಸದೇನೆ ಜನರಿಂದ ದುಡ್ಡು ವಸೂಲು ಮಾಡತಕ್ಕಂಥಾದ್ದು ಕಾನ್‌ಸ್ಟಿಟ್ಯೂಶನಲ್ ಅಲ್ಲ. Is it maintainable? ಇದು ಒಂದೇ ಅಲ್ಲ ಇಂಥಾದ್ದು ಎರಡು-ಮೂರು ಕಡೆ ಆಗಿದೆ. I want a definite ruling from the Chair. ಇಲ್ಲದಿದ್ದರೆ ಏನಾಗುತ್ತದೆ ಅಂದರೆ ಇಂಥಾದ್ದನ್ನು ಮುಂದುವರೆಸಿಕೊಂಡು ಹೋಗುತ್ತೀರಿ. ನಿನ್ನೆ ಫೈರಿಂಗ್ ವಿಚಾರದಲ್ಲಿ ನಾನು ಹೇಳಬೇಕೆಂದು ಇದ್ದೆ. ಆಗ ಸ್ವಲ್ಪ ತಡವಾಯಿತು. ನೀವು ಯಾವ್ಯಾವ ಕಮಿಟಿಗಳನ್ನು ಏನೇನು ಮಾಡಿದ್ದೀರಿ, ನೀವು ಸರ್ಕಾರದವರು ಎಷ್ಟೆಷ್ಟು ಸೆಟ್ ಅಸೈಡ್ ಮಾಡಿದ್ದೀರಿ, ಎಂದು ನಿಮಗೆ ನಾನು ನಾಳೆ ಹೇಳುತ್ತೇನೆ. ಇವತ್ತು ಅಕ್ರಮವಾಗಿ ಪಡೆದಿರತಕ್ಕಂಥ ಎಲೆಕ್ಟ್ರಿಸಿಟಿಯನ್ನು ಸಕ್ರಮ ಮಾಡುವುದಕ್ಕೆ ತಾವು ಕೂಡಲೇ ನಿರ್ಣಯ ತೆಗೆದುಕೊಳ್ಳಬೇಕು. ಇದನ್ನು ತೆಗೆದುಕೊಳ್ಳುವಾಗ ಮುಂದೆ ಅವರು ಈ ರೀತಿ ಕೆಲಸ ಮಾಡದಹಾಗೆ, ಡಿಪಾರ್ಟ್‌ಮೆಂಟ್‌ನವರು ಅವರನ್ನು ಲಂಚ ತೆಗೆದುಕೊಂಡು ಪ್ರೇರೇಪಿಸಿದರೂ ಕೂಡ ಬೇಡಪ್ಪ ನಮಗೆ, ಒಂದು ಸಾವಿರ ರೂಪಾಯಿ ದಂಡ ಹಾಕಿದ್ದಾರೆ, ತಿರುಗಿ ದಂಡ ಕಟ್ಟಬೇಕಾಗುತ್ತದೆ ಎನ್ನತಕ್ಕಂಥ ಭಯ ಅವರಿಗೂ ಬರಬೇಕು. ನಾವು ಅವರ ಹತ್ತಿರ ಹೋಗಬಾರದು ಎನ್ನತಕ್ಕಂಥ ಭಯ ನಿಮ್ಮ ಡಿಪಾರ್ಟಮೆಂಟ್‌ನವರಿಗೂ ಇರಬೇಕು. ಅದಕ್ಕೋಸ್ಕರವಾಗಿ ಕನಿಷ್ಟ ಒಂದು ಸಾವಿರ ರೂಪಾಯಿ ಹಾಕಬೇಕೆಂದು ನಾನು ಹೇಳುತ್ತಿದ್ದೇನೆ. ಮತ್ತೆ ಏಳುನೂರು ಕೋಟಿ ರೂಪಾಯಿ ತಾವು ವಸೂಲಿ ಮಾಡಲಿಲ್ಲ. ಅದಕ್ಕಾಗಿ ನಾನು ಒಂದೇ ಒಂದು ಮಾತನ್ನು ಹೇಳುತ್ತೇನೆ. ಬಡರೈತನ ಹತ್ತು ರೂಪಾಯಿ ಬಾಕಿ ಇದ್ದರೆ ನೀವು ಬಿಡುತ್ತೀರಾ? ಕನೆಕ್ಷನ್ ಕಟ್ ಮಾಡುವುದಕ್ಕೆ ಇಕ್ಕಳ ತೆಗೆದುಕೊಂಡು ನಿಮ್ಮ ಇಲಾಖೆಯವರು ಹೋಗುತ್ತಾರೆ. ಹಾಗಿರುವಾಗ ಏಳುನೂರು ಕೋಟಿ ರೂಪಾಯಿಗಳನ್ನು ನೀವು ಹೇಗೆ ಬಿಟ್ಟಿರಿ? ನೀವು ಶಾಮೀಲಾಗಿದ್ದೀರಲ್ಲ? ಅವರು ಹೇಳಿದಾಗ ಗಪ್ಪನೆ ಎದ್ದುಬಿಟ್ಟಿರಿ. ಶಾಮೀಲಾಗಿಲ್ಲದಿದ್ದರೆ ಮತ್ತೆ ಏನಾಗಿದೆ? ದಯವಿಟ್ಟು ಹೇಳಿ. ನಾನು ಹೇಳುತ್ತಿದ್ದೇನೆ ಮುಖ್ಯಮಂತ್ರಿಗಳ ಮುಲಾಜಿಗೋಸ್ಕರ ನೀವು ಒಳಗಾಗಿದ್ದೀರಿ. ಈ ಖಾತೆ ಮುಖ್ಯಮಂತ್ರಿಗಳ ಕೈಯಲ್ಲಿದೆ. ನಾನೇನಾದರೂ ಎನ್‌ಫೋರ್ಸ್ ಮಾಡಿದರೆ ನನ್ನ ಮೇಲೆ ಎಲ್ಲಿ ತಿರುಗಿ ಬೀಳುತ್ತಾರೋ ಎನ್ನುವ ಭಯದಿಂದ ನೀವು ಈ ಕೆಲಸ ಮಾಡಿದ್ದೀರಿ. ಬಹುಶಃ ನೀವು ಒಪ್ಪಿಕೊಳ್ಳದಿದ್ದರೂ, ನಿಮ್ಮ ಆತ್ಮ ಇದನ್ನು ಒಪ್ಪಿಕೊಳ್ಳುತ್ತದೆ. ಆ ರೀತಿ ಕೆಲಸ ಮಾಡಬಾರದು.

(ಗೊಂದಲ)

ಒಬ್ಬ ಸದಸ್ಯರು:- ಅವರಿಗೆ ಆತ್ಮ ಇದೆಯೇ...

ಶ್ರೀ ವೈ. ರಾಮಕೃಷ್ಣ:- ಆತ್ಮ ಇದೆಯೇ ಎಂದು ಕೇಳುತ್ತಿದ್ದಾರೆ, ನಾನು ಇದೆ ಎಂದು ತಿಳಿದುಕೊಂಡಿದ್ದೇನೆ. ನಾನು ಇದೆ ಎಂದು ಹೇಳುತ್ತಾ ಇದ್ದೇನೆ. ಆ ಉತ್ತರ ನಾನೇ ಅವರಿಗೆ ಕೊಟ್ಟೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಾನೇನು ಹೇಳಿದೆ. ಉತ್ತರ ಅವರಿಗೆ ಕೊಟ್ಟೆ ಎಂದು ನೀವು ಹೇಳಿದಿರಲ್ಲ; ಏನು ಉತ್ತರ ಕೊಟ್ಟಿರಿ. ನಾನು ಅವರಿಗೆ ಆತ್ಮ ಇಲ್ಲ ಎಂದು ಹೇಳಲಿಲ್ಲ, ಆತ್ಮ ಇದೆ ಎಂದು ನಾನು ಹೇಳಿದೆ.

ಶ್ರೀ ವೈ. ರಾಮಕೃಷ್ಣ:- ಹಾಗಾದರೆ, ನಮಗೂ ಆತ್ಮ ಇದೆ ಎಂದು ಸಂತೋಷಪಟ್ಟುಕೊಳ್ಳಿ.

ಶ್ರೀ ಸಿದ್ಧರಾಮಯ್ಯ:- ಆತ್ಮ ಎಲ್ಲರಿಗೂ ಇದೆ. ಆದರೆ, ಆತ್ಮವಂಚನೆಯ ಕೆಲಸಗಳು ಈ ದೇಶದಲ್ಲಿ ನಡೆದುಕೊಂಡು ಬರುತ್ತಿದೆ.

ಶ್ರೀ ವೈ. ರಾಮಕೃಷ್ಣ:- ಆದ್ದರಿಂದ, ರೈತರ ಬಗ್ಗೆ ನಿರ್ಲಕ್ಷ್ಯ ಮನೋಭಾವ ಏನು ಸರ್ಕಾರ ತಾಳುತ್ತಾ ಇದೆ, ಅದನ್ನು ದಯವಿಟ್ಟು ನಿಲ್ಲಿಸಿ. ಎಲೆಕ್ಟ್ರಿಸಿಟಿ ಒಂದರಲ್ಲೇ ಅಲ್ಲ. ತಾವು ಅವರ ವಿಚಾರದಲ್ಲಿ ಇನ್ನೂ ಹೆಚ್ಚಿನ ಉದಾರ ಮನೋಭಾವದಿಂದ ನಡೆದುಕೊಂಡರೆ ನಿಮ್ಮ ಸರ್ಕಾರಕ್ಕೆ ಒಳ್ಳೆಯದಾಗುತ್ತದೆ. ನಮಗೆ ಯಾರು ಸಾರ್ವಭೌಮರು ಎಂದು ಹೇಳಿದರೆ ಅವರೇ, they are our sorvabhoumas. But, you are treating them as beggers. ನಿಮ್ಮ ಹತ್ತಿರ ದಿನ ಕೈಜೋಡಿಕೊಂಡು ಬರಬೇಕು. ಸ್ವಾಮಿ ಎಲೆಕ್ಟ್ರಿಸಿಟಿ ದರ ಕಮ್ಮಿ ಮಾಡಿ ನಾನು 2-3 ಸಾವಿರ ಕೊಡುವುದಕ್ಕಾಗುವುದಿಲ್ಲ. ಒಂದು ಸಾವಿರ ರೂಪಾಯಿ ಫೈನ್ ಕೊಡುವುದಕ್ಕಾಗುವುದಿಲ್ಲ. Why the government has taken such an attitude? ಯಾರು ನಿಮಗೆ ಸಾರ್ವಭೌಮರೋ, ಯಾರು ನಿಮಗೆ ಓಟು ಕೊಟ್ಟರೋ, ಯಾರು ಇವತ್ತು ನಿಮ್ಮ ಪಾರ್ಟಿಯನ್ನು ಗೆಲ್ಲಿಸಿಕೊಟ್ಟಿದ್ದಾರೋ ಅವರನ್ನು ನೀವು ಬೆಗ್ಗರ್ಸ್ ಎಂದು ಟ್ರೀಟ್ ಮಾಡುತ್ತಾ ಇದ್ದೀರಿ? ಅವರು ಕಣ್ಣೀರು ಸುರಿಸುತ್ತಿದ್ದರೆ, Are you justified in you action? ಅದಕ್ಕೆ ನಾನು ಹೇಳುತ್ತಾ ಇದ್ದೇನೆ. ಎರಡು ಸರ್ಕಾರಿ ಆದೇಶ ಏನು ಮಾಡಿದ್ದೀರಿ. ಈ ಕರಾಳ ಶಾಸನಗಳಿಗೆ ಜನತೆ ಕ್ಷಮೆ ಕೇಳಿ ಅವುಗಳನ್ನು ವಾಪಸ್ ತೆಗೆದುಕೊಳ್ಳಬೇಕು. ಇಲ್ಲದೇ ಇದ್ದರೆ ನಿಮ್ಮನ್ನು ಜನ ಬಿಡುವುದಿಲ್ಲ. ರೈತರು ಬಿಡುವುದಿಲ್ಲ. ಕ್ಷಮಿಸುವುದಿಲ್ಲ. ನಮ್ಮ ಪಕ್ಷದವರಂತು ತೀರ್ಮಾನ ಮಾಡಿದ್ದೇವೆ. Come what may. ಇದು ಎಲ್ಲಿಯವರೆಗೆ ತೆಗೆದುಕೊಂಡು ಹೋಗಬೇಕೋ ಅಲ್ಲಿಯವರೆಗೆ ತೆಗೆದುಕೊಂಡು ಹೋಗುತ್ತೇವೆ. ಇದರ ಬಗ್ಗೆ ಫೈಟ್ ಮಾಡುವುದಕ್ಕೆ ನಾವು ಸಿದ್ಧವಾಗಿದ್ದೇವೆಂದು ಹೇಳಿ, ಕಟ್ಟಕಡೆಯದಾಗಿ ಒಂದು ವಿಚಾರವನ್ನು ನಮ್ಮ ಸಿದ್ಧರಾಮಯ್ಯನವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಏನೆಂದರೆ, ಮೂರು ದಿವಸಗಳ ಹಿಂದೆ ಒಂದು ಪೇಪರ್ ಓದಿದೆ. ಎಲೆಕ್ಟ್ರಿಸಿಟಿ ವಿಚಾರದಲ್ಲಿ ಎರಡು ವಿಚಾರಗಳು ಬಹಳ ಸ್ವಾರಸ್ಯವಾಗಿದೆ. ಮೊದಲನೆಯದು ಏನೆಂದರೆ, ಪವರ್ ಆಡಿಟ್. ಈ ವಿಚಾರದಲ್ಲಿ ಮೊದಲಬಾರಿ ಇಂಟ್ರಡ್ಯೂಸ್ ಮಾಡಿದ್ದಾರೆಂದು ಕಾಣುತ್ತದೆ. ಹಣ ಆಡಿಟ್ ಮಾಡುವುದನ್ನು ನಾವು ನೋಡುತ್ತಿದ್ದೇವೆ. ಪವರ್ ಆಡಿಟ್ ಮಾಡುವುದು ಇದೇ ಮೊದಲಬಾರಿ. ಇದನ್ನು ಮುಂಚಿನಿಂದಲೂ ಮಾಡಿದ್ದರೆ ಬಹಳ ಹಣ ಉಳಿಯುತ್ತಿತ್ತು. ಪವರ್ ಆಡಿಟ್ ಮಾಡಿದಂಥವರು, KEB robbed of power worth Rs. 1,000 crores ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಲುಕ್ಸಾನಾಗಿದೆ. ಯಾವುದರಿಂದ misuse by way of un-metered consumption in 1995. An energy audit conducted

for the first time by the KEB Vigilance Wing of both free energy and also irrigation pumpsets... ಸ್ವಾಮಿ, ಈ ವಿಚಾರದಲ್ಲಿ ಸಿದ್ದರಾಮಯ್ಯನವರನ್ನು ವಂದಿಸುತ್ತೇನೆ ನಾನು ಅವರ ಜೊತೆ ಪ್ರೈವೇಟಾಗಿ ಮಾತನಾಡಿದಾಗ ಹೇಳಿದ್ದೆ. ನೀವು ಪವರ್ ಆಡಿಟ್ ಮಾಡಿಸಿ, ಹಣದ ಆಡಿಟ್ ಅಲ್ಲ, ಕೆ.ಇ.ಬಿ. ಅಕೌಂಟ್ಸ್ ಆಡಿಟ್ ಅಲ್ಲ. ಎನರ್ಜಿ ಆಡಿಟ್. ಮೊದಲಸಲ ಆಡಿಟ್ ಮಾಡಿದಾಗ, ಒಂದು ಸಾವಿರ ಕೋಟಿ ರೂಪಾಯಿಗಳ ಮಿಸ್‌ಯೂಸ್ ಆಗಿದೆ ಎನ್ನುವುದು ಹೊರ ಬಂದಿದೆ. ಇದನ್ನು ಕಂಟ್ರೋಲ್ ಮಾಡುವುದಕ್ಕೆ ಏನೇನು, ನಿಮ್ಮ ಶಕ್ತ್ಯಾನುಸಾರ ಮೆಸರ್ಸ್ ಹಾಕಿಕೊಳ್ಳುತ್ತೀರಿ, ಅದನ್ನು ದಯವಿಟ್ಟು ಸಭೆಗೆ ತಿಳಿಸಬೇಕು. ಎರಡನೆಯದು, ಅತ್ಯಂತ ಆಸಕ್ತಿಯುಳ್ಳದ್ದು. ಅದೇನೆಂದರೆ ಯಾರೋ ಒಬ್ಬರು ಬರೆದಿದ್ದರು, ಬಹಳ ಚೆನ್ನಾಗಿದೆ. ಇದನ್ನು ಸಿದ್ದರಾಮಯ್ಯನವರು ಸ್ವಲ್ಪ ಗಮನಿಸಬೇಕು. ಪವರ್ ಜನರೇಷನ್ ಕೆಟ್ಟುಹೋಗಿ, ಎಷ್ಟು ಕೋಟಿ, ಕೋಟಿ ರೂಪಾಯಿಗಳು ಇವತ್ತಿನ ದಿವಸ ಸೋರಿ ಹೋಗುತ್ತಿದೆ. ಅದನ್ನೆಲ್ಲಾ ರೈತರ ಮೇಲೆ ಹಾಕಿದ್ದಾರೆ. ಅವರು ಹೇಳುತ್ತಾರೆ, ''ಕರ್ನಾಟಕ ವಿದ್ಯುತ್ ಮಂಡಳಿ ಸಂಪನ್ಮೂಲ ಸಂಗ್ರಹಿಸಲು ಗ್ರಾಹಕರನ್ನು ಎಲ್ಲಾ ರೀತಿಯಿಂದಲೂ ಸುಲಿಯುತ್ತಿರತಕ್ಕ ವಿಚಾರ ಎಲ್ಲರಿಗೂ ತಿಳಿದಿದೆ. ವಿದ್ಯುತ್ ಅಭಾವವೂ ಇದೆ. ಈ ಅಭಾವಕ್ಕೆ ಸ್ವಯಂಕೃತಾಪರಾಧವೂ ಒಂದು ಕಾರಣ. ಇದನ್ನು ದಯವಿಟ್ಟು ನೋಡಿ. ಏಷ್ಯಾದಲ್ಲೇ ಮೊದಲನೇ ಜಲವಿದ್ಯುತ್ ಯೋಜನೆ ಎಂದು ಖ್ಯಾತಿಗಳಿಸಿದ ಶಿವನಸಮುದ್ರದ ಉತ್ಪಾದನಾ ಕೇಂದ್ರದ ಅವಸ್ಥೆ ನೋಡಿ. ಇದರ ಉತ್ಪಾದನಾ ಸಮಾರ್ಥ್ಯ 42 ಮೆಗಾವ್ಯಾಟ್ಸ್. ಆದರೆ, ಈಗ ಉತ್ಪಾದಿಸುತ್ತಿರುವುದು ಕೇವಲ 10 ಮೆಗಾವ್ಯಾಟ್ಸ್. ಉತ್ಪಾದನಾ ನಷ್ಟ 30 ಮೆಗಾವ್ಯಾಟ್ಸ್. ಆರ್ಥಿಕ ನಷ್ಟ 1 ಯೂನಿಟ್‌ಗೆ 2 ರೂಪಾಯಿನಂತೆ ದಿನಕ್ಕೆ 30 X 24 X 1000 ಒಂದು ದಿನಕ್ಕೆ 14 ಲಕ್ಷದ 40 ಸಾವಿರ ರೂಪಾಯಿಗಳು. ಅಂದರೆ ವಾರ್ಷಿಕ ನಷ್ಟ 14 ಲಕ್ಷದ 40 ಸಾವಿರ X 365 ಅಂದರೆ, ಐವತ್ತೆರಡುವರೆ ಕೋಟಿ ರೂಪಾಯಿ ಇದು ಕೇವಲ 30 ಮೆಗಾವ್ಯಾಟ್ಸ್‌ಗೆ. ಪವರ್ ಕಾರ್ಪೊರೇಷನ್‌ನವರು ಕೆ.ಇ.ಬಿ.ಗೆ ರಿಪೇರಿಯಿಂದ ನಾವು 200 ಮೆಗಾವ್ಯಾಟ್ಸ್ ಉತ್ಪತ್ತಿ ಮಾಡಬಹುದು ಎಂದು ತಿಳಿಸಿದ್ದಾರೆ. ಇವರೇನು ಪಾಯಿಂಟ್ ಹೇಳಿದ್ದಾರೋ ಅದೇ ಪಾಯಿಂಟನ್ನು ಅವರು ಹೇಳಿದ್ದಾರೆ. ಇವತ್ತು ಕೇವಲ 30 ಮೆಗಾವ್ಯಾಟ್ಸ್‌ಗೆ 52 ಕೋಟಿಯಾದರೆ, 200 ಮೆಗಾವ್ಯಾಟ್ಸ್‌ಗೆ ಎಷ್ಟು ಕೋಟಿಯಾಗುತ್ತದೆ? ಕಣ್ಣಿದ್ದರೂ ಕೂಡ ಕುರುಡರ ಹಾಗೆ ವರ್ತಿಸುವುದಕ್ಕೆ ಅವರು ಲಾಯಕ್ಕೇ? ಇವತ್ತಿನ ದಿವಸ ಎಷ್ಟು ಜನರೇಟರುಗಳು ಕೆಟ್ಟುಹೋಗಿವೆ. ಇವುಗಳನ್ನು ರಿಪೇರಿ ಮಾಡುವುದಕ್ಕೆ ನೀವೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಎಲ್ಲೆಲ್ಲಿ ನಾವು ಉತ್ಪಾದನೆ ಮಾಡುತ್ತಾ ಇದ್ದೇವೋ ಅಲ್ಲೆಲ್ಲಾ they have gone out of order, ರಿಪೇರಿ, ರಿಪೇರಿ, ರಿಪೇರಿ. ಅದರ ಕಡೆ ಯಾರೂ ಗಮನಹರಿಸುತ್ತಾ ಇಲ್ಲ. ಮಾತೆತ್ತಿದರೆ ಕೊಜೆಂಟ್ರಿಕ್ಸ್. ಏನು ಕೊಜೆಂಟ್ರಿಕ್ಸ್. ಇಲ್ಲೆ ಕೋಟ್ಯಾಂತರ ರೂಪಾಯಿಗಳನ್ನು ನಷ್ಟವಾಗುತ್ತಿದೆ ಇದನ್ನು ನೋಡಿ. ಇದರಲ್ಲೇ ಬೇಕಾದಷ್ಟು ಸರಿದೂಗಿಸಬಹುದು. 200 ಮೆಗಾವ್ಯಾಟ್ಸ್ ಪವರನ್ನು ರಿಪೇರಿ ಮಾಡಿ ಇಲ್ಲಿ ಏಕೆ ತರಬಾರದು. ಇದಕ್ಕೆ ಯಾರಾದರೂ ಇನ್‌ಚಾರ್ಜ್ ಇದ್ದಾರೆಯೇ? ಮುಖ್ಯಮಂತ್ರಿಗಳಿಗೆ ಈ ಖಾತೆ ಕೊಟ್ಟಿದ್ದಾರೆ, ಅವರಿಗೆ ಇದನ್ನು ನೋಡಿಕೊಳ್ಳುವುದಕ್ಕೆ ಟೈಮ್ ಇದೆಯೇ? ವಿಸಿಟರ್ಸ್‌ನ್ನು ನೋಡುವುದಕ್ಕೆ ಅವರಿಗೆ ಟೈಮ್ ಇಲ್ಲ, ಇದನ್ನೆಲ್ಲಾ ಕೇಳುವುದಕ್ಕೆ ಎಲ್ಲಿ ಟೈಮ್ ಸಿಕ್ಕುತ್ತದೆ? ಎಲೆಕ್ಟ್ರಿಸಿಟಿ ವಿಚಾರ ಮನಸ್ಸಿಗೆ

ತೆಗೆದುಕೊಂಡು, ಗಮನಹರಿಸಿ, ಇಂಜನಿಯರ್ಸ್ ಜೊತೆ ಚರ್ಚೆ ಮಾಡಿ, ಕೆಟ್ಟುಹೋಗಿರತಕ್ಕ ಜನರೇಟರ್ಸ್‌ನ್ನು ತೆಗೆದುಕೊಂಡು, ರಿಪೇರಿ ಮಾಡಿ ಉತ್ಪಾದನೆ ಮಾಡುವಷ್ಟು ಟೈಮ್ ಮುಖ್ಯಮಂತ್ರಿಗಳಿಗೆ ಎಲ್ಲಿದೆ? ಸಿದ್ದರಾಮಯ್ಯನವರೇ, ದಯವಿಟ್ಟು ಆ ಖಾತೆಯಿಂದ ಅವರನ್ನು ತೆಗೆಯಿರಿ. ಮುಖ್ಯಮಂತ್ರಿಗಳಿಗೆ ಇನ್ನಾವುದೇ ಖಾತೆ ಕೊಡಲಿ. ಎನರ್ಜಿ ಖಾತೆ ಏನಿದೆ, ದಯವಿಟ್ಟು ಅದನ್ನು ಅವರಿಂದ ತೆಗೆಯಿರಿ. ನೀವು ಇಂಟರ್‌ನಲ್ ಮ್ಯಾಟರ್ ಎಂದರೆ, ನಾವು ಸಾಯುತ್ತಾ ಇದ್ದೇವಲ್ಲ. We are dying. ಆದರೆ, ಸಾಕಷ್ಟು ನಿಗಾ ಕೊಡವಷ್ಟು ಶಕ್ತಿ ಇಲ್ಲದೇ ಇರುವಾಗ ಅವರು ಏಕೆ ಆ ಖಾತೆ ಇಟ್ಟುಕೊಳ್ಳಬೇಕು.

SRI H. SHIVAPPA:- You cannot doubt his ability. You cannot doubt. He has got every capacity. It is not a tenable allegation.

ಶ್ರೀ ವೈ. ರಾಮಕೃಷ್ಣ:- ಅಧ್ಯಕ್ಷರೆ, He may be having capacity. But, unfortunately he cannot find time.ವಿದ್ಯುಚ್ಛಕ್ತಿ ವಿಚಾರದಲ್ಲಿ ಬಹಳ ಹೇಳಬೇಕಾಗುತ್ತದೆ. ಕೆರಳಿಸುವುದು ಬೇಡಿ. ನೀವು ಅವರಿಗೆ ಗುಟ್ಟಾಗಿ ಹೇಳಿ. ಕಲೆಕ್ಷನ್ ಮಾಡಬೇಕಾದರೂ, ಕಲೆಕ್ಷನ್ ಮಾಡಬೇಕಾದರೂ ನಿಮ್ಮ ಕೈಲಿ ಸಾಧ್ಯವಿಲ್ಲ. ದಯವಿಟ್ಟು ಈ ಖಾತೆಯನ್ನು ಬೇರೆಯವರು ಕೈಗೆ ಕೊಡಿ ಎಂದು ಹೇಳಿಬಿಟ್ಟು, ಎರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಉಪಾಧ್ಯಕ್ಷರೇ, ಸರ್ಕಾರಕ್ಕೆ ಜನಗಳ ಮೇಲಾದರೂ ಭಯ ಬೇಕು; ಮತದಾರರ ಬಗ್ಗೆಯಾದರೂ ಭಯ ಇರಬೇಕು. ಎಲ್ಲಾದರೂ ಒಂದುಕಡೆ ಕಡಿವಾಣ ಬೇಕಲ್ಲ. ಮನೆಯ ಯಜಮಾನನಾದವನಿಗೆ, ತನ್ನ ಮಕ್ಕಳು, ತನ್ನ ಅಪ್ಪನ ಕಂಡರೆ ಪ್ರೀತಿ ಇರಬೇಕು. ನಮ್ಮಪ್ಪ ಏನೆಂದಾನು ಎಂದು. ತನ್ನ ತಾಯಿ ಕಂಡರಾದರೂ ಹೆದರಿಕೆ ಇರಬೇಕು. ಅಥವಾ ಪತ್ರಕರ್ತರನ್ನು ಕಂಡರಾದರೂ ಹೆದರಿಕೆ ಇರಬೇಕು. ಪತ್ರಿಕೆಯಲ್ಲಿ ಬರತಕ್ಕಂಥ ಟೀಕೆ ಟಿಪ್ಪಣೆಗಳನ್ನು ಓದಿದ ಮೇಲಾದರು ಹೆದರಿಕೆ ಇರಬೇಕು. ಇದು ಯಾವುದೂ ಹೆದರಿಕೆ ಇಲ್ಲವೆಂದು ಹೇಳಿದರೆ, ಈ ಸರ್ಕಾರದವರು ಯಾರಿಗೆ ಹೆದರುತ್ತಾ ಇದ್ದಾರೆ ಎಂದು ನನಗೆ ಅರ್ಥವಾಗುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಆಡಳಿತ ನಡೆಸತಕ್ಕವರು ಪ್ರಾಮಾಣಿಕವಾಗಿ ಪ್ರಜೆಗಳ ಮಾತಿಗೆ ಅಥವಾ ಪ್ರಜೆಗಳ ಟೀಕೆ ಟಿಪ್ಪಣಿಗಳಿಗೆ, ಪತ್ರಿಕೆಗಳಲ್ಲಿ ಬರತಕ್ಕ ಅಗ್ರಲೇಖನಗಳಿಗೆ, ಯಾವುದಕ್ಕಾದರೂ ಹೆದರಬೇಕಲ್ಲ. ಬಂದಂಥ ಎಲ್ಲಾ ಸರ್ಕಾರಗಳಲ್ಲಿ, ಯಾವುದನ್ನೂ ಗಮನಕ್ಕೆ ತೆಗೆದುಕೊಳ್ಳದೆ ಹೆದರದೇ ಇರತಕ್ಕಂಥ, ಲಂಗು ಲಗಾಮು ಯಾವುದೂ ಇಲ್ಲದಿರತಕ್ಕಂತಾದ್ದು ನಿಮ್ಮ ಸರ್ಕಾರ. ಹಳ್ಳಿಕಡೆ ಒಂದು ಗಾದೆ ಹೇಳುತ್ತಾರೆ. ''ಮೂರನ್ನೂ ಬಿಟ್ಟವನು, ಊರಿಗೆ ದೊಡ್ಡವನು'' ಎಂದು. ಅದು ನಿಮಗೆ ಅನ್ವಯವಾಗುತ್ತದೆ. ಅಂದರೆ, ಈ ಗಾದೆ ಸಂಸದೀಯ ಅಲ್ಲವೇ ಎನ್ನುವ ಚರ್ಚೆಯಲ್ಲ. ಈ ಗಾದೆಗೆ ಇತಿಹಾಸ ಇದೆ, ಹಿನ್ನೆಲೆ ಇದೆ. ಈ ಎರಡು ಪದಗಳನ್ನು ಮತ್ತೊಮ್ಮೆ ತಮ್ಮ ಕಿವಿಯಲ್ಲಿ ಕೇಳಬೇಕೆಂದು ಆಸೆ ಇದ್ದರೆ, ಮತ್ತೆ ಹೇಳುತ್ತೇನೆ. ನಿಮಗೆ ಆ ಆಸೆ ಬೇಕಲ್ಲ.

3.30 ಪಿಎಂ.

ಅವರು ನಮಗೆ ಕೇಳಿಸಲಿಲ್ಲ ಅಂದರೆ ಮತ್ತೆ ನಾನು ಹೇಳುತ್ತೇನೆ. ಅವರು ಕೇಳಿಸಿಕೊಂಡಿದ್ದಾರೆ. ಮತ್ತೊಮ್ಮೆ ತಮ್ಮ ಕಿವಿಯಲ್ಲಿ ಕೇಳಬೇಕೆನ್ನುವ ಆಸೆ ಇದ್ದರೆ ಹೇಳುತ್ತೇನೆ. ಆ ತರಹದ ಆಸೆ ಏನೂ ಬೇಕಾಗಿಲ್ಲ. ಆದ್ದರಿಂದ ನಾಗೇಗೌಡ್ರೇ ನೀವೇ ಇದ್ದೀರಿ ದಯವಿಟ್ಟು ಸ್ವಲ್ಪ ಕೇಳಿ. ಯಾರೂ ಇಲ್ಲ ನಿಮ್ಮ ಎದುರಿಗೆ ನಾವು ಹೇಳೋಣ.

ಶ್ರೀ ಕೆ.ಎನ್. ನಾಗೇಗೌಡ:- ನಾವು ಇದ್ದೇವೆ ಅಂದರೆ ನಾವು ಮೂರು ಬಿಟ್ಟವರೇ?

ಶ್ರೀ ವಾಟಾಳ್ ನಾಗರಾಜ್:- ಇಲ್ಲಾ ಇಲ್ಲ, ನೀವಲ್ಲ. ಸರ್ಕಾರ. ನಾನು ಏಕೆ ತಮ್ಮನ್ನು ಕುರಿತು ಹೇಳಿದೆ ಅಂದರೆ ನಿಮಗೆ ಸ್ವಲ್ಪ ದಯೇ ಇದೆ, ಭೀತಿ ಇದೆ, ಶಾಸನ ಸಭೆ ಕಂಡರೆ, ಪತ್ರಿಕೆ ಕಂಡರೆ ನಾವು ಯಾವುದೇ ವಿಷಯವನ್ನು ಪ್ರಾರಂಭ ಮಾಡಿದಾಗಲೂ ತಕ್ಷಣ ಎದ್ದು ಮಾತನಾಡತಕ್ಕಂಥಾದ್ದು ತಿಳುವಳಿಕೆ ಇವೆಲ್ಲಾ ಇದೆ. ಇತ್ತೀಚಿನ ದಿನಗಳಲ್ಲಿ ನಾನು ಹಿಂದಿನ ಸರ್ಕಾರವನ್ನು ನೋಡಿದ್ದೆ. ಕಾಂಗ್ರೆಸ್ ಸರ್ಕಾರ ಬಹಳ ಮಾಡಿದೆ ಎಂದು ಹೇಳದಿದ್ದರೂ ಅವರಿಗೆ ಸ್ವಲ್ಪ ಹೆದರಿಕೆ ಆದರೂ ಇತ್ತು. ಸಾರ್ವಜನಿಕರು ಏನಂದಾರು ಎಂದು ಪತ್ರಿಕೆಗಳ ಬಗ್ಗೆ ಹೆದರಿಕೆ ಇತ್ತು. ಒಂದು ತರಹ ಟೀಕೆ ಟಿಪ್ಪಣಿಗಳ ಬಗ್ಗೆ ಹೆದರಿಕೆ ಇತ್ತು. ಈಗ ಒಂದು ತರಹ ಯಾರಿಗೂ ಹೆದರದೇ ಇರತಕ್ಕಂಥಾ ದಂಡಿನ ಆಳ್ವಿಕೆಯೇ ಇದು, ಇದು ತೀರಾ ಆಯಿತು ಅಲ್ಲವೇ? ಇದು ನಿಮಗೆ ಆಗಿಲ್ಲವೇ? ಈಗ ನೀವು ಅನುಭವಿಸುತ್ತಿದ್ದೀರಲ್ಲ, ನಿಮ್ಮ ಪರಿಸ್ಥಿತಿಯನ್ನು ನೋಡಿ ನನಗೆ ವ್ಯಥೆ ಆಗುತ್ತಿದೆ. ನಿಮ್ಮ ಇತಿಹಾಸವನ್ನು ನಾವು ನೋಡಿದಾಗ ನೀವು ಯಾರ್‍ಯಾರಿಗೆ ಕೈ ಕೊಡುತ್ತೀರಿ. ಎನ್ನುವುದನ್ನೆಲ್ಲಾ ನೋಡಿಕೊಂಡು ಬಂದಿದ್ದೇವೆ. ನಿಮ್ಮ ಜನತಾದಳ ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆ ಯಾರ್‍ಯಾರು ಆಶೀರ್ವಾದ ಮಾಡಿದರು, ಏನೇನು ಮಾಡಿದರು, ಹೇಗೆ ಹೇಗೆ ಮಾಡಿದರು ಅವೆಲ್ಲವನ್ನೂ ಮರೆತು ಅಧಿಕಾರ ಒಂದೇ ನಮಗೆ ಎನ್ನತಕ್ಕ ಸ್ಥಿರತೆಯನ್ನು ಇಟ್ಟುಕೊಂಡು ಬಂದಿರುವುದನ್ನು ನೋಡಿದರೆ ನಿಮಗೆ ಕರುಣೆ ಇಲ್ಲ. ಭಯ ಇಲ್ಲ, ಭೀತಿ ಇಲ್ಲ, ಸಾರ್ವಜನಿಕರ ಟೀಕೆ ಟಿಪ್ಪಣಿಗಳಿಗೆ ಗೌರವ ಇಲ್ಲ. ಇಡೀ ರಾಜ್ಯಾದ್ಯಂತ ಒಂದೇ ಸಮನೆ ಇದು ಅನ್ಯಾಯ, ಅನ್ಯಾಯ ಎಂದು ಹೇಳುತ್ತಾ ಇದ್ದಾರಲ್ಲ, ಸರ್ಕಾರ ಎಂದು ಒಂದು ಇದ್ದರೆ ಬನ್ನಿ ಕುಳಿತುಕೊಂಡು ಮಾತನಾಡೋಣ. ನಾವು ಮಾಡಿರತಕ್ಕಂಥ ತಪ್ಪು ಏನು ಇದೆ. ಏಕೆ ಜಾಸ್ತಿ ಮಾಡಿದ್ದೇವೆ ಹೇಗೆ ಮಾಡಿದ್ದೇವೆ ಎಂದು ಹೇಳಿ ಚರ್ಚೆ ಮಾಡತಕ್ಕಂಥ ಸೌಜನ್ಯವಾದರೂ ಇಲ್ಲ. ಗ್ರಾಹಕರ ಸಂಘಗಳು ಇವೆ. ಅನೇಕ ಸಂಘ ಸಂಸ್ಥೆಗಳು ಇವೆ. ಎಲ್ಲಾ ವಿರೋಧ ಪಕ್ಷಗಳ ಮುಖಂಡರು ಇದ್ದಾರೆ, ಅವರು ಒಪ್ಪುವುದು ಬಿಡುವುದು ಅದು ಬೇರೆ ಪ್ರಶ್ನೆ. ಇಂತಹ ಸಂದರ್ಭ ಬಂದಾಗ ಕರೆದು ಮಾತನಾಡುವಂತಹ ಸೌಜನ್ಯವಾದರೂ ನಿಮ್ಮ ಸರ್ಕಾರಕ್ಕೆ ಇದೆಯೇ? ಏಕಾ ಏಕಿ ಒಂದು ದಿನ ಪತ್ರಿಕೆಯಲ್ಲಿ ಬರುತ್ತದೆ. ನಮ್ಮ ಇಂಧನ ಸಚಿವರು ಅವರ ಪಕ್ಕದಲ್ಲಿ ಕುಳಿತಿದ್ದರು. ಮಂಡಳಿಯ ಅಧ್ಯಕ್ಷರು ಮಾನ್ಯ ಸಚಿವರು ಬಾಯಿ ಬಿಡುತ್ತಿಲ್ಲ ಅವರು ಗಂಭೀರವಾಗಿ ಕುಳಿತಿದ್ದರು ಪತ್ರಿಕಾ ಗೋಷ್ಠಿಯಲ್ಲಿ ಮಾನ್ಯ ಮಂತ್ರಿಗಳು ಸುಮ್ಮನೆ ಕುಳಿತಿದ್ದರೂ ಆ ಮಂಡಳಿಯ ಅಧ್ಯಕ್ಷರು ಎಲ್ಲಾ ವಿವರಣೆಯನ್ನು ಒಂದು ಕಡೆಯಿಂದ ಹೇಳುತ್ತಿದ್ದರು ಎಂದು ನಾನು ಪತ್ರಿಕೆಯಲ್ಲಿ ಓದಿದ್ದು

ಹೇಳುತ್ತಿದ್ದೇನೆ. ನಾನು ಅವತ್ತು ಇರಲಿಲ್ಲ. ಶಾಸನ ಸಭೆಯನ್ನು 11ನೇ ತಾರೀಖು ಕರೆಯತಕ್ಕಂಥಾದ್ದು ಪತ್ರಿಕೆಗಳಲ್ಲಿ ಬಂದಿದೆ. ಅದರ ಬೆನ್ನು ಹಿಂದೆಯೇ ಇದು ಪತ್ರಿಕೆಗಳಲ್ಲಿ ಪ್ರಕಟಣೆ ಆಗುತ್ತಿದೆ. ಹೊಸ ಎಲೆಕ್ಟ್ರಾನಿಕ್ ಮೀಟರ್‌ಗಳನ್ನು ಅಳವಡಿಸತಕ್ಕಂಥಾದ್ದು ಒಂದು ಹೊಸ ನೀತಿಯ ಪ್ರಶ್ನೆ. ಈ ಸದನವನ್ನು ತಾವು ಕರೆದಿರುವಾಗ ಈ ಸದನದಲ್ಲಿ ವಿಷಯವನ್ನು ಚರ್ಚೆ ಮಾಡಿ ನಂತರ ನಾವು ಕ್ರಮ ಕೈಗೊಳ್ಳೋಣ ಎನ್ನತಕ್ಕಂಥಾದ್ದನ್ನು ಮಾಡಲಿಲ್ಲ. ಈ ಸದನದ ಭೀತಿಯೂ ನಿಮಗೆ ಇಲ್ಲ. ಇದು ಈ ಸದನದ ಹಕ್ಕುಚ್ಯುತಿ ಆಗುತ್ತದೆ. ಮತ್ತೆ ನಾವು ವಿರೋಧ ಪಕ್ಷದ ಎಲ್ಲಾ ಮುಖಂಡರುಗಳು ಸೇರಿ ಮಾತುಕತೆ ಮಾಡುತ್ತೇವೆ. ಇದು ಹಕ್ಕುಚ್ಯುತಿ ಆಗುತ್ತದೆ. ಈ ಸದನಕ್ಕೆ ತಾವು ಮಾಡಿರತಕ್ಕಂಥಾ ಅಗೌರವ, ಅಪಚಾರ. ಈ ಸದನ ಸರ್ವೋಚ್ಛ. ಈ ಸದನವನ್ನು ಕೈ ಬಿಟ್ಟು ನೀವೇ ನಿಮ್ಮ ಕಾರ್ಯಾಲಯದಲ್ಲಿ ಕುಳಿತು ನಿಮ್ಮ ಅಧ್ಯಕ್ಷರನ್ನು ಕೂರಿಸಿಕೊಂಡು ಗೀಟು ಎಳೆಯುತ್ತಾ ಕುಳಿತುಕೊಂಡರೆ ಇದೇನು ಅಯ್ಯಪ್ಪನ ಚೌಡಿಯೇ? ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದೀರಿ ಈ ರಾಜ್ಯವನ್ನು? ಯಾವ ರೀತಿ ನೀವು ತಿಳಿದುಕೊಂಡಿದ್ದೀರಿ. ನನಗನಿಸುತ್ತದೆ ಕೆಲವು ಐ.ಎ.ಎಸ್. ಅಧಿಕಾರಿಗಳು ಇದ್ದಾರೆ. ಈಗ ರಾಷ್ಟ್ರೀಯ ವಿದ್ಯುತ್‌ಚ್ಛಕ್ತಿ ಕಾರ್ಯವಲಯ ಅಧ್ಯಕ್ಷ ಎನ್.ಎಸ್. ವಸಂತ್ ಅವರು ಒಂದು ಮಾತು ಹೇಳಿದ್ದಾರೆ. ಅವರು ಏನು ಹೇಳುತ್ತಾರೆ ಎಂದರೆ ರಾಜ್ಯಗಳ ವಿದ್ಯುತ್ ಮಂಡಳಿಗಳಲ್ಲಿ ಉನ್ನತ ಹುದ್ದೆಗಳಲ್ಲಿ ವಿದ್ಯುತ್ಛಕ್ತಿ ಉದ್ಯಮದ ಜ್ಞಾನ ಮತ್ತು ಅದರಲ್ಲಿ ಆಸಕ್ತಿ ಇರತಕ್ಕಂಥವರು ಇರಬೇಕು ಎಂದು ನನಗನಿಸುತ್ತದೆ. ಐ.ಎ.ಎಸ್. ಅಧಿಕಾರಿಗಳು ಅಲ್ಲಿರಬಾರದು. ಐ.ಎ.ಎಸ್. ಅಧಿಕಾರಿಗಳು ಅಂದ್ರೆ ಅವರೇನು ಸ್ವರ್ಗದಿಂದ ನೇರವಾಗಿ ಭೂಮಿಗೆ ಇಳಿದಿರತಕ್ಕಂಥವರೇ? ಅವರು ಎಲ್ಲದರಲ್ಲೂ ಪರಿಣಿತರೇ? ಪಾಂಡಿತ್ಯವನ್ನು ಪಡೆದಿರತಕ್ಕಂಥವರೋ? ಅವರ ಮುಖ ಅಂದ್ರೆ ಒಂದೇ ಒಂದು ಮುಖ. ಕುದುರೆ ಮುಖಕ್ಕೆ ಕಡಿವಾಣ ಎರಡು ಕಡೆ ಬಂದಿರುತ್ತದೆ. ಅದು ಬಿಟ್ಟರೆ ಅವರಿಗೆ ಅಕ್ಕಾ ಪಕ್ಕಾ ಎರಡೂ ಗೊತ್ತಿಲ್ಲ. ಕರುಣೆ ಇಲ್ಲ, ದಯೇ ಇಲ್ಲ ಕಾನೂನು ಬಗ್ಗೆ ಕೂಡ ಯಾವ ರೀತಿ ಎನ್ನತಕ್ಕಂಥಾ ವಿಚಾರ ಇಲ್ಲ. ಐ.ಎ.ಎಸ್. ಅಧಿಕಾರಿಗಳು ನಾವು ಏನು ಬೇಕಾದರೂ ಮಾಡಬಹುದು. ಈ ಒಂದು ಧಂದೆ ತಮಿಳುನಾಡಿನಲ್ಲಿ ಇಲ್ಲ. ಈ ಹಾವಳಿ ತಮಿಳುನಾಡಿನಲ್ಲಿ ಇಲ್ಲ. ಈ ಐ.ಎ.ಎಸ್. ಅಧಿಕಾರಿಗಳ ಹಾವಳಿ ಕರ್ನಾಟಕ ರಾಜ್ಯದಲ್ಲಿ ಜಾಸ್ತಿ. ಇದು ಒಂದು ರೀತಿ ತಬ್ಬಲಿಯ ರಾಜ್ಯ ಆಗಿದೆ. ಎಷ್ಟೋ ಜನ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚುನಾವಣೆಯಲ್ಲಿ ಗೆದ್ದು ಶಾಸಕರಾಗಿ ಮಂತ್ರಿಗಳಾಗಿರತಕ್ಕಂಥವರಿಗೆ ಅನುಭವ ಆಗಿರಬೇಕು. ಅವರು ಬಾಯಿ ಬಿಟ್ಟು ಹೇಳುತ್ತಿಲ್ಲ ಐ.ಎ.ಎಸ್. ಅಧಿಕಾರಿಗಳು ತಾಂತ್ರಿಕ ಮಂಡಲಿ, ವಿದ್ಯುತ್ಛಕ್ತಿ ಮಂಡಲಿ ಕಡೆಗೆ ಬರಬಾರದು. ಸಾರಿಗೆ ಇಲಾಖೆಗೆ, ವಾರ್ತಾ ಇಲಾಖೆಗೆ ಐ.ಪಿ.ಎಸ್ ಅಧಿಕಾರಿ. ಮಾನ್ಯ ನಾಗೇಗೌಡರ ಇಲಾಖೆಗೆ ಅದು ಇಲ್ಲ. ಅದಕ್ಕೆ ನಾನು ನಿಮ್ಮನ್ನು ಒಪ್ಪುತ್ತೇನೆ. ನಿಮ್ಮ ಕಾರ್ಯದರ್ಶಿ ಸಂಬಂಧಪಟ್ಟವರನ್ನೇ ಮಾಡಿದ್ದೀರಿ. ಮೊದಲು ಐ.ಎ.ಎಸ್. ಅಧಿಕಾರಿಗಳ ಕಪಿ ಮುಷ್ಟಿಯಿಂದ ಈ ವಿದ್ಯುತ್ಛಕ್ತಿ ಮಂಡಲಿಯನ್ನು ಹೊರಗಡೆ ಬಿಡಿ. ಆನಂತರ ಒಬ್ಬ ಸಂಪೂರ್ಣ ತಾಂತ್ರಿಕ ಪರಿಣಿತಿಯನ್ನು ಪಡೆದಿರತಕ್ಕಂಥವರನ್ನು ಅಧ್ಯಕ್ಷರನ್ನಾಗಿ ಮಾಡಿ. ನಾನು ವೈಯಕ್ತಿಕವಾಗಿ ಯಾರೇ ಐ.ಎ.ಎಸ್. ಅಧಿಕಾರಿಗಳ ಮೇಲೆ ದ್ವೇಷ ಮಾಡುತ್ತೇನೆ ಎಂದು ಅಲ್ಲ. ಐ.ಎ.ಎಸ್. ಅಧಿಕಾರಿಗಳಿಗೆ ಯಾವುದು ಬೇಕಾಗಿಲ್ಲ. ನಾವು 35-36 ವರ್ಷ ಇರಬಹುದು, ಇಲ್ಲದೇ

ಇರಬಹುದು, ಗೆಲ್ಲುತ್ತೇವೆ ಇಲ್ಲ ಸೋಲುತ್ತೇವೆ ನಾವು ನೆಲಕ್ಕೆ ಬಿಳುತ್ತೇವೆ, ಚರಂಡಿ ಪಕ್ಕಕ್ಕೆ ಹೋಗುತ್ತೇವೆ ರಸ್ತೆಯಲ್ಲಿ ಬೇಳುತ್ತೇವೆ ಆದರೆ ಅವರಿಗೆ ಇದು ಯಾವುದೂ ಇಲ್ಲ. ಒಂದು ಸಾರಿ ಐ.ಎ.ಎಸ್. ಎನ್ನತಕ್ಕಂಥ ಮೂರು ಅಕ್ಷರ ಅವರಿಗೆ ಬಿತ್ತು ಅಂದರೆ ಬೇರೆ ಪ್ರಶ್ನೆ ಇಲ್ಲವೇ ಇಲ್ಲ. ನಾನು ಅವರನ್ನು ವಿರೋಧ ಮಾಡಿ ವೈಯಕ್ತಿಕವಾಗಿ ದ್ವೇಷ ಮಾಡುತ್ತೇನೆ ಎನ್ನತಕ್ಕಂಥಾದ್ದು ಅಲ್ಲ. ನಾನು ಅನುಭವದ ಮೇಲೆ ವಸ್ತು ಸ್ಥಿತಿಯನ್ನು ಹೇಳುತ್ತಿದ್ದೇನೆ. ಅವರು ಸಮಸ್ಯೆಯನ್ನು ಬಗೆಹರಿಸುವ ಬದಲು ಸಮಸ್ಯೆಯನ್ನು ನಿರ್ಮಾಣ ಮಾಡುತ್ತಾರೆ. ಇವತ್ತು ನಾವು ಶ್ರೀಮಾನ್ ಗುಂಡುರಾವ್ ಅವರನ್ನು ನೆನೆದುಕೊಳ್ಳಬೇಕು. ಅವರ ಕಾಲದಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ಚ್ಕ್ತಿಯನ್ನು ಉಚಿತವಾಗಿ ನೀಡಿದಂತಹ ಮಹಾ ವ್ಯಕ್ತಿ. ಅವರ ದಿಟ್ಟತನಕ್ಕೆ ಅವರ ಧೈರ್ಯಕ್ಕೆ ಅವರ ಕೆಚ್ಚಿಗೆ, ಅವರು ಯಾವುದೇ ಪಕ್ಷದಲ್ಲಿ ಇರಲಿ ಅವರನ್ನು ಅತ್ಯಂತ ಪ್ರಾಮಾಣಿಕವಾಗಿ ನಾವು ನೆನೆದುಕೊಳ್ಳಬೇಕಾಗಿದೆ. ನೀವು ಬಂದ ತಕ್ಷಣ ರೈತರ ಮೇಲೆ ವಿದ್ಯುತ್ಛಕ್ತಿ ಧರ ಹೆಚ್ಚಿಗೆ ಹಾಕದೇ ಇದ್ದರೆ ನಾವು ಬದುಕುವಂತೆ ಇಲ್ಲ ಎಂದು ಏರಿಸಿದ್ದೀರಿ ಒಂದರಿಂದೆ ಒಂದು. ಸರ್ಕಾರದ ಮುಂದೆ ನಾವೆಲ್ಲಾ ನಿರಂತರ ಚಳುವಳಿ ಮಾಡಿದ ನಂತರ ಒಂದು ಜಂಟಿ ಸಮಿತಿ ರಚನೆ ಆಯಿತು. ಸನ್ಮಾನ್ಯ ಶ್ರೀ ಜಿ.ಬಿ. ಶಿವಕುಮಾರ್, ಈ ಸದನದ ಸದಸ್ಯರು ಅವರ ನೇತೃತ್ವದಲ್ಲಿ ಒಂದು ಸಮಿತಿ ರಚನೆ ಆಗಿ ಆ ಸಮಿತಿಯಲ್ಲಿ ಎಲ್ಲಾ ವಿರೋಧ ಪಕ್ಷದ ಸದಸ್ಯರು ಇದ್ದರು. ಆ ಸಮಿತಿ ಇನ್ನೂ ರದ್ದಾಗಿಲ್ಲ ಇನ್ನೂ ಇದೆ. ತಾವು ಈ ಸಮಿತಿಯ ಮುಂದೆ ತರಬಹುದಾಗಿತಲ್ಲ. ಏಕೆ ಇರಲಿಲ್ಲ? ಸಮಿತಿ ತಮಗೆ ಬೇಕಾಗಿಲ್ಲ ಶಾಸನ ಸಭೆ ತಮಗೆ ಬೇಕಾಗಿಲ್ಲ ಆ ದೃಷ್ಟಿಯಿಂದ ಎಲ್ಲವನ್ನೂ ಕಡೆಗಾಣಿಸಿ ಸುಮಾರು 10 ಲಕ್ಷ ಜನ ಸರ್ವ ವಿದ್ಯುತ್ಛಕ್ತಿಯನ್ನು ಬಳಸತಕ್ಕಂಥಾ ಗ್ರಾಹಕರ ಮೇಲೆ 1,300 ರೂಪಾಯಿಗಳಂತೆ ಠೇವಣಿಯನ್ನು ಹಾಕಿದಿರಿ. ಏಕೆ ಠೇವಣಿ ಕೊಡಬೇಕು. ಒಂದು ಹೋಟೆಲ್‌ನಲ್ಲಿ ಕಾಫಿ ಕುಡಿಯಲು ಹೋದರೆ ನಾವೇ ಕಪ್ ತೆಗೆದುಕೊಂಡು ಹೋಗೋಣವೇ? ಇಡ್ಲಿ ದೋಸೆ ತಿನ್ನಲು ನಾವೇ ತಟ್ಟೆ ತೆಗೆದುಕೊಂಡು ಹೋಗೋಣವೇ ನೀವೂ ಮೀಟರ್ ಹಾಕುವುದು ನಿಮ್ಮ ವ್ಯವಸ್ಥೆ. ವಿದ್ಯುತ್ಛಕ್ತಿ ಮಂಡಲಿಯವರು ನಮ್ಮ ಹತ್ತಿರ ದುಡ್ಡು ತೆಗೆದುಕೊಳ್ಳುತ್ತಿದ್ದಾರೆ. ಪುಕ್ಕಟೆಯಾಗಿ ನಮಗೆ ವಿದ್ಯುತ್ ಕೊಡುತ್ತಿಲ್ಲ. ದುಡ್ಡು ತೆಗೆದುಕೊಂಡು ನಮಗೆ ಕೊಡುವಾಗ ಅತ್ಯಂತ ಪ್ರಾಮಾಣಿಕವಾಗಿ ಎಲ್ಲಾ ವ್ಯವಸ್ಥೆಯನ್ನು ಮಾಡಿ ಕೊಡಬೇಕು. ಠೇವಣಿ ನೀವೇ ಕಟ್ಟಿ, ಪ್ರತಿಯೊಂದು ನೀವೇ ಕಟ್ಟಿ, ಎಂದು ಈ ತರಹ ಹೇಳುವುದು ರಾಜ್ಯದ ವಿದ್ಯುತ್ಛಕ್ತಿ ಮಂಡಳಿ ಸಂಪೂರ್ಣವಾಗಿ ದಿವಾಳಿ ಆಗಿದೆ, ಅದು ಬದುಕುವ ಮಟ್ಟದಲ್ಲಿ ಇಲ್ಲ ಎಂದು ಹೇಳಬಹುದು. ವಿದ್ಯುಚ್ಛಕ್ತಿ ಮಂಡಲಿಯ ಸಮಗ್ರ ಆಡಳಿತದ ಬಗ್ಗೆ 10 ವರ್ಷಗಳ ಇತಿಹಾಸದ ಒಂದು ಶ್ವೇತ ಪತ್ರವನ್ನು ಈ ಸಭೆಯ ಮುಂದೆ ಇಡಬೇಕೆಂದು ಹೇಳಿ ನಾನು ತಮ್ಮಲ್ಲಿ ಆಗ್ರಹ ಮಾಡುತ್ತಿದ್ದೇನೆ.

ಯಾವ ಯಾವ ಸಂದರ್ಭದಲ್ಲಿ ಎಷ್ಟೆಷ್ಟು ವಿದ್ಯುಚ್ಛಕ್ತಿ ಖರ್ಚಾಗಿದೆ? ಯಾವ ಯಾವ ಕೈಗಾರಿಕೆಗಳು ಎಷ್ಟೆಷ್ಟು ವಿದ್ಯುಚ್ಛಕ್ತಿಯನ್ನು ಖರ್ಚು ಮಾಡಿವೆ? ಸಾಮಾನ್ಯ ಗ್ರಾಹಕರು ಎಷ್ಟು ವಿದ್ಯುಚ್ಛಕ್ತಿಯನ್ನು ಉಪಯೋಗಿಸಿದ್ದಾರೆ? ಕಳ್ಳತನ ಆಗಿರುವುದೆಷ್ಟು? ಎನ್ನುವ ಎಲ್ಲಾ ವಿಷಯಗಳನ್ನು ಒಳಗೊಂಡಂತೆ ಸಮಗ್ರವಾದ ಒಂದ ಶ್ವೇತ ಪತ್ರವನ್ನು ಸರ್ಕಾರ ಮಂಡಿಸಬೇಕು. ಸ್ವಾಮಿ, ಇವತ್ತಿನ ದಿವಸ ಹೆಣ ಸುಡುವುದಕ್ಕೂ ವಿದ್ಯುಚ್ಛಕ್ತಿ ಕೊಡುವುದಿಲ್ಲ. ವಿದ್ಯುತ್ ಚಿತಾಗಾರದಲ್ಲಿ

ವಿದ್ಯುಚ್ಛಕ್ತಿ ಇಲ್ಲದೆ ಅರ್ಥಂಬರ್ಥವಾಗಿ ಹಣ ಸುಟ್ಟಿರುವುದು ಉಂಟು. ಇಷ್ಟು ಅವಿವೇಕ ಪರಮಾವಧಿಯಲ್ಲಿ ವಿದ್ಯುಚ್ಛಕ್ತಿ ಮಂಡಳಿಯ ಪರಿಸ್ಥಿತಿ ಇದೆ. ಇಂಥ ಪ್ರದೇಶಕ್ಕೆ ಇಂಥ ಸಮಯದಲ್ಲಿ ಮಾತ್ರ ವಿದ್ಯುಚ್ಛಕ್ತಿ ಸರಬರಾಜು ಮಾಡುತ್ತೇವೆಂದು ಹೇಳಿ ಆ ಪ್ರಕಾರವೇ ವಿದ್ಯುಚ್ಛಕ್ತಿಯನ್ನು ಒದಗಿಸಲಿ. ಅದು ಬಿಟ್ಟು ಯಾವಾಗ ಅಂದರೆ ಆವಾಗ ವಿದ್ಯುಚ್ಛಕ್ತಿ ಹೋಗುತ್ತದೆ. ಒಂದು ದಿವಸ 7 ಗಂಟೆಗೆ, ಒಂದು ದಿವಸ 6 ಗಂಟೆಗೆ, ಒಂದು ದಿವಸ 8 ಗಂಟೆಗೆ, ಒಂದು ದಿವಸ 5 ಗಂಟೆಗೆ ಒಂದು ದಿವಸ ಸಂಜೆಗೆ ವಿದ್ಯುಚ್ಛಕ್ತಿ ಹೋಗುತ್ತದೆ. ಇದಕ್ಕೆ ದಿಕ್ಕು ದಿವಾಳಿ ಯಾರೂ ಇಲ್ಲವೊ? ಹೇಳುವವರು ಕೇಳುವವರು ಯಾರೂ ಇಲ್ಲವೊ? ಇಂಥ ಅವ್ಯವಸ್ಥೆ ತಪ್ಪಲಿಲ್ಲವೆಂದರೆ ಯಾರಿಗೂ ಶೋಭೆ ತರತಕ್ಕಂಥಾದ್ದಲ್ಲ. ಈ ಬಗ್ಗೆ ವಿದ್ಯುಚ್ಛಕ್ತಿ ಮಂಡಳಿ ಅಧ್ಯಕ್ಷರ ಮೇಲೆ ಮತ್ತು ವಿದ್ಯುಚ್ಛಕ್ತಿ ಖಾತೆ ಮಂತ್ರಿಗಳ ಮೇಲೆ ಹಕ್ಕು ಚ್ಯುತಿ ನಿರ್ಣಯ ತರುವುದಕ್ಕೆ ವಿರೋಧ ಪಕ್ಷದ ಮುಖಂಡರೊಡನೆ ನಾವು ಮಾತನಾಡುತ್ತೇವೆ. ತಾವು ಇದಕ್ಕೆ ಅವಕಾಶ ಮಾಡಿಕೊಡಬೇಕು. ಏಕೆಂದರೆ, ಶಾಸನ ಸಭೆ 11ನೇ ತಾರೀಖಿನಿಂದ ಇರುವಾಗ ಇಚ್ಛೆ ಬಂದ ರೀತಿಯಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ಎಷ್ಟು ಅವಿವೇಕದಿಂದ ಇದನ್ನು ಮಾಡಿದ್ದಾರೆಂದರೆ, ಇದನ್ನು ಯಾರೂ ಒಪ್ಪುವುದಕ್ಕಾಗುವುದಿಲ್ಲ. ನಾವು ಇಲ್ಲಿ ಆಡ ಆಡುವುದಕ್ಕೆ ಬಂದಿಲ್ಲ, ಈ ಸದನವನ್ನು ಒಂದು ಆಟದ ಮೈದಾನ ಎಂದು ನಾವು ತಿಳಿದುಕೊಳ್ಳಬಾರದು. ಈ ಸದನಕ್ಕೆ ಬಹಳ ಶಕ್ತಿ ಇದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆಮೇಲೆ ವಿದ್ಯುಚ್ಛಕ್ತಿ ಮಂಡಳಿಗೆ ಬರಬೇಕಾದ ಬಾಕಿ ಹಣ ಏಳು ನೂರು ಕೋಟಿ ರೂಪಾಯಿಗಳನ್ನು ಏಕೆ ವಸೂಲಿ ಮಾಡಲಿಲ್ಲವೆಂದು ಕೇಳಿದರೆ, ನಿಮ್ಮ ಕಾಲದಲ್ಲಿ ಏನು ಮಾಡುತ್ತಿದ್ದಿರಿ ಎಂದು ಕೇಳುವುದು ಸರಿಯಾದ ರೀತಿಯಲ್ಲ. ಏಳು ನೂರು ಕೋಟಿ ರೂಪಾಯಿ ಬಾಕಿ ಹಣ ಏನು ಕಡಿಮೆಯಲ್ಲ. ಈ ಏಳು ನೂರು ಕೋಟಿ ರೂಪಾಯಿ ಮತ್ತು ಅದರ ಬಡ್ಡಿ ಹಣವನ್ನು ಮೊದಲು ವಸೂಲು ಮಾಡಬೇಕು. ಒಳಚರಂಡಿ ಮತ್ತು ನೀರು ಸರಬರಾಜು ಮಂಡಳಿಯವರು ವಿದ್ಯುಚ್ಛಕ್ತಿ ಮಂಡಳಿಗೆ ಕೊಡಬೇಕಾದ ಬಾಕಿ ಹಣವನ್ನು ಇದುವರೆಗೆ ವಸೂಲಿ ಮಾಡುವುದಕ್ಕಾಗಲಿಲ್ಲ. ಕೆಲವು ಕಾರ್ಖಾನೆಗಳು ಮತ್ತು ಮಂಡಳಿಗಳಿಂದ ಬರಬೇಕಾದ ಬಾಕಿ ಹಣವನ್ನು ವಸೂಲಿ ಮಾಡುವುದಕ್ಕಾಗಲಿಲ್ಲ. ಇದರ ಬಗ್ಗೆ ವಿದ್ಯುಚ್ಛಕ್ತಿ ಮಂಡಳಿ ಏನು ಮಾಡುತ್ತಿದೆ? ಮೊದಲು ಆ ಹಣವನ್ನು ವಸೂಲಿ ಮಾಡಲಿ. ಯಾರಾದರೂ ಒಬ್ಬ ಸಾಮಾನ್ಯ ಮನುಷ್ಯ 15 ರೂಪಾಯಿ ಬಿಲ್ ಕಟ್ಟದೇ ಇದ್ದರೆ ಒಂದು ದಿನ ಎರಡು ದಿನ ನೋಡಿ ವಿದ್ಯುಚ್ಛಕ್ತಿ ಕನೆಕ್ಷನ್ ಕಿತ್ತುಹಾಕುತ್ತೀರಿ. ವಿದ್ಯುಚ್ಛಕ್ತಿ ಮಂಡಳಿಗೆ ಬರಬೇಕಾದ ಬಾಕಿ ಹಣವನ್ನು ಏಕೆ ವಸೂಲು ಮಾಡಿಲ್ಲ? ಯಾವ ಕಾರಣಕ್ಕಾಗಿ ಮಾಡಿಲ್ಲ? ಇದು ಅತ್ಯಂತ ಬೇಜವಾಬ್ದಾರಿ ಮತ್ತು ನಾಚೀಗೇಡಿನ ಪ್ರಸಂಗ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಅತ್ಯಂತ ನೋವಿನಿಂದ ಹೇಳಬೇಕಾಗಿದೆ. ಮುಖ್ಯಮಂತ್ರಿಯವರು ರೈತ ಕುಟುಂಬದಿಂದ ಬಂದಿರತಕ್ಕಂಥವರು ಮತ್ತು ಬಡವರ ಕಷ್ಟ ನೋವು ನಲಿವನ್ನು ಅರ್ಥ ಮಾಡಿಕೊಂಡಿರುವವರು, ಅವರ ಕೈಯಲ್ಲೆ ಈ ವಿದ್ಯುಚ್ಛಕ್ತಿ ಮಂಡಳಿ ಇರುವಾಗ ಅದು ದಿವಾಳಿಯಾಗತಕ್ಕಂಥ ಪರಿಸ್ಥಿತಿಗೆ ಅವಕಾಶ ಕೊಡಬಾರದೆನ್ನುವ ಮಾತನ್ನು ನಾನು ಅತ್ಯಂತ ಕಳಕಳಿಯಿಂದ ಹೇಳುತ್ತಿದ್ದೇನೆ. ವಿದ್ಯುಚ್ಛಕ್ತಿ ಮಂಡಳಿಯು ಮುಖ್ಯಾಧಿಕಾರಿಗಳಾಗಿ ಐ.ಎ.ಎಸ್. ಅಧಿಕಾರಿಗಳನ್ನು ಖಂಡಿತಾ ನೇಮಕ ಮಾಡಬೇಡಿ, ಅವರನ್ನು ಎಲ್ಲಿಯವರೆಗೆ ಅದರ

ಮುಖ್ಯಸ್ಥರನ್ನಾಗಿ ಮಾಡುತ್ತೀರೋ ಅಲ್ಲಿಯವರೆಗಗೆ ನಿಮಗೆ ಹೊರೆ ಜಾಸ್ತಿಯಾಗುತ್ತದೆ. ಇಂಥಾ ಮಂಡಳಿಗಳಿಗೆ ಮುಖ್ಯಸ್ಥರನ್ನು ನೇಮಕ ಮಾಡುವಂಥ ಸಂದರ್ಭದಲ್ಲಿ ತಾಂತ್ರಿಕ ಪರಿಣತೆಯುಳ್ಳವಂಥವರನ್ನು ಮಾತ್ರ ನೇಮಕ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಆಮೇಲೆ, ಈಗ ಎಲೆಕ್ಟ್ರಾನಿಕ್ ಮೀಟರ್ ಹಾಕುವುದರಿಂದ ಬಹಳ ಉದ್ಧಾರವಾಗುತ್ತದೆಂದು ಹೇಳಲಾಗಿದೆ. ಮೊದಲಿದ್ದ 10 ಲಕ್ಷ ಮೆಕಾನಿಕಲ್ ಮೀಟರ್‌ಗಳನ್ನು ತೆಗೆದು ಯಾವ ತಿಪ್ಪೆಗುಂಡಿಗೆ ಎಸೆಯುತ್ತೀರಿ? ಅವುಗಳನ್ನು ಕೀಳುವುದು ಎಸೆಯುವುದು ಹೊಸದಾಗಿ ಎಲೆಕ್ಟ್ರಾನಿಕ್ ಮೀಟರ್ ಹಾಕುವುದು; ಇದೆನು ದಂದೇನಾ? ಈಗಿರುವ ಮೆಕಾನಿಕಲ್ ಮೀಟರ್ ಚೆನ್ನಾಗಿದೆಯೆಂದು ತಜ್ಞರು ಹೇಳಿರುವಾಗ ಎಲೆಕ್ಟ್ರಾನಿಕ್ ಮೀಟರ್ ಅಳವಡಿಸುವುದು ಏಕೆ ಬೇಕಾಗಿದೆ? ಈ ರೀತಿ ಮಾಡುವುದರಿಂದ ರೈತರುಗಳ ಮೇಲೆ, ಎ.ಇ.ಹೆಚ್ ಗ್ರಾಹಕರುಗಳ ಮೇಲೆ ಹಾಗೂ ಎಲ್ಲರ ಮೇಲೂ ಇದರ ದುಷ್ಪರಿಣಾಮ ಬೀರುತ್ತಿದೆ. ಸರ್ಕಾರಕ್ಕೆ ನೇರವಾಗಿ ಕೆಟ್ಟ ಹೆಸರು ತರತಕ್ಕಂಥ ಇಲಾಖೆ ಅಂದರೆ ವಿದ್ಯುಚ್ಛಕ್ತಿ ಇಲಾಖೆ. ಯಾವಾಗ ವಿದ್ಯುಚ್ಛಕ್ತಿ ಇಲಾಖೆ ಚೆನ್ನಾಗಿದ್ದು ಅದು ಬೆಳಕು ಕೊಡುತ್ತದೋ ಆಗ ಅವರು ಚೆನ್ನಾಗಿರುತ್ತಾರೆ, ಯಾವಾಗ ಅದು ಕತ್ತಲು ಕೊಡುತ್ತದೋ ಆಗ ಅವರು ಕತ್ತಲಿನಲ್ಲಿ ಇರುತ್ತಾರೆ. ಸರಿಯಾದ ರೀತಿಯಲ್ಲಿ ಬೆಳಕನ್ನು ಕೊಡವ ವ್ಯವಸ್ಥೆ ಮಾಡಿದರೆ ಅವರ ಸರ್ಕಾರ ಬೆಳಕಾಗಿರುತ್ತದೆ. ಬೆಳಕು ಕೊಡುವ ವ್ಯವಸ್ಥೆ ಇಲ್ಲವೆಂದರೆ ಅದು ಕತ್ತಲಾಗಿರುತ್ತದೆ. ಈ ಮಾತಿನಲ್ಲಿ ಬಹಳ ಅರ್ಥ ಇರುವುದರಿಂದ ಅದನ್ನು ಅವರು ಚಿಂತನೆ ಮಾಡಬೇಕೆಂದು ಬಹಳ ಕಳಕಳಿಯಿಂದ ಹೇಳುತ್ತಿದ್ದೇನೆ. ಈಗ 1,300 ರೂಪಾಯಿಗಳನ್ನು ಠೇವಣಿಯಾಗಿ ವಸೂಲಿ ಮಾಡಬೇಕೆಂದು ಹೇಳಿರುವುದಕ್ಕೂ ನಾವು ವಿರೋಧ ವ್ಯಕ್ತ ಮಾಡುತ್ತೇವೆ, ರೈತರುಗಳ ಪಂಪ್‌ಸೆಟ್ಟುಗಳಿಗೆ ಮೀಟರ್ ಅಳವಡಿಸುವ ಬಗ್ಗೆಯೂ ನಾವು ವಿರೋಧ ವ್ಯಕ್ತ ಮಾಡುತ್ತೇವೆ. ಆದುದರಿಂದ, ಠೇವಣಿ ವಸೂಲು ಮಾಡುವ ಕ್ರಮವನ್ನು ತಕ್ಷಣದಲ್ಲಿ ತಡೆ ಹಿಡಿದು ವಿದ್ಯುಚ್ಛಕ್ತಿ ದರವನ್ನು ಏರಿಸಬೇಕೇ ಅಥವ ಬೇಡವೇ ಎಂಬ ಬಗ್ಗೆ ವಿರೋಧ ಪಕ್ಷಗಳ ಮುಖಂಡರು ಜೊತೆ ಮಾತುಕತೆ ಆಡಬೇಕೆಂದು ಕೇಳುತ್ತೇನೆ. ಇವತ್ತಿನ ದಿವಸ ಬಡವರ ಮೇಲೆ ತೀವ್ರವಾದ ಹೊರಲಾದ ಹೊರೆ ಬೀಳುತ್ತಿದೆ. ಈ ವಿಧಾನ ಸಭಾ ಅಧಿವೇಶನ ಕಳೆದ ನಂತರ ಬಸ್ ದರವನ್ನು ಕೂಡ ಏರಿಸುತ್ತೇವೆಂದು ಈಗಾಗಲೇ ಹೇಳಿದ್ದೀರಿ. ಬಡವರ ಮೇಲೆ ಬೀಳತಕ್ಕಂಥ ಹೊರೆ ತಪ್ಪಬೇಕಾದರೆ ಸರ್ಕಾರವು ಪ್ರಾಮಾಣಿಕ ಚಿಂತನೆ ಮಾಡಬೇಕಾಗುತ್ತದೆ. ನಿನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು, ಗೋಲಿಬಾರ್ ನಡೆದ ವಿಷಯ ನನಗೆ ಹಿಡಿಸಲಿಲ್ಲ ಎಂದು ಹೇಳಿರುವುದು ನನಗೆ ಬಹಳ ಸಂತೋಷವಾಯಿತು. ಕೇರಳ ರಾಜ್ಯದಲ್ಲಿ ಹಿಂದೆ ಪಟ್ಟಂತಾನು ಪಿಳ್ಳೆಯವರು ಮುಖ್ಯಮಂತ್ರಿಯಾಗಿದ್ದಾಗ ಲೋಹಿಯಾ ಅವರು ಜನಗಳ ಮೇಲೆ ಗೋಲಿಬಾರ್ ಮಾಡುವುದು ಸರಿಯಾದ ನೀತಿಯಲ್ಲ ಎಂದು ಹೇಳಿದ್ದ ಮಾತು ನನಗೆ ಜ್ಞಾಪಕಕ್ಕೆ ಬರುತ್ತದೆ. ಲೋಹಿಯಾ ಅವರ ಜೊತೆಯಲ್ಲಿ ಬೆಳೆದು ಬಂದಿರತಕ್ಕಂಥ ಮುಖ್ಯ ಮಂತ್ರಿಯವರಿಗೆ ರೈತರ ಬಗ್ಗೆ ಮತ್ತು ಜನ ಸಾಮಾನ್ಯರ ಬಗ್ಗೆ ಕಳಕಳಿ ಇರಬೇಕೆಂದು ಹೇಳಿ ಈಗ ವಿದ್ಯುಚ್ಛಕ್ತಿ ಮೀಟರ್‌ಗಳನ್ನು ಅಳವಡಿಸಲು ಠೇವಣಿ ವಸೂಲು ಮಾಡುವ ಕ್ರಮವನ್ನು ಕೂಡಲೇ ನಿಲ್ಲಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಸನ್ಮಾನ್ಯ ಅಧ್ಯಕ್ಷರೆ, ಹಲವಾರು ಮುಖ್ಯ ವಿಷಯಗಳನ್ನು ಈಗಾಗಲೇ ಮಾತನಾಡಿರತಕ್ಕಂಥ ಮುಖಂಡರುಗಳು ಹೇಳಿದ್ದಾರೆ. ವಿದ್ಯುಚ್ಛಕ್ತಿ ದರಗಳನ್ನು ಪರಿಷ್ಕರಣೆ ಮಾಡುವ ಸಲುವಾಗಿ ಸದನದ ಒಂದು ಜಂಟಿ ಸಮಿತಿಯನ್ನು ನೇಮಕ ಮಾಡಲಾಗಿತ್ತು, ಆ ಸಮಿತಿಯಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೆ. ಈ ಸಮಿತಿಯು ಏಳು ಸಾರಿ ಸಭೆ ಸೇರಿ ವಿದ್ಯುಚ್ಛಕ್ತಿ ಸಮಸ್ಯೆ ಬಗ್ಗೆ ಚರ್ಚೆ ಮಾಡಿದೆ. ಇದರಲ್ಲಿ ಮುಖ್ಯವಾದ ಪ್ರಶ್ನೆ ಏನೆಂದರೆ, ವಿದ್ಯುಚ್ಛಕ್ತಿ ಮಂಡಳಿ ಸಂಪೂರ್ಣವಾಗಿ ದಿವಾಳಿಯಾಗಿದೆ, ಅದರಲ್ಲಿ ಹಣ ಇಲ್ಲ ಮತ್ತು ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದಕ್ಕೆ ಬಂಡವಾಳ ಇಲ್ಲ. ಈ ಸಮಸ್ಯೆಯನ್ನು ಬಗೆಹರಿಸುವುದ ಹೇಗೆ? ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರಕ್ಕೆ ಗೊತ್ತಿರುವ ಒಂದೇ ಒಂದು ಅಂಶ ಅಂದರೆ, ದರವನ್ನು ಏರಿಸುವುದು. ರೈತರುಗಳು ಹಾಕಿಕೊಂಡಿರುವ ಪಂಪ್ ಸೆಟ್ಟುಗಳಿಗೆ ಉಚಿತವಾಗಿ ಕರೆಂಟ್ ಕೊಡುತ್ತಿರುವುದರಿಂದ ಕೆ.ಇ.ಬಿ. ನಷ್ಟದಲ್ಲಿದೆ. ಈ ನಷ್ಟವನ್ನು ತುಂಬಬೇಕಾದರೆ ದರವನ್ನು ಹೆಚ್ಚು ನಿಗದಿ ಮಾಡುವುದೆ ಅದಕ್ಕೆ ಪರಿಹಾರ ಎಂದು ತಿಳಿದುಕೊಂಡಿದ್ದಾರೆ. ಇದರಲ್ಲಿ ಮೂಲಭೂತವಾದ ಪ್ರಶ್ನೆ ಏನೆಂದರೆ, ಇವತ್ತು ಕೆ.ಇ.ಬಿ. ದಿವಾಳಿಯಾಗಿದೆ, ಅದರಲ್ಲಿ ಏನೂ ಎರಡು ಮಾತಿಲ್ಲ. ಏಕೆ ದಿವಾಳಿಯಾಗಿದೆ? ರೈತರಿಂದ ಹಣ ಬಾಕಿ ಇರುವುದರಿಂದ ಮಾತ್ರ ಕೆ.ಇ.ಬಿ. ದಿವಾಳಿಯಾಗಿದೆಯಾ ಅಥವಾ ಕೆ.ಇ.ಬಿ.ಯೂ ಬೇರೆ ಕಾರಣಗಳಿಗೋಸ್ಕರ ದಿವಾಳಿಯಾಗಿದೆಯಾ ಎಂದು ನೋಡಬೇಕಾಗಿದೆ. ಇವತ್ತು ದಿವಾಳಿಯಾಗಿರುವ ಕೆ.ಇ.ಬಿ.ಯ ಪರಿಸ್ಥಿತಿಯನ್ನು ಉತ್ತಮ ಪಡಿಸಬೇಕೆಂದಾದರೆ, ರೈತರು ಉಪಯೋಗಿಸತಕ್ಕಂಥ ವಿದ್ಯುಚ್ಛಕ್ತಿಗೆ ದರವನ್ನು ಹೆಚ್ಚು ಮಾಡತಕ್ಕಂಥಾದ್ದು ಮತ್ತು ಅವರಿಗೆ ಡಿಪಾಸಿಟ್ ಹಾಕತಕ್ಕಂಥಾದ್ದು ಹಾಗೂ ಯಾವ ರೈತರು ಅನಧಿಕೃತವಾಗಿ ವಿದ್ಯುಚ್ಛಕ್ತಿಯನ್ನು ಉಪಯೋಗ ಮಾಡಿಕೊಂಡು ಪಂಪ್‌ಸೆಟ್ ಓಡಿಸುತ್ತಾರೋ ಅವರುಗಳಿಗೆ ಜುಲ್ಮಾನೆ ಹಾಕುವುದು, ಇದರಿಂದೆಲ್ಲಾ ಬರತಕ್ಕಂಥ ಹಣದಲ್ಲಿ ಕೆ.ಇ.ಬಿ. ಸುಧಾರಣೆ ಆಗುತ್ತದೆಯೇ ಎಂಬ ಬಗ್ಗೆ ಕೂಡ ನಾವು ಯೋಚನೆ ಮಾಡಬೇಕಾಗಿದೆ. ಇಡೀ ಕರ್ನಾಟಕ ರಾಜ್ಯದಲ್ಲಿ 11 ಲಕ್ಷ ಪಂಪ್ ಸೆಟ್ಟುಗಳಿವೆ, ಜಂಟಿ ಸಮಿತಿಯು ಕೊಟ್ಟಿರತಕ್ಕಂಥ ವರದಿಯ 26 ಮತ್ತು 27ನೇ ಪುಟದಲ್ಲಿ ಎಲ್ಲಾ ವಿವರಗಳನ್ನು ಕೊಡಲಾಗಿದೆ. ಅದರಲ್ಲಿ ಕೆ.ಇ.ಬಿ.ನವರು ನಂಬಲಿಕ್ಕೆ ಸಾಧ್ಯ ಇಲ್ಲದೇ ಇರತಕ್ಕಂಥ ಲೆಕ್ಕವನ್ನು ಕೊಟ್ಟಿದ್ದಾರೆ, ಅದನ್ನು ಪರಿಷ್ಕರಿಸಬೇಕೆಂಬ ಒಂದು ಫೈಂಡಿಂಗ್ಸ್ ಕೂಡ ಅದರಲ್ಲಿ ಕೊಡಲಾಗಿದೆ. ಇಡೀ ಕರ್ನಾಟಕದಲ್ಲಿ 37 ಲಕ್ಷ ಏಕರೆಗಳಿಗೆ ಮಾತ್ರ ಪಂಪ್‌ಸೆಟ್ಟುಗಳ ಮೂಲಕ ನೀರಾವರಿ ಆಗುತ್ತಿದೆ. ಈ 37 ಲಕ್ಷ ಏಕರೆ ನೀರಾವರಿ ಮಾಡತಕ್ಕಂಥ ರೈತರುಗಳು ಕೊಡಬೇಕಾದ ಬಾಕಿ ವಿಷಯವನ್ನು ಪರಿಗಣಿಸಿದರೆ, ನಾವು ಕೊಟ್ಟಿರತಕ್ಕಂಥ ವರದಿಯ ಅಂಶದ ಪ್ರಕಾರ ಇವತ್ತು ಒಟ್ಟು 768.15 ಕೋಟಿ ರೂಪಾಯಿಗಳು ಔಟ್ ಸ್ಟ್ಯಾಂಡಿಂಗ್ ಬಿಲ್ಸ್ ಇವೆ. ಅದರಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಂದ ಬರಬೇಕಾಗಿರತಕ್ಕಂಥಾದ್ದು 187.52 ಕೋಟಿ.

ಬೇರೆ ಬೇರೆ ಲೋಕಲ್ ಬಾಡೀಸ್‌ಗಳಿಂದ ಬರತಕ್ಕಂಥಾದ್ದು 155 ಕೋಟಿ, ಕೆಯುಡಬ್ಲ್ಯೂಯಿಂದ ಬರತಕ್ಕಂಥಾದ್ದು 78 ಕೋಟಿ, ಬಿಡಬ್ಲ್ಯೂ ಎಸ್ ಎಸ್‌ಬಿ ನಿಂದ 77 ಕೋಟಿ, ವಿಐ ಎಸ್ ಎಲ್ ನಿಂದ 4 ಕೋಟಿ, ಐಪಿ ಸೆಟ್‌ಗಳಿಂದ 67 ಕೋಟಿ, ಬೇರೆ ವಿಭಾಗಗಳಿಂದ 143

ಕೋಟಿ ಮತ್ತು ಕೋರ್ಟ್ ಕೇಸ್‌ಗಳಲ್ಲಿ 53 ಕೋಟಿಗಳು. ಅತೀ ಕಡಿಮೆ ಮೊತ್ತದ ಬಾಕಿ ಅಂದರೆ ರೈತರಿಂದ ಬರಬೇಕಾದುದು, ಅದು 67 ಕೋಟಿಗಳು ಮಾತ್ರ. ಈ 67 ಕೋಟಿಗಳಿಂದ ಮಾತ್ರ ಈ ಕೆಇಬಿ ಏನಾದರೂ ಉದ್ಧಾರವಾಗುವುದಾದರೆ, ಅವರಿಂದ ಇವರು ವಸೂಲಿ ಮಾಡಲಿ ನಾವು ಬೇಡ ಎಂದು ಹೇಳುವುದಿಲ್ಲ. ಆದರೆ ಒಟ್ಟು ಬಾಕಿ 768 ಕೋಟಿಗಳಲ್ಲಿ ರೈತರಿಂದ ಬರಬೇಕಾದುದು ಕೇವಲ 67 ಕೋಟಿಗಳು ಮಾತ್ರ. ಬೇರೆ ಕಡೆಯಿಂದ ನಿಮಗೆ 701 ಕೋಟಿ ರೂಪಾಯಿಗಳು ಬರಬೇಕು. ಈ ಬಾಕಿಯನ್ನು ವಸೂಲು ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ನಾವು ಹೇಳಿದ್ದೇವೆ. ಅದರ ಬಗ್ಗೆ ಏನೂ ಇಲ್ಲ. ಇನ್ನೊಂದು ವಿಷಯ ಅಂದರೆ ಜಂಟಿ ಸಲಹಾ ಸಮಿತಿಯ ಮುಂದೆ ಈ ಪ್ರಸ್ತಾವನೆ ಬರಲೇ ಇಲ್ಲ. ಯಾವುದೇ ಈ ಪ್ರಸ್ತಾವನೆಗಳನ್ನು ಕೆ ಇ ಬಿಯವರಾಗಲೀ, ಸರಕಾರದ ಪರವಾಗಿ ಇರತಕ್ಕಮಥ ಅಧಿಕಾರಿಗಳೇ ಆಗಲಿ ಜಂಟಿ ಸದನ ಸಮಿತಿಯ ಮುಂದೆ ಈ ಡಿಪಾಸಿಟ್ ಪ್ರಶ್ನೆಯನ್ನಾಗಲೀ, ದಂಡ ಹಾಕತಕ್ಕಂಥಾ ಪ್ರಶ್ನೆಯನ್ನಾಗಲಿ ತಂದಿಲ್ಲ. ಮೀಟರ್ ಅಳವಡಿಸತಕ್ಕಂಥ ಪ್ರಶ್ನೆ ಮಾತ್ರ ಪ್ರಸ್ತಾಪಕ್ಕೆ ಬಂದಿತು. ಈ ಮೂಲಭೂತವಾದ ಪ್ರಶ್ನೆಯ ಬಗ್ಗೆ ನಮ್ಮ ಸ್ನೇಹಿತರುಗಳೆಲ್ಲರೂ ಮಾತನಾಡಿದ್ದರೆ. ಕೆ ಇ ಬಿಯು ರೈತರಿಂದ ದಿವಾಳಿಯಾಗಿದೆಯೇ? ಅವರು ದುಡ್ಡು ಕಟ್ಟಿದರೆ ಅದು ಸರಿಹೋಗುತ್ತದೆಯೇ? ನಮ್ಮ ರಾಜ್ಯದ ರೈತರುಗಳು ಯಾವೊತ್ತೂ ನಮಗೆ ಉಚಿತವಾಗಿ ಕರೆಂಟ್ ಕೊಡಿ ಎಂದು ಕೇಳಲೇ ಇಲ್ಲ. ಎಲೆಕ್ಷನ್‌ಗಳಲ್ಲಿ ಮತಗಳಿಸುವುದ-ಕ್ಕೋಸ್ಕರವಾಗಿ ಹಿಂದಿನಿಂದಲೂ ಬಂದಂತ ಎಲ್ಲಾ ಸರಕಾರಗಳೂ ಕೂಡ ರೈತರಿಂದ ಮತಗಳಿಕೆಗಾಗಿ ವಿದ್ಯುತ್‌ನ್ನು ಉಚಿತವಾಗಿ ಸರಬರಾಜು ಮಾಡುತ್ತೇವೆಂದು ಹೇಳಿವೆ. ಹೀಗೆ ಉಚಿತವಾಗಿ ಸರಬರಾಜು ಮಾಡಿ ಎಂದು ಸರಕಾರ ಕೆ ಇ ಬಿಗೆ ಹೇಳಿದಂಥ ಸಂದರ್ಭದಲ್ಲಿ ಒಂದು ಮಾತು ಕೊಟ್ಟಿತು. ವಿದ್ಯುಚ್ಛಕ್ತಿಯನ್ನು ರೈತರಿಗೆ ನೀವು ಉಚಿತವಾಗಿ ಕೊಟ್ಟರೆ ಆ ಹಣವನ್ನು ಸರಕಾರದವರು ಕೆಇಬಿಗೆ ತುಂಬಿಕೊಡುತ್ತೇವೆಂಬ ಭರವಸೆಯನ್ನು ಕೊಡಲಾಗಿತ್ತು. ಆದರೆ ಒಂದೇ ಒಂದು ರೂಪಾಯಿಯನ್ನು ಕೂಡ ರೈತರಿಗೆ ಉಚಿತವಾಗಿ ಕೊಟ್ಟ ಕರೆಂಟ್‌ನ ಬಗ್ಗೆ ಕೆಇಬಿಯವರಿಗೆ ಸರ್ಕಾರದ ಇದುವರೆಗೂ ಜಮಾ ಮಾಡಿಲ್ಲ. ಅದೇ ರೀತಿಯಲ್ಲಿ ನಮ್ಮ ಸಮಿತಿಯ ಫೈಂಡಿಂಗ್ಸ್‌ನಲ್ಲಿ ನಾವು ಹೇಳಿದ್ದೇವೆ. ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ಮನೆಗಳಿಗೆ ಕರೆಂಟನ್ನು ಕೊಡಿ ಎಂದು ಹೇಳಿದ್ದಾರೆ. ಅಲ್ಲಿ ಸರಬರಾಜು ಮಾಡಿದ ಕರೆಂಟ್‌ನ ಹಣವನ್ನು ನಾವು ಜಮಾ ಮಾಡುತ್ತೇವೆ ಎಂಬ ಆಶ್ವಾಸನೆಯನ್ನು ಕೂಡ ಕೊಟ್ಟಿದ್ದಿರಿ. ಅದನ್ನು ಕೂಡ ಕೊಡಲಿಲ್ಲ. ಸರಕಾರದವರು ಹೀಗೆ ತಮ್ಮ ಜವಾಬ್ದಾರಿಯಿಂದ ನುಣುಚಿಕೊಂಡು ತಾವು ಏನು ಕೆಇಬಿಯವರಿಗೆ ಮಾತುಗಳನ್ನು ಕೊಟ್ಟಿದ್ದಿರಿ ಆ ಪ್ರಕಾರ ಹಣವನ್ನು ತುಂಬದೆ ತಾನು ಹೇಳಿದ ಮಾತನ್ನು ಉಳಿಸಿಕೊಳ್ಳಲು ಸಾಧ್ಯವಾಗದೇ ಕೆಇಬಿಯ ದಿವಾಳಿತನಕ್ಕೆ ಕಾರಣವಾಗಿ ಆ ಭಾರವನ್ನು ಇವೊತ್ತು ರೈತರ ಮೇಲೆ ಹಾಕಲು ಹೊರಟಿದೆ. ರೈತರಿಗೆ ಪುಕ್ಕಟೆಯಾಗಿ ಕರೆಂಟ್ ಕೊಟ್ಟು ನಮ್ಮ ಸರಕಾರ ಮತ್ತು ಕೆಇಬಿ ದಿವಾಳಿಯಾತ್ತಿದೆ ಎಂದು ಹೇಳುತ್ತಿದ್ದೀರಿ. ಈ ಮಾತನ್ನು ಯಾರೂ ಕೂಡ ಒಪ್ಪಲು ಸಾಧ್ಯವಿಲ್ಲ. ಅದೇ ರೀತಿಯಲ್ಲಿ ಸದನ ಸಮಿತಿಯಲ್ಲಿ ತಮಿಳುನಾಡು ಮತ್ತು ಆಂಧ್ರಪ್ರದೇಶದ ಕರೆಂಟ್‌ನ ದರಗಳನ್ನು ಪ್ರಸ್ತಾಪ ಮಾಡಿದ್ದೇವೆ. ಅದರ ಪ್ರಕಾರ ಆಂಧ್ರ ಪ್ರದೇಶದಲ್ಲಿ 50 ರೂಪಾಯಿಗಳು 1 ಹೆಚ್‌ಪಿಗೆ ಎಂದು ನಿಗದಿ ಮಾಡಿದೆ. ಐದು ಹೆಚ್ ಪಿ ವರೆಗೆ 250 ರೂಪಾಯಿಗಳು 10 ಹೆಚ್‌ಪಿಯವರೆಗೆ 500 ರೂಪಾಯಿಗಳು.

ತಮಿಳುನಾಡಿನಲ್ಲಿ 400 ರೂಪಾಯಿ ಇದ್ದುದನ್ನು 500 ರೂಪಾಯಿ ಮಾಡಿದ್ದಾರೆ. ನಮ್ಮ ಕರ್ನಾಟಕದಲ್ಲಿ ಎಂ ಎಸ್ ಇ ಬಿಯಲ್ಲಿ 400 ರೂಪಾಯಿಗಳು ಪರ್ ಅನಮ್ ಎಂದು ಹಾಕಿದ್ದಾರೆ. ಇವೊತ್ತು ನಾವು ಆಂಧ್ರ, ತಮಿಳುನಾಡು ಮುಂತಾಗಿ ಹೋಲಿಕೆ ಮಾಡಿ ನೋಡಿದರೆ ಕರೆಂಟ್‌ನ ದರವು ಕರ್ನಾಟಕದಲ್ಲಿ ಹೆಚ್ಚು ಇದೆ.

ಶ್ರೀ ಕೆ.ಎನ್. ನಾಗೇಗೌಡ:- ಅಧ್ಯಕ್ಷರೆ, Against demand and supply.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಅಧ್ಯಕ್ಷರೆ, Against demand and supply. ಎಂದು ಹೇಳಿದರೆ ಮತ್ತೆ ಇನ್ನೊಂದು ಪ್ರಶ್ನೆ ಬಂದು ಮಾನ್ಯ ನಾಗೇಗೌಡರೇ ಸಿಕ್ಕಿಹಾಕಿಕೊಳ್ಳುತ್ತಾರೆ. ನಿಮಗೆ ಡಿಮ್ಯಾಂಡ್ ಎಷ್ಟಿದೆ? ಈಗ ಪಂಪ್‌ಸೆಟ್ಸ್ 11 ಲಕ್ಷಗಳು ಇವೆ. 25 ವರ್ಷಗಳ ಹಿಂದೆ ನಿಮ್ಮ ಉತ್ಪಾದನೆ ಏನಿತ್ತು ಮತ್ತು ಇವೊತ್ತು ಏನಿದೆ? ಹಿಂದೆ ಇದ್ದ ಎಲ್ಲಾ ಸರಕಾರಗಳೂ ಕೂಡ ಉತ್ಪಾದನೆಗೆ ಗಮನವನ್ನು ಕೊಡಲಿಲ್ಲ. ಹಾಗಾಗಿ ಉತ್ಪಾದನೆಯು ಹೆಚ್ಚು ಆಗಲಿಲ್ಲ. ಇದಕ್ಕಾಗಿ ನೀವು ರೈತರನ್ನು ದೂರಲು ಸಾಧ್ಯವಿಲ್ಲ. ಗ್ರಾಹಕರನ್ನು, ಜನರನ್ನು ದೂರಲು ಸಾಧ್ಯವಿಲ್ಲ. ಇದುವರೆಗೆ ಬಂದಿರತಕ್ಕಂಥ ಎಲ್ಲಾ ಸರಕಾರಗಳ ಬೇಜವಾಬ್ದಾರಿತನದಿಂದ ವಿದ್ಯುಚ್ಛಕ್ತಿ ಉತ್ಪಾದನೆಯ ಕಡೆಗೆ ಗಮನಕೊಡದೆ ಈಗ ಡಿಮ್ಯಾಂಡ್ ಹೆಚ್ಚಾಗುತ್ತಿದೆ ಎಂದು ಹೇಳುತ್ತಿದ್ದೀರಿ. ಡಿಮ್ಯಾಂಡ್ ಸಹಜವಾಗಿ ಹೆಚ್ಚಾಗಿಯೇ ಆಗುತ್ತದೆ. ಇವೊತ್ತು ತಂತ್ರಜ್ಞಾನ, ಕಾರ್ಖಾನೆಗಳು, ಕೈಗಾರಿಕೆಗಳು, ಹೆಚ್ಚಾಗುತ್ತಿವೆ, ಜನರ ಅವಶ್ಯಕತೆಗಳು ಬೆಳೆಯುತ್ತಾ ಇವೆ. ವಿದ್ಯುತ್ ಇವೊತ್ತು ಜನಜೀವನದ ನರನಾಡಿಯಾಗುತ್ತಾ ಇದೆ. ಡಿಮ್ಯಾಂಡ್ ಹೆಚ್ಚುತ್ತಿದೆ ಎಂಬುದು ಸರ್ವೇ ಸಾಮಾನ್ಯವಾದ ಸತ್ಯ. ಡಿಮ್ಯಾಂಡ್ ಹೆಚ್ಚುತ್ತಿದ್ದು ಉತ್ಪಾದನೆ ಮಾಡಲು ನಾವು ಯಾವುದೇ ಯೋಜನೆಯನ್ನು ಹಾಕಿಕೊಳ್ಳದೆ ಇದ್ದರೆ ಹೇಗೆ? ಇನ್ನೂ ಐದು ವರ್ಷಗಳು ಹೋದರೆ ಇನ್ನೂ ಹೆಚ್ಚು ಡಿಮ್ಯಾಂಡ್ ಆಗುತ್ತದೆ. ಇಲ್ಲಿರತಕ್ಕಂಥ ಮೂಲದೋಷ ಅಂದರೆ ವಿದ್ಯುಚ್ಛಕ್ತಿ ಉತ್ಪಾದನೆಗೆ ಯೋಜನೆಗಳು ಇಲ್ಲ. ಹಾಗಾಗಿಯೇ ಇವೊತ್ತು ಡಿಮ್ಯಾಂಡ್ ಎನ್ನುವ ಪ್ರಶ್ನೆ ಬಂದಿದೆಯೇ ಹೊರತು ರೈತರಿಗೆ ವಿದ್ಯುತ್‌ನ್ನು ಕೊಡುವುದರಿಂದ ಬಂದಿಲ್ಲ. ನಮ್ಮ ಪ್ರಶ್ನೆ ಇಷ್ಟೇ. ನೀವು ಜಂಟಿ ಸದನ ಸಮಿತಿಯ ಮುಂದೆ ಯಾವುದೇ ವಿಷಯವನ್ನು ತಾರದೆ ಡಿಪಾಸಿಟ್‌ನ್ನು ಫಿಕ್ಸ್ ಮಾಡಿದ್ದೀರಿ. ಡಿಪಾಸಿಟ್‌ನ ಜೊತೆಗೆ ಅತ್ಯಂತ ಕ್ರೂರವಾದ ರೀತಿಯಲ್ಲಿ ಅವರ ಮೇಲೆ ಜುಲ್ಮಾನೆಯನ್ನು ಹಾಕತಕ್ಕಂಥಾದ್ದನ್ನು ಕೂಡ ಮಾಡಿದ್ದೀರಿ. ಅನಧಿಕೃತವಾಗಿ ಯಾರೆಲ್ಲ ವಿದ್ಯುಚ್ಛಕ್ತಿಯನ್ನು ಬಳಸುತ್ತಾರೋ ಅವರಿಗೆ 10 ಸಾವಿರ ರೂಪಾಯಿಗಳವರೆಗೆ ಜುಲ್ಮಾನೆ. ಇದು ಜನರಲ್ ಕ್ಯಾಟಗರಿಯವರಿಗೆ. ಆದರೆ ಎಸ್‌ಸಿ/ಎಸ್‌ಟಿ. ಯವರಿಗೆ 5 ಸಾವಿರ ರೂಪಾಯಿ ಜುಲ್ಮಾನೆ. ಜುಲ್ಮಾನೆಯನ್ನು ಕಟ್ಟದೆ ಹೋದರೆ ನಿಮ್ಮನ್ನು ಜೈಲಿಗೆ ಕಳುಹಿಸುತ್ತಾರೆ. ಇದು ನಿಮ್ಮ ಅಧಿಕಾರಿಗಳು ಹೇರಿರತಕ್ಕಂಥ ಎಚ್ಚರಿಕೆ. ಇದಕ್ಕೆ ಏನಾದರೂ ಅರ್ಥವಿದೆಯೇ? ನಿಮಗೆ ಜುಲ್ಮಾನೆಯನ್ನು ಹಾಕಲೇ ಬೇಕೆಂದಿದ್ದರೆ ಅದು ಅಧಿಕಾರಿಗಳಿಗೇ ಹೊರತು ರೈತರುಗಳಿಗೆ ಅಲ್ಲ. ಏಕೆಂದರೆ ರೈತರು ಕಂಬ ಹೊತ್ತುಕೊಂಡು ಹೋಗಿ ಲೈನ್ ಹಾಕಿಕೊಳ್ಳಲು ಆಗುವುದಿಲ್ಲ. ಇಲ್ಲಿ ನಿಮ್ಮ ಕೆಇಬಿ ಅಧಿಕಾರಿಗಳು ಶಾಮೀಲಾಗಿ ಅವರ ಭ್ರಷ್ಟತನದಿಂದಾಗಿ ಇದು ಆಗಿರುತ್ತದೆ. ಆದ್ದರಿಂದ ಅಧಿಕಾರಿಗಳಿಗೆ ಜುಲ್ಮಾನೆಯನ್ನು ಹಾಕಬೇಕು. ಒಬ್ಬ ರೈತನು ಒಂದು ಬೋರ್‌ವೆಲ್‌ನ್ನು ಕೊರೆಯಬೇಕಾದರೆ 50

ರಿಂದ 70 ಸಾವಿರ ರೂಪಾಯಿಗಳ ವರೆಗೆ ಆತನು ಅದಕ್ಕೆ ಬಂಡವಾಳವನ್ನು ಹಾಕಬೇಕು. ಅವನು ಬೋರ್ ಕೊರೆದು ತನಗೆ ಕರೆಂಟ್ ಸಪ್ಲೈ ಮಾಡಿ ಎಂದು ಅರ್ಜಿ ಕೊಡುತ್ತಾನೆ. ಅಂಥ ಅರ್ಜಿಗಳನ್ನು ನೀವು 4-5 ವರ್ಷಗಳ ವರೆಗೆ ಪೆಂಡಿಂಗ್‌ನಲ್ಲಿಟ್ಟುಕೊಂಡರೆ ಹೇಗೆ? ಕೊಡುವುದಿಲ್ಲವೆಂದೂ ಹೇಳದೇ ಕೊಡುತ್ತೇವೆಂದೂ ಹೇಳದೆ ಡಿಪಾಸಿಟ್ ಮಾಡಿಸಿಕೊಂಡು, ವರ್ಕ್ ಆರ್ಡರ್ಸ್‌ನ್ನು ನಿಮ್ಮ ಮುಂದೆ ಇಟ್ಟುಕೊಂಡು ನಿಮ್ಮ ಅಧಿಕಾರಿಗಳು ಅವುಗಳೆಲ್ಲವನ್ನು ಕಛೇರಿಯಲ್ಲಿಟ್ಟುಕೊಂಡರೆ ಇಂಥ ಸಂದರ್ಭದಲ್ಲಿ ರೈತರು ಏನು ಮಾಡಬೇಕೆಂದು ನೀವೇ ಹೇಳಿ. ನೀವು ಅರ್ಜಿ ತೆಗೆದುಕೊಂಡು, ವರ್ಕ್ ಆರ್ಡರ್ ಕೊಟ್ಟ ಮೇಲೆಯೂ, ಸ್ಯಾಂಕ್ಷನ್ ಮಾಡಿದಮೇಲೆಯೂ ಅವರಿಗೆ ಕರೆಂಟ್‌ನ್ನು ಕೊಟ್ಟಿಲ್ಲ ಅಂದರೆ ಇಲ್ಲಿ ಯಾರ ತಪ್ಪು? ಯಾರಿಗೆ ಜುಲ್ಮಾನೆ ಹಾಕಬೇಕೆಂದು ಹೇಳುತ್ತೀರಿ? ಈ ಕುರಿತು ನಾವೆಲ್ಲರೂ ಇವೊತ್ತು ಚಿಂತನೆ ಮಾಡಬೇಕಾಗಿದೆ. ಜುಲ್ಮಾನೆ ಹಾಕತಕ್ಕಂಥಾದ್ದು ತೀರಾ ಅನ್ಯಾಯ ಮಾಡಿದ ಸಂದರ್ಭದಲ್ಲಿ ಮಾತ್ರ. ನಾವು ಸದನದ ಸಮಿತಿಯಲ್ಲಿ ರೆಕ್‌ಮಂಡ್ ಮಾಡಿದ್ದೇವೆ. ನಾವು ಉಚಿತವಾಗಿ ಕರೆಂಟ್ ಕೊಡಿ ಎಂದು ಹೇಳಲಿಲ್ಲ. ರೈತರೆಲ್ಲರೂ ಹಣವನ್ನು ಕೊಡಬೇಕೆಂದು ಹೇಳಿದ್ದಕ್ಕೆ ಒಪ್ಪಿದ್ದೇವೆ. ಸರ್ವಸಮ್ಮತವಾದಂಥ ತೀರ್ಮಾನಕ್ಕೆ ನಾವು ಒಪ್ಪಿದ್ದೇವೆ. ಒಂದು ಹೆಚ್‌ಪಿಗೆ 100 ರೂಪಾಯಿಗಳನ್ನು ಹಾಕಬೇಕೆಂದು ಹೇಳಿದ್ದನ್ನು ನಾವು ಒಪ್ಪಿದ್ದೇವೆ. ಹಾಗಾದರೆ ಜುಲ್ಮಾನೆ ಹಾಕತಕ್ಕಂಥ ಪ್ರಶ್ನೆ ಯಾರ ತಲೆಯಿಂದ ಬಂತು? ಹಾಗಾದರೆ ನಿಮ್ಮ ನೌಕರರಿಗೆ ಸುಮಾರು 40 ಸಾವಿರ ಜನರಿಗೆ ಉಚಿತವಾಗಿ ನೀವು ಕರೆಂಟ್‌ನ್ನು ಕೊಡುತ್ತಾ ಇದ್ದೀರಿ? ಆ ಹಣವನ್ನು ಯಾರು ಕಟ್ಟಿಕೊಡುತ್ತಾರೆ? ನಾನು ರೈತರ ಮತ್ತು ನಿಮ್ಮ ಉದ್ಯೋಗಿಗಳ ಮಧ್ಯೆ ಭಿನ್ನಭಿಪ್ರಾಯವನ್ನು ತರಲು ಈ ಮಾತನ್ನು ಹೇಳುತ್ತಾ ಇಲ್ಲ. ಇವೊತ್ತು ಮೂಲ ಭೂತವಾದ ಪ್ರಶ್ನೆ ಇರತಕ್ಕಂಥಾದ್ದು ಕೃಷಿರಂಗದ ಮೂಲ ಅವಶ್ಯಕತೆಗೆ ಬೇಕಾಗಿರತಕ್ಕಂಥ ವಿದ್ಯುತ್ಛಕ್ತಿಗೆ ನೀವು ಈ ರೀತಿಯಾದಂಥ ಕ್ರಮಗಳನ್ನು ತೆಗೆದುಕೊಂಡರೆ ಇಡೀ ಕೃಷಿರಂಗದ ಮೇಲೆ ಅದು ವ್ಯಾಪಕವಾದ ಪರಿಣಾಮವನ್ನು ಬೀರುತ್ತದೆ. ನಾನು ಕೋಲಾರ ಜಿಲ್ಲೆಯಿಂದ ಬಂದವನು. ನಮ್ಮ ಜಿಲ್ಲೆಯ ವ್ಯವಸಾಯವು ಪೂರ್ಣವಾಗಿ ಐಪಿ ಸೆಟ್‌ಗಳ ಮೇಲೆ ನಿಂತಿದೆ. ನಮಗೆ ನದಿ, ನಾಲೆ, ಕೆರೆ, ಕೋಡಿಗಳಾವುವೂ ಇಲ್ಲ. ನಮಗೆ ಬೋರ್‌ವೆಲ್‌ನಿಂದಲೇ ನೀರು ಬರಬೇಕು. ಇಡೀ ನಮ್ಮ ಕೋಲಾರ ಜಿಲ್ಲೆಯ ವ್ಯವಸಾಯವು ಅದರ ಮೇಲೆ ನಿಂತಿದೆ. ನೀವು ಹೀಗೆ ಮಾಡಿದರೆ ನಮ್ಮ ರೈತರ ಪರಿಸ್ಥಿತಿಯು ಏನಾಗಬೇಕು? ಇಷ್ಟಾಗಿಯೂ ನಿಮಗೆ ರೈತರಿಂದ ಬರಬೇಕಾಗಿರುವುದು ಕೇವಲ 67 ಕೋಟಿ ರೂಪಾಯಿಗಳು ಮಾತ್ರ ಎಂಬ ವಿಚಾರ ನಿಮ್ಮ ಅಧಿಕಾರಿಗಳಿಗೆ ತಿಳಿದಿಲ್ಲವೆ?

4.00 ಪಿ.ಎಂ

ಇನ್ನು 701 ಕೋಟಿ ರೂಪಾಯಿ ಹಣವೇನಿದೆ ಅದರ ಬಗ್ಗೆ ನೀವು ಚಿಂತನೆ ಮಾಡಿ; ಆಲೋಚನೆ ಮಾಡಿ. ನಾವು ಇದರ ಬಗ್ಗೆ ಪ್ರತಿಭಟನೆ ಮಾಡಿದ್ದೇವೆ, ಮುಖ್ಯಮಂತ್ರಿಗಳ ಮನೆ ಮುಂದೆ ಧರಣಿ ಮಾಡಿದ್ದೇವೆ ಮಾನ್ಯ ಇಂಧನ ಸಚಿವರ ಜೊತೆ ಚರ್ಚೆ ಮಾಡಿದ್ದೇವೆ. ದಂಡ ಹಾಕುವ ವಿಷಯದ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆಂದು ಅವರು ಆಶ್ವಾಸನೆ ಕೊಟ್ಟರು, ಇವತ್ತಿಗೆ ಒಂದು ತಿಂಗಳಾದರೂ ಅವರು ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಅದರ ಪರಿಣಾಮ ಇವತ್ತು ಇಡೀ

ಕೃಷಿರಂಗದ ಮೇಲಾಗುತ್ತದೆ. ಈಗಾಗಲೇ ಕೃಷಿ ಉತ್ಪನ್ನ ಕಡಿಮೆಯಾಗುತ್ತದೆ. ಆಹಾರ ಪದಾರ್ಥಗಳ ಉತ್ಪಾದನೆ ಕಡಿಮೆಯಾಗುತ್ತಿದೆ. ಇವತ್ತು ವಿದ್ಯುತ್ಮಂಡಳಿಯಲ್ಲಿ ಆಡಳಿತದ ಅವ್ಯವಸ್ಥೆ ನೋಡಿದರೆ ಯಾವ್ಯಾವ ದಾರಿಯಲ್ಲಿ ನೋಡಿದರೂ ಎಲೆಕ್ಟ್ರಿಕ್ ಪೋಲ್, ಟ್ರಾನ್ಸ್‌ಫಾರ್ಮರ್ಸ್, ವೈರ್ಸ್ ಬಿದ್ದಿರುತ್ತದೆ. ಅದನ್ನು ಕೇಳುವವರು ಯಾರೂ ಇಲ್ಲ. ನಾನು ಇವತ್ತು ಇಂಧನ ಸಚಿವರಲ್ಲಿ ಕೇಳುತ್ತಿದ್ದೇನೆ, ಹುಬ್ಬಳ್ಳಿಯ ಸ್ಟೋರ್ಸ್‌ನಲ್ಲಿ ಐದಾರು ವರ್ಷಗಳ ಹಿಂದೆ ಕೊಂಡು ಏನೂ ಕೆಲಸಕ್ಕೆ ಬಾರದ ರೀತಿಯಲ್ಲಿ 10-20 ಕೋಟಿ ರೂಪಾಯಿ ಬೆಲೆಯ ಮೆಟೀರಿಯಲ್ಸ್ ಬಿದ್ದಿದೆ. ಇದಕ್ಕೆ ಯಾರು ಹೊಣೆ? ಇದಕ್ಕೆ ಯಾರಿಗೆ ಜುಲ್ಮಾನೆ ಹಾಕುತ್ತೀರಿ? ಯಶವಂತಪುರದ ಪೀಣ್ಯ ಎಸ್ಟೇಟ್‌ನಲ್ಲಿ ಕಾರ್ಖಾನೆಗಳ ಮಾಲೀಕರು ಬಾಕಿ ವಸೂಲ್ಮಾಡುತ್ತಾರೆಂದು ಇಡೀ ಕೆಇಬಿ ಕಛೇರಿಯನ್ನೇ, ದಾಖಲೆಗಳನ್ನೇ ಸುಟ್ಟುಹಾಕಿ ಬಿಟ್ಟರು ಅದಕ್ಕೆ ಯಾರು ಜವಾಬ್ದಾರಿ. ಯಾರಿಗೆ ಜುಲ್ಮಾನೆ ಹಾಕುತ್ತೀರಿ? ಇವತ್ತು ರೈತನಿಗೆ ಅಂತಹ ಅವಕಾಶಗಳೇನಿಲ್ಲ, ಅವನು ಕರೆಂಟ್ ತಗೊಂಡಿದ್ದರೂ ಬಹಿರಂಗವಾಗಿ ಕಾಣುತ್ತದೆ ತಗೊಳದೇ ಇದ್ದರೂ ಕಾಣುತ್ತೆ ಆಫೀಸಿಗೆ ಹೋದರೂ ಕಾಣುತ್ತೆ ಎಲ್ಲಿ ಹೋದರೂ ಕಾಣುತ್ತೆ. ಇವರೆಲ್ಲ ಯಾರೂ ಕಣ್ಣಿಗೆ ಕಾಣುವುದಿಲ್ಲ, ಇವರ ಮೇಲೆ ಯ್ಯಾ ಕ್ರಮ ತೆಗೆದುಕೊಳ್ಳುವುದಿಲ್ಲ, ಅದರ ಬದಲಿಗೆ ನೀವು ರೈತರನ್ನೇ ಏಕೆ ಬಲಿಪಶುಗಳನ್ನು ಮಾಡುತ್ತೀರಿ? ರೈತರಿಂದ ಸಾವಿರಾರು ಕೋಟಿ ರೂಪಾಯಿ ನಷ್ಟವಾಗಿದ್ದರೆ ಅದರ ಬಗ್ಗೆ ನೀವು ಆಲೋಚಿಸಿ ನಮ್ಮದೇನೂ ತಕರಾರಿಲ್ಲ. ಆದರೆ ಇನ್ನೊಂದು ನೀವು ಗಂಭೀರವಾಗಿ ಅತಿಮುಖ್ಯವಾಗಿ ಆಲೋಚಿಸಬೇಕಾಗಿರುವುದು: ಕೃಷಿರಂಗ ನಾಳೆ ದಿವಸ ಏನಾಗುತ್ತದೆ ಎಂದು. ಇದರ ಪರಿಣಾಮಗಳು ಏನೇನಾಗಬಹುದು. ಈಗ ವಿದ್ಯುತ್ ಕೊರತೆ ಇದೆ, ಇದನ್ನು ಎಲ್ಲರೂ ಒಪ್ಪಲೇಬೇಕಾದ ವಿಷಯ. ಅದಕ್ಕೆ ಯಾವುದೋ ಒಂದು ಸರ್ಕಾರ ಜವಾಬ್ದಾರಿ ಮಾಡಲಿಕ್ಕೆ ಆಗುವುದಿಲ್ಲ. ವಿದ್ಯುತ್ ಕೊರತೆ ನೀಗಲು ಕ್ರಮ ತೆಗೆದುಕೊಳ್ಳುವ ಸಂದರ್ಭದಲ್ಲಿ ಇಂತಹ ಕ್ರಮಗಳನ್ನು ತೆಗೆದುಕೊಳ್ಳುವುದು ಸರಿಯಲ್ಲ. ಇನ್ನೊಂದು ಸಮಸ್ಯೆಯಿದೆ. ನಬಾರ್ಡಿನಿಂದ ಸಾಲ ಕೊಡುತ್ತಾರೆ, ನಬಾರ್ಡಿಗೆ ಅರ್ಜಿ ಹಾಕಿದರೆ ನಾಲ್ಕೈದು ವರ್ಷ ಅವರು ದುಡ್ಡು ಕೊಡುವುದಿಲ್ಲ ಆದರೆ ಬಡ್ಡಿ ಮಾತ್ರ ವಸೂಲ್ಮಾಡುತ್ತಾರೆ. ಇದು ರೈತರಿಗೆ ಹೊರೆಯಾಗುತ್ತದೆ. ಅದನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕ ಪರಿಸ್ಥಿತಿ ಇಲ್ಲ. ಅದೇ ರೀತಿ ಕೆ ಇಬಿಯ ಉತ್ಪತ್ತಿ ಹೆಚ್ಚಬೇಕು ಅದರ ಆದಾಯ ಹೆಚ್ಚಾಗಬೇಕು ಇದಕ್ಕೆ ಮೂಲ ಕಾರಣವೇನೆಂದು ಕಂಡು ಹಿಡಿಯದೆ ಗ್ರಾಹಕರ ಮೇಲೆ ಹೊರೆ ಹಾಕುವುದು ಯಾವುದೇ ಸಂದರ್ಭದಲ್ಲಿ ಸರ್ಕಾರಕ್ಕೆ ಒಳ್ಳೆಯದಾಗುವುದಿಲ್ಲ. ಇದನ್ನು ಸರ್ಕಾರ ತಿಳಿಯಬೇಕು. ಪ್ರತಿಯೊಂದರ ದರವನ್ನೂ ಏರಿಸುತ್ತಾ ಹೋದರೆ ಸರ್ಕಾರದ ಬಗ್ಗೆ ಜನರಲ್ಲಿ ಯಾವರೀತಿಯ ಅಭಿಪ್ರಾಯ ಬರುತ್ತದೆ. ಸರ್ಕಾರದ್ದು ಒಂದು ವಾದ ಇದೆ, ಏನು ಮಾಡುವುದು ನಾವು ಅಧಿಕಾರಕ್ಕೆ ಬಂದಾಗಲೇ ಎಲ್ಲ ಸಮಸ್ಯೆಗಳು ಬಂದುಬಿಟ್ಟಿವೆ ಇದನ್ನು ಹೀಗೆ ನಾವೂ ಮುಂದುವರೆಸಿಕೊಂಡು ಹೋದರೆ ನಾಳೆ ಏನಾದರೂ ಬರುತ್ತದೆ ಎಂದು. ನೀವು ಅಧಿಕಾರಕ್ಕೆ ಬಂದಾಗಲೇ ಉದ್ಭವಿಸಿರುವ ಸಮಸ್ಯೆಯಲ್ಲ ಇದು. ಈ ಸಮಸ್ಯೆ ಪರಿಹಾರವಾಗಬೇಕಾದರೆ ವೈಜ್ಞಾನಿಕ ದೃಷ್ಟಿಯಿಂದ ಜನರ ಪರವಾಗಿ ಆಲೋಚಿಸಬೇಕು. ಆಗ ಮಾತ್ರ ಪರಿಹಾರ ಹುಡುಕಲು ಸಾಧ್ಯವಿದೆ. ಆ ಪರಿಹಾರಗಳೂ ಏಕಾ ಏಕಿಯಾಗಿ ಹೊರೆಯಾಗಬಾರದು. ಹೊರೆಯಾದರೆ ಸರ್ಕಾರದ ಬಗ್ಗೆ

ಜನರಿಗೆ ತೀವ್ರ ಅಸಮಾಧಾನ ಬರುತ್ತದೆ. ಉತ್ತಮಪಡಿಸಬೇಕಾದರೆ ಹಂತಹಂತವಾಗಿ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಏಕಾ ಏಕಿ ಐಪಿಸೆಟ್‌ಗೆ ದರ ನಿಗದಿಮಾಡಿದಿರಿ ಡಿಪಾಸಿಟ್ ಹೆಚ್ಚುಮಾಡಿದಿರಿ ಜುಲ್ಮಾನೇನೂ ಹಾಕಿದಿರಿ. ಇದೆಲ್ಲ ಹಾಕಿದರೂ ಸರ್ಕಾರಕ್ಕೆ ನಾನು ಕೇಳುತ್ತಿದ್ದೇನೆ, ಇವತ್ತಿಗೂ ರೈತರಿಗೆ ಅವಶ್ಯಕತೆ ಇರುವಷ್ಟು ಸಮಯ ವಿದ್ಯುತ್ ಒದಗಿಸಲು ನಿಮಗೆ ಸಾಧ್ಯವಾಗಿದೆಯಾ? 6 ಗಂಟೆ ಪವರ್‌ಕಟ್ ಎಂದು ಹೇಳಿದಿರಿ, ರೈತರು ಗಲಾಟೆ ಮಾಡಿದರು 8 ಗಂಟೆ ಎಂದು ಹೇಳಿದಿರಿ, ಅದೂ ಒಂದೊಂದು ಭಾಗಕ್ಕೆ ಒಂದೊಂದು ವೇಳೆಯಲ್ಲಿ ವಿದ್ಯುತ್ ಕೊಡುತ್ತೀರಿ. ಕೃಷಿ ಬಗ್ಗೆ ಮಾನ್ಯ ವಾಟಾಳ್ ನಾಗರಾಜರು ಹೇಳಿದ ಅಭಿಪ್ರಾಯವನ್ನು ನಾನೂ ಸಮರ್ಥಿಸುತ್ತೇನೆ. ಕೃಷಿ ಬಗ್ಗೆ ಏನು ಪರಿಜ್ಞಾನ ಇರದಂತಹ ತಾಂತ್ರಿಕ ಪರಿಣತಿ ಇಲ್ಲದಿರುವ ಜನ ಅದರ ಜವಾಬ್ದಾರಿ ವಹಿಸಿಕೊಂಡರೆ ಏನಾಗಬಹುದೆನ್ನುವುದಕ್ಕೆ ಒಂದೇ ಒಂದು ನಿದರ್ಶನ. ಕೃಷಿಗೆ ನೀರು ಹರಿಸುವಾಗ ಒಂದು ಕಡೆ 6 ಗಂಟೆ ಇನ್ನೊಂದು ಕಡೆ 6 ಗಂಟೆ ಕೊಟ್ಟಾಗ ಮಣ್ಣಿನ ಗುಣ ಬೇರೆ ಬೇರೆ ಇರುತ್ತದೆ, 6 ಗಂಟೆ ನಿಲ್ಲಿಸಿ ನಂತರ ಮತ್ತೆ ನೀರು ಕೊಟ್ಟಾಗ ಅದೇ ಭೂಮಿ ಮೇಲೆ ನೀರು ಹಾದು-ಹೋಗಬೇಕಾಗುತ್ತದೆ ಅಂತಹ ನೀರು ಯಾವತ್ತಿಗೂ ಕೃಷಿಗೆ ಸಹಾಯವಾಗುವುದಕ್ಕೆ ಸಾಧ್ಯವಿಲ್ಲ. ಇವತ್ತು 12 ಗಂಟೆ ಆದರೂ ಕೃಷಿಗೆ ಕರೆಂಟ್ ಕೊಡದಿದ್ದರೆ ಸಾಧ್ಯವಿಲ್ಲ ಹಾಗೆ ಕೊಡುವುದನ್ನು ನಿರಂತರವಾಗಿ ಕೊಡಿ, ಆದರೆ ನಿರಂತರವಾಗಿ ಕೊಡಲು ನಿಮ್ಮಿಂದ ಸಾಧ್ಯವಾಗಿಲ್ಲ, ಇಷ್ಟೆಲ್ಲ ನೀವು ದರ ನಿಗದಿ ಮಾಡಿದರೂ ಆಗುತ್ತಿಲ್ಲ, ಇವತ್ತು ಏಳುವ ಪ್ರಶ್ನೆ ಅದೇ, ದುಡ್ಡು ವಸೂಲು ಮಾಡಿಯೂ ಅವರಿಗೆ ವಿದ್ಯುತ್ ಕೊಡುವುದಿಲ್ಲ, ಅಂದರೆ ಜನ ಸಿಟ್ಟಿಗೇಳುತ್ತಾರೆ ಪ್ರಜಾಪ್ರಭುತ್ವದಲ್ಲಿ ಜನರ ಅಭಿಪ್ರಾಯಕ್ಕೆ ಸರ್ಕಾರ ಮನ್ನಣೆ ಕೊಡಬೇಕಾಗುತ್ತದೆ, ನೀವು ನಮಗೂ ಹೆದರಬೇಡಿ, ಯಾರಿಗೂ ಹೆದರಬೇಡಿ. ಪ್ರಜಾಪ್ರಭುತ್ವದಲ್ಲಿ ಜನರಿಗೆ ಹೆದರಬೇಕಾಗುತ್ತದೆ. ಅವರ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕಾಗುತ್ತದೆ ರೈತರು ಇವತ್ತು ಸಿಟ್ಟಿಗೆದ್ದಿದ್ದಾರೆ ಅದರ ಪರಿಣಾಮ ಏನೇನಾಗಿದೆ ಎಂದು ಗಮನಿಸಬೇಕು. ಆ ದೃಷ್ಟಿಯಲ್ಲಿ ವಿದ್ಯುತ್‌ಗೆ ವಿಧಿಸಿರುವ ದರಗಳನ್ನು ಪರಿಷ್ಕರಣೆ ಮಾಡುವುದು, ಠೇವಣಿ ರದ್ದು ಮಾಡುವುದು ಅನಧಿಕೃತ ಕನೆಕ್ಷನ್‌ಗಳಿಗೆ ಜುಲ್ಮಾನೆ ಹಾಕುವುದನ್ನು ನೀವು ರದ್ದು ಮಾಡದೇ ಹೋದರೆ ಖಂಡಿತವಾಗಿ ತೀವ್ರ ಪರಿಣಾಮವನ್ನು ಸರ್ಕಾರ ಎದುರಿಸಬೇಕಾಗುತ್ತದೆ. ಅದೇ ಸಂದರ್ಭದಲ್ಲಿ ನಿಮಗೆ ಬರಬೇಕಾದ ರೆವಿನ್ಯೂ ಡಿಫಿಸಿಟ್ ಏಕೆ ಇನ್‌ಕ್ರೀಸ್ ಮಾಡಲಿಲ್ಲ? ಅದಕ್ಕೇನು ಕ್ರಮ ತೆಗೆದುಕೊಂಡಿದ್ದೀರಿ? ಮಂಡಲಿಯ ಲೆಕ್ಕದಂತೆ ಇರುವ ರೆವಿನ್ಯೂ ಡಿಫಿಸಿಟ್ ಇನ್‌ಕ್ರೀಸ್ ಮಾಡಲು ನೀವು ತಯಾರಿಲ್ಲ. ವಿದ್ಯುನ್ಮಂಡಲಿಯಲ್ಲಿ ನಡೆಯುತ್ತಿರುವ ಅವ್ಯಹಾರವನ್ನು ಸರಿಪಡಿಸಲು ತಯಾರಿರದೆ, ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳು ವಿದ್ಯುತ್ ಕಳುವು ಮಾಡುತ್ತಿರುವುದನ್ನು ತಪ್ಪಿಸಲು ಕ್ರಮ ತೆಗೆದುಕೊಂಡಿಲ್ಲ. ನಾವು ಮಾಡಿರತಕ್ಕ 13 ಶಿಫಾರಸ್‌ಗಳ ಮುಖ್ಯವಾದ ಒಂದು ಶಿಫಾರಸ್ಸೇನು ದೊಡ್ಡ ಪ್ರಮಾಣಗಳಲ್ಲಿ ಕಳ್ಳತನವಾಗುತ್ತಿರುವ ವಿದ್ಯುತ್ತಿನ ಬಗ್ಗೆ ಕ್ರಮ ತೆಗೆದುಕೊಳ್ಳಿ ಅಂದರೆ ರೈತರ ಮೇಲೆ ಹೋಗುತ್ತಿದ್ದೀರಿ ಇದ್ಯಾವುದನ್ನೂ ಸರಿಪಡಿಸದೆ ಜನರ ಮೇಲೆ ಹೊರೆ ಹಾಕುವುದು ಸರ್ಕಾರದ ಜನ ವಿರೋಧಿ ನೀತಿಯಾಗುತ್ತದೆ. ಜನರು ಇದರ ವಿರುದ್ಧ ಪ್ರತಿಭಟಿಸುತ್ತಾರೆ. ಆದ್ದರಿಂದ ಇದನ್ನು ನೀವು ಹಿಂದಕ್ಕೆ ತೆಗೆದುಕೊಳ್ಳಬೇಕು ಇಲ್ಲದಿದ್ದರೆ ಜನರ ಪ್ರತಿಭಟನೆ ಎದುರಿಸಬೇಕಾಗುತ್ತದೆ ಎಂದು ಸ್ಪಷ್ಟಪಡಿಸುತ್ತೇನೆ. ಸದನ ಸೇರುವ ಒಂದು ವಾರದ

ಹಿಂದೆ ಏಕೆ ನೀವು ದರ ಏರಿಸಬೇಕಾಗಿತ್ತು ಸದನದಲ್ಲಿ ಚರ್ಚೆಗೆ ತಂದು ಸದನದ ಅಭಿಪ್ರಾಯ ಪಡೆದು ನೀವು ಮಾಡಬಹುದಾಗಿತ್ತು, ಸದನ ಸೇರುತ್ತದೆಂದು ಗ್ಯಾರಂಟಿಯಾದ ಮೇಲೆ ನೀವು ಆ ರೀತಿ ಮಾಡಿದ್ದು ಈ ಸದನಕ್ಕೆ ಮಾಡಿರುವ ಅವಮಾನ ಮತ್ತು ನಾವು ಕೊಟ್ಟಿರುವ ಕಮಿಟಿ ಶಿಫಾರಸ್‌ಗಳಿಗೆ ವಿರುದ್ಧವಾಗಿದೆ. ಆದ್ದರಿಂದ ಈ ಸರ್ಕಾರದಿಂದ ಸದನಕ್ಕೆ ಹಕ್ಕುಚ್ಯುತಿಯಾಗಿದೆ ಎಂದು ಒಂದು ನಿರ್ಣಯ ಮಂಡಿಸಲು ನಾವು ಆಲೋಚನೆ ಮಾಡಬೇಕಾಗಿದೆ. 31-12-96 ರಂದು ಸರ್ಕಾರ ಇಶ್ಯೂ ಮಾಡಿರುವ ಸರ್ಕ್ಯುಲರನ್ನು ವಾಪಸ್ ಪಡೆಯಬೇಕು ದಂಡ ವಸೂಲಿ ಮಾಡುವುದನ್ನು ನಿಲ್ಲಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡಿ ನನ್ನ ಮಾತು ಮುಗಿಸುತ್ತೇನೆ.

ಉಪಾಧ್ಯಕ್ಷರು:- ತಮ್ಮ ನಾಯಕರುಗಳು ಮಾತನಾಡಿದ್ದಾರೆ ಉತ್ತರ ಆದಮೇಲೆ ಕ್ಲಾರಿಫಿಕೇಷನ್ ಕೇಳಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ಕೆಲವರಿಗಾದರೂ 10-10 ನಿಮಿಷ ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ:- ಮುಂದಿನ ಬೆಂಚಿನ 5-6 ಜನರ ಅಭಿಪ್ರಾಯ ಇಡೀ ಸದನದ ಅಭಿಪ್ರಾಯ ಆಗುವುದಿಲ್ಲ. ನಮ್ಮ ಸಲಹೆಯನ್ನು ತಾವು ಕೇಳಬೇಕು. ಪಾರ್ಟಿ ವತಿಯಿಂದ ನಮಗೂ ಅವಕಾಶ ಕೊಡಿ.

ಉಪಾಧ್ಯಕ್ಷರು:- ನಿಮ್ಮ ಲೀಡರ್ಸ್ ಮಾತನಾಡಿದ್ದು ನೀವು ಒಪ್ಪುವುದಕ್ಕೆ ತಯಾರಿಲ್ಲ ಅಂದರೆ ಹೇಗೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು):- ನಾನು ನಿನ್ನೆ ಮಾನ್ಯ ಅಧ್ಯಕ್ಷರಿಗೆ ಮನವಿ ಮಾಡಿಕೊಂಡೆ. ಇಂತಹ ವಿಷಯಗಳ ಬಗ್ಗೆ ಎಲ್ಲಾ ಶಾಸಕರಿಗೆ ತಮ್ಮ ಅಭಿಪ್ರಾಯ ಹೇಳುವುದಕ್ಕೆ ಅವಕಾಶ ಇದೆ. ಆದರೆ ಈ ರೂಲ್ ಪ್ರಕಾರ ಅಲ್ಲ. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಪ್ರತಿಯೊಬ್ಬರೂ ಅವರ ಅನಿಸಿಕೆಗಳನ್ನು ಹೇಳಬಹುದು. ವಿದ್ಯುಚ್ಛಕ್ತಿ ಬಗ್ಗೆ ಆ ಮಂಡಲಿ ಬಗ್ಗೆ ಇವತ್ತಿನ ಪರಿಸ್ಥಿತಿ ಬಗ್ಗೆ, ಎಲ್ಲರೂ ಏನು ಹೇಳುತ್ತಾರೆಂದು ನನಗೆ ಗೊತ್ತಿದೆ. ಆದರೆ ಇದರ ಸುಧಾರಣೆ ಸಲುವಾಗಿ ನಾವು ಏನು ಮಾಡಬೇಕೆಂದು ಹೇಳಬೇಕು. ನಾವೂ ಪ್ರತಿನಿಧಿಗಳಲ್ಲವೇ ನಾವು ಹೇಳುತ್ತೇವೆ. ಹೇಳುತ್ತಾ ಹೋಗಿ. ಸರಕಾರವೇನು ಮಾಡಿದೆ, ನಾವು ಏನು ಮಾಡಬೇಕೆಂದು ಉತ್ತರ ಕೊಡುವುದು ಬೇಡವೆ? ಸದನದಲ್ಲಿ ಇಂತಹ ವಿಷಯಗಳ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ಮುಂದು ಹೋಗುವ ಪ್ರಯತ್ನ ಮಾಡಬೇಕು. ದಯವಿಟ್ಟು ಕೋ ಆಪರೇಟ್ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ:- ಕೆ.ಇ.ಬಿ. ಬಗ್ಗೆ ಸರಕಾರವೇನು ಮಾಡಬೇಕೆಂದು ನಮ್ಮ ಸಲಹೆ ಕೇಳುವುದು ಬೆಡವೇ.

ಶ್ರೀ ಜೆ.ಹೆಚ್. ಪಟೇಲ್:- ಇಲ್ಲಿಯವರೆಗೆ ನಾನು ಕೇಳಿದ್ದುದು ವಿದ್ಯುತ್ ಕೊರತೆ ಬಗ್ಗೆ ಕೆ.ಇ.ಬಿ. ದಿವಾಳಿತನದ ಬಗ್ಗೆ ಆಯಾಯ ರೀಜನ್ ಸರ್ವೀಸ್ ಮೈಂಟೆನೆನ್ಸ್ ಕೊಲ್ಯಾಪ್ಸ್ ಆಗಿರುವ ಬಗ್ಗೆ ಇಷ್ಯು ಕೇಳಿದ್ದೇನೆ. ಆದರೆ ಅದನ್ನೇ ಪುನಃ ಹೇಳುವುದರಿಂದ ಏನಾದರೂ ಸಿಸ್ಟಂ ಇಂಪ್ರೂವ್‌ಮೆಂಟ್ ಆಗುತ್ತದೆಂದರೆ ಎಲ್ಲರೂ ಮಾತನಾಡಲಿ ನನ್ನದೇನೂ ಅಭ್ಯಂತರ ಇಲ್ಲ. ಜವಾಬ್ದಾರಿಯುತವಾದ, ಗುರುತರವಾದ ಶಕ್ತಿ ಇರತಕ್ಕಂತಹ ಸದನದಲ್ಲಿ ಈ ವಿಷಯಗಳ ಬಗ್ಗೆ ಅವರು ಮಾತನಾಡುವುದರ ಬಗ್ಗೆ ನನ್ನದೇನೂ ಅಭ್ಯಂತರ ಇಲ್ಲ ಮಾತನಾಡುತ್ತಾ ಹೋಗಲಿ.

ಉಪಾಧ್ಯಕ್ಷರು:- ನಿಯಮಾವಳಿ ಬದಲಾವಣೆ ಮಾಡಿದ ಮೇಲೆ ಒಂದು ಗಂಟೆಗಿಂತ ಹೆಚ್ಚು ಚರ್ಚೆ ಮಾಡಲಿಕ್ಕೆ ಅವಕಾಶ ಇಲ್ಲ. ಸಭಾ ನಾಯಕರು ಈಗ ಉತ್ತರ ಕೊಡುತ್ತಾರೆ ನಂತರ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಜೆ.ಹೆಚ್. ಪಟೇಲ್:- ವಿದ್ಯುಚ್ಛಕ್ತಿ ಮಂಡಲಿ ಬಗ್ಗೆ ಅದರ ಸ್ಥಿತಿ ಗತಿ ಬಗ್ಗೆ ರಾಜ್ಯದಲ್ಲಿರತಕ್ಕಂತಹ ಪರಿಸ್ಥಿತಿ ಬಗ್ಗೆ ಮೋಷನ್ ಮೂವ್ ಮಾಡಿ ವಿರೋಧ ಪಕ್ಷದ ನಾಯಕರು ಮಾನ್ಯ ವಾಟಾಳ್‌ರವರು ಇತರ ಸದಸ್ಯರು ಶ್ರೀ ಶ್ರೀರಾಮರೆಡ್ಡಿಯವರು ಮಾತನಾಡಿದರು. ಹೀಗೆ ಇದನ್ನೇ ಮಾತನಾಡುತ್ತಾ ಹೋಗುವುದು ನಮ್ಮ ಉದ್ದೇಶವೆಂದರೆ ಮಾನ್ಯ ಉಪಾಧ್ಯಕ್ಷರಿಗೆ ತಿಳಿಸುತ್ತೇನೆ ಮಾತನಾಡಿ ನಮ್ಮ ಅಭ್ಯಂತರ ಇಲ್ಲ. ಕೆಲವು ಸಮಸ್ಯೆಗಳನ್ನು ಸದನದ ಮೂಲಕ ಸರಕಾರದ ಗಮನಕ್ಕೆ ತರಬೇಕು ರಾಜ್ಯದ ಗಮನಕ್ಕೂ ತರಬೇಕು. ಬೇಡವೆಂದು ಹೇಳಿದರೆ ಅದು ಸರಿಯಾಗುವುದಿಲ್ಲ. ವಿದ್ಯುಚ್ಛಕ್ತಿ ಮಂಡಲಿ ಬಗ್ಗೆ ವಿದ್ಯುತ್ ಪರಿಸ್ಥಿತಿ ಬಗ್ಗೆ ಬಹಳ ಸಾರಿ ಹೇಳಿದ್ದೀರಿ. ಜನಪ್ರಿಯತೆಗೋಸ್ಕರ ಮಾತನಾಡುವುದು ಬೇರೆ, ವಾಸ್ತವಿಕತೆಯ ಆಧಾರದ ಮೇಲೆ ಜನರಿಗೆ ನಿಷ್ಠೂರವಾದರೂ ಚಿಂತೆ ಇಲ್ಲ ಹೇಳಬಹುದಾದಂತಹ ಮಾತುಗಳು ಇವೆ. ಅದರಂತೆ ಸದನದಲ್ಲಿ ಎಲ್ಲರೂ ಇದರ ಸತ್ಯಾಂಶವನ್ನು ರಿಯಲೈಸ್ ಮಾಡಿಕೊಳ್ಳದೆ ಇದು ರೈತರ ಸರಕಾರವೇ ಎಂದು ಹೇಳಿದರೆ ಅದು ಸರಿಯಲ್ಲ. ಇದು ಯಾರ ಸರಕಾರ? ಆ ರೀತಿ ಮಾತನಾಡುವುದರಿಂದ ವಿದ್ಯುತ್ ಜನರೇಟ್ ಆಗುವುದಾದರೆ ನಾನು ಸುಮ್ಮನೆ ಕುಳಿತುಕೊಳ್ಳುತ್ತಿದ್ದೆ, ಮಾತನಾಡಿ ಎಂದು ಹೇಳುತ್ತಿದ್ದೆ. ಮನಸ್ಸಿನ ಭಾವನೆಗಳು ಜನರೇಟ್ ಆಗುತ್ತದೆ ವಾಸ್ತವಿಕ ಸ್ಥಿತಿ ಏನು ಇದೆ. ಕೆ.ಇ.ಬಿ. ಏಕೆ ಇಂತಹ ಪರಿಸ್ಥಿತಿಯಲ್ಲಿದೆ ಎಂದು ವಿಚಾರ ಮಾಡಬೇಕು. ಹಿಂದೆ ಅವರು ಹೀಗೆ ಮಾಡಿದರು, ಹಾಗೆ ಮಾಡಿದರೆಂದು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ನಾವು ಜಟಿಲವಾದಂತಹ ಸಂದರ್ಭವನ್ನು ಎದುರಿಸುತ್ತೇವೆಂದು ಹೇಳುವುದು ಅಷ್ಟೇ ಈ ಮೋಷನ್ ಮೇಲೆ ನನ್ನ ಉತ್ತರ. ಕರೆಂಟ್, ಶಾಖದಿಂದ ನೀರಿನಿಂದ ಗಾಳಿಯಿಂದ ಉತ್ಪನ್ನವಾಗುತ್ತದೆ. ಬೇರೆ ವಸ್ತುಗಳನ್ನು ಸುಡುವುದರಿಂದ ಉತ್ಪನ್ನವಾಗುತ್ತದೆ ಆದರೆ ಇಲ್ಲಿ ಮಾತಿನಿಂದ ಉತ್ಪನ್ನವಾಗುವುದಿಲ್ಲ. ಇದಕ್ಕೇನು ಮಾಡಬೇಕೆಂದು ತಾವು ಆದೇಶ ಕೊಟ್ಟರೆ ನಾನು ಹಾಗೆ ಮಾಡುತ್ತೇನೆ.

ಶ್ರೀ ಸಿ.ಹೆಚ್. ವಿಜಯ ಶಂಕರ್:- 2-2- ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡಬೇಕು ಇಲ್ಲವಾದಲ್ಲಿ ನಮಗೆ ಬಹಳ ಅನ್ಯಾಯವಾಗುತ್ತದೆ.

ಶ್ರೀ ಎನ್. ರಾಜಣ್ಣ:- ಇಲ್ಲಿಯವರೆಗೆ ಆಗಿರುವ ಸಮಸ್ಯೆಗಳ ಬಗ್ಗೆ ನಾವು ಏಕಾ ಏಕಿ ಪ್ರಶ್ನೆ ಮಾಡುತ್ತಿಲ್ಲ. ಆದರೆ ಇತ್ತೀಚೆಗೆ ಆದಂತಹ ಆಜ್ಞೆಗಳಿಂದ ಯಾವ ರೀತಿ ರೈತರಿಗೆ ಹೊರೆಯಾಗಿವೆ ಎನ್ನುವುದನ್ನು ಸರಕಾರದ ಗಮನಕ್ಕೆ ತರಬೇಕು ಅವರು ಅದನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ನಮ್ಮ ವಿಚಾರ. ಅವರಿಗೆ ಪರಿಹಾರ ಕೊಡಿ ಎಂದು ಹೇಳುತ್ತಿಲ್ಲ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು:- ಬಿಜಿನೆಸ್ ಅಡ್ವೈಸರಿ ಸಮಿತಿಯಲ್ಲಿ ಎಷ್ಟು ದಿವಸ ಅಧಿವೇಶನ ಇರುತ್ತದೆ ನಮ್ಮ ಬಿಜಿನೆಸ್ ಅನ್ನು ನಾವು ಹೇಗೆ ನಡೆಸಿಕೊಂಡು ಹೋಗಬೇಕೆಂದು ಒಂದು ಅಂದಾಜು ತೀರ್ಮಾನಕ್ಕೆ ಬಂದಿದ್ದೇವೆ. ಅದಾದ ಮೇಲೆ ಅನಿರೀಕ್ಷಿತವಾಗಿ ನಿನ್ನೆ ಅಡ್ಜರ್ನ್‌ಮೆಂಟ್ ಮೋಷನ್ ಬಂತು ಅದು ಬೇಡ ನಿಯಮ 69ರ ಕೆಳಗೆ ತೆಗೆದುಕೊಳ್ಳೋಣ ಎಂದು ಮಾಡಿದ್ದೆವು ಇಡೀ ದಿವಸ ಅದೇ ಆಗಿದೆ. ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯಕ್ಕೆ ನಿನ್ನೆಯ ದಿವಸ ಚರ್ಚೆಯೇ ನಡೆದಿಲ್ಲ. ಇವತ್ತು ನಿಯಮ 69ಕ್ಕೆ ನಿಯಮದ ಪ್ರಕಾರ ಒಂದು ಗಂಟೆ ಸಮಯ ಇರುತ್ತದೆ ಹೆಚ್ಚು ಸಮಯ ಇರುವುದಿಲ್ಲ. ಎಲ್ಲಾ ವಿಚಾರ ಬಂದಾಗ ಮುಂದಿನ ಬೆಂಚಿನಲ್ಲಿ ಲೀಡರ್ಸ್ ಆಗಿರುವವರು ನಿಮ್ಮ ಪಾರ್ಟಿಗೆ ಬರಬಹುದಾದ ಎಲ್ಲಾ ಸಮಯವನ್ನು ತೆಗೆದುಕೊಳ್ಳುತ್ತೀರಿ. ಹಿಂದೆ ಇರುವವರು ನಮ್ಮ ಭಾವನೆಗೆ ಸ್ಪಂದಿಸಿ ಒಂದು ನಿಮಿಷ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತಾರೆ. ನಿಮ್ಮ ಶಾಸಕಾಂಗದ ಪಕ್ಷದ ಸಭೆಯಲ್ಲಿ ಮುಂದಿನ ಬೆಂಚಿನಲ್ಲಿ ಇರುವ ನಿಮ್ಮ ಲೀಡರ್ಸ್‌ಗಳಿಗೆ ನೀವು ರೆಸ್ಟ್ ತೆಗೆದುಕೊಳ್ಳಿ ನಾವು ಸ್ವಲ್ಪ ಮಾತನಾಡುತ್ತೇವೆಂದು ಹೇಳಬೇಕು. ನೀವು ಅವರಿಗೆ ಇಲ್ಲಿ ಮಾತನಾಡುವುದಕ್ಕೆ ಬಿಡುತ್ತೀರಿ ನನಗೆ ಇಲ್ಲಿ ಸ್ಪಂದಿಸಿ ಎಂದು ಹೇಳುತ್ತೀರಿ. ಬಿಜಿನೆಸ್ ಅಡ್ವೈಸರಿ ಸಮಿತಿಯಲ್ಲಿ ನಾನು ನಿಮ್ಮ ಪರವಾಗಿ ಸ್ಪಂದಿಸಿ ಹೇಳಿದಷ್ಟು ಬೇರೆ ಯಾರೂ ಸ್ಪಂದಿಸುತ್ತಿಲ್ಲ. ನಿಮ್ಮ ಪರವಾಗಿ ಅಲ್ಲೂ ಕೂಡ ಮಾತನಾಡಿದ್ದೇನೆ. ನಿಮ್ಮ ಪರವಾಗಿ ನಾನು ವಕಾಲತ್ತು ವಹಿಸಿದ್ದೇನೆ. ಸ್ಪಂದಿಸಬೇಕಾದವನು ನಾನಲ್ಲ ಅವರು.

ಶ್ರೀ ಹೆಚ್.ಎನ್. ನಂಜೇಗೌಡ:- ಈ ಸ್ಟ್ರ್ಯಾಟಜಿ ಯಾವಾಗಿನಿಂದ ಅಡಾಪ್ಟ್ ಮಾಡುವುದನ್ನು ಕಲಿತಿರಿ. ಲೀಡರ್ಸ್ ಮೇಲೆ ಸದಸ್ಯರನ್ನು ಎತ್ತಿ ಕಟ್ಟುವುದನ್ನು.

ಅಧ್ಯಕ್ಷರು:- ನಾವು ಏನು ಹೆಳಿದರೂ ಯಾರ್‍ಯಾರ ಮನಸ್ಸಿನಲ್ಲಿ ಏನೇನೋ ಆಲೋಚನೆ ಇರುತ್ತದೆ.

ಶ್ರೀ ವಾಟಾಳ್ ನಾಗರಾಜ್:- ನೇರವಾಗಿ ಎತ್ತಿ ಕಟ್ಟುತ್ತಿದ್ದೀರಿ ಅದರಲ್ಲೇನೂ ಅನುಮಾನ ಇಲ್ಲ.

ಅಧ್ಯಕ್ಷರು:- ಸಲಹಾ ಸಮಿತಿಯಲ್ಲಿ ನಾನು ಹಾಗೆ ಹೇಳಿದೆನೋ ಇಲ್ಲವೋ ಹೇಳಿ. ಹೊಸಬರಿಗೆ ಅವಕಾಶ ಸಿಗಬೇಕು ಇದಕ್ಕೆ ಮುಂದಿನ ಬೆಂಚಿನಲ್ಲಿರುವವರು ಸಹಕಾರ ಕೊಡಬೇಕು ಎಂದು ನಾನೇ ನಿಮ್ಮ ಪರವಾಗಿ ಮಾತನಾಡಿದ್ದೇನೆ. ಹಿಂದಿನ ಬೆಂಚಿನವರಿಗೆ ಅವಕಾಶ ಸಿಗುವುದಿಲ್ಲವೆಂದು ಹೇಳಿದ್ದೇನೆ. ಇವತ್ತು ಹೇಗೋ ಅಡ್ಜಸ್ಟ್ ಮಾಡಿಕೊಳ್ಳಿ.

ಶ್ರೀ ಅರಗ ಜ್ಞಾನೇಂದ್ರ:- ತಾವು ನಮ್ಮ ಬಗ್ಗೆ ಸ್ವಲ್ಪ ಕರುಣೆ ತೋರಿಸಿದರೆ ಒಳ್ಳೆಯದು. 40 ಜನ ಇರುವಂತಹ ಪಕ್ಷಕ್ಕೆ ಎಷ್ಟು ಸಮಯ, ಒಬ್ಬರು ಇರುವಂತಹ ಪಕ್ಷಕ್ಕೆ ಎಷ್ಟು ಸಮಯವೆಂದು ತಾವೇ ನಿರ್ಧಾರ ಮಾಡಬೇಕು. ಆವರೇ ನಿಯಂತ್ರಣ ಹಾಕಿಕೊಳ್ಳುವುದಿಲ್ಲ. ತಾವು ದಯಮಾಡಿ ನಿಯಂತ್ರಣ ಹಾಕಿದರೆ ನಮಗೆ ಉಪಕಾರ ಮಾಡಿದ ಹಾಗಾಗುತ್ತದೆ ಪ್ರತಿ ಸಲ ಅವರ ಅಭಿಪ್ರಾಯವೇ ಇಡೀ ಸದನದ ಅಭಿಪ್ರಾಯವಾದರೆ ನಮ್ಮನ್ನು ಆರಿಸಿದಂತಹ ಜನರಿಗೆ ನಾವೇನು ಹೇಳಬೇಕು?

ಅಧ್ಯಕ್ಷರು:- ಡಾ: ಹೆಚ್. ನರಸಿಂಹಯ್ಯನವರು ಒಬ್ಬರೇ ಒಂದು ಪಕ್ಷದಿಂದ ಆರಿಸಿ ಬಂದರೆಂದು ತಿಳಿದುಕೊಳ್ಳಿ ಅವರು ಶಿಕ್ಷಣದ ತಜ್ಞರು ಅವರನ್ನು ನೀವು ಒಬ್ಬರೆ ಇದ್ದೀರಿ 3 ನಿಮಿಷದಲ್ಲಿ ಮುಗಿಸಿ ಎಂದು ಹೇಳುವುದಕ್ಕಾಗುತ್ತದೆಯೇ ಸಭೆಯನ್ನು ವಿವೇಚನೆಯಿಂದ ನಡೆಸಬೇಕಾಗುತ್ತದೆ. ನೀವು ಹೇಳತಕ್ಕಂತಹ ಪ್ರಿನ್ಸಿಪಲ್‌ಅನ್ನು ನಾನು ಒಪ್ಪುತ್ತೇನೆ. ತಾವು ಒಬ್ಬೊಬ್ಬರು ಆರಿಸಿ ಬಂದವರು ಸ್ವಲ್ಪ ಹೆಚ್ಚು ಮಾತನಾಡಿದರೆ ಅವರಿಗೆ ಸ್ವಲ್ಪ ಸಮಯ ಬಿಟ್ಟು ಕೊಡಿ ಎಂದು ನಾನು ಹೇಳುತ್ತೇನೆ. ಸದನದಲ್ಲಿ ಒಟ್ಟು ಇಷ್ಟು ಸಮಯವೆಂದು ನಿಗದಿ ಮಾಡಿದ ಮೇಲೆ ಮುಖಂಡರುಗಳಾದಂತಹವರು, ನೀವು, ನಿಮ್ಮ ಪಾರ್ಟಿಯಲ್ಲಿ ಮಾತನಾಡಿಕೊಂಡು ನಿಮ್ಮ ಪಕ್ಷಕ್ಕೆ ಬರತಕ್ಕಂತಹ ಸಮಯವನ್ನು ಹಂಚಿಕೆ ಮಾಡಿಕೊಂಡರೆ ನಮಗೆ ಕಷ್ಟ ಬರುವುದಿಲ್ಲ. ಸ್ವಲ್ಪ ಆಚೆ, ಈಚೆಯಾದರೂ ಪರವಾಗಿಲ್ಲ. ನನಗೆ ಕಷ್ಟ ಬರುವುದಿಲ್ಲ. ಪಾರ್ಟಿಯ ಸಮಯದಲ್ಲಿ ಒಬ್ಬರೆ ಮಾತನಾಡಿ ಮತ್ತೆ ಪಾರ್ಟಿಯವರೆಲ್ಲರಿಗೂ ಅವಕಾಶ ಕೊಡಿ ಎಂದರೆ ಕಷ್ಟ. ಕರೆಂಟ್ ಉತ್ಪತ್ತಿ ಮಾಡುವುದು ಅವರಿಗೆ ಎಷ್ಟು ಕಷ್ಟವೋ ಸಮಯ ಉತ್ಪತ್ತಿ ಮಾಡುವುದು ನನಗೆ ಅಷ್ಟೇ ಕಷ್ಟ.

ಶ್ರೀ ಸಿ.ಹೆಚ್. ವಿಜಯಶಂಕರ್:- ನಮಗೆ ಸ್ವಲ್ಪ ಅವಕಾಶ ಕೊಡಿ.

ಅಧ್ಯಕ್ಷರು:- ಇವತ್ತು ಮಾತನಾಡುವುದಲ್ಲ ನನಗೆ ತೊಂದರೆಯಾದರೂ ಚಿಂತೆ ಇಲ್ಲ ಇವತ್ತು 4-5 ಜನರಿಗೆ ಅವಕಾಶ ಕೊಡುತ್ತೇನೆ. ಜನರಲ್ ಆಗಿ ನಾನು ಸಲಹಾ ಸಮಿತಿಯಲ್ಲಿ ಎಲ್ಲಾ ಮುಖಂಡರುಗಳಿಗೂ ಅಪೀಲ್ ಮಾಡಿಕೊಂಡೆ. ದಿನವೂ ಇದೇ ಆಗಬಾರದೆಂದು ನಾನು ಹೇಳುತ್ತಿದ್ದೇನೆ. ತಾವು ಹೇಳಿದ ಎಲ್ಲಾ ಅಂಶಗಳನ್ನು ನಾನೂ ಗಮನದಲ್ಲಿ ಇಟ್ಟುಕೊಂಡಿದ್ದೇನೆ.

ಶ್ರೀ ವಿ. ಮುನಿಯಪ್ಪ:- ರೈತರಿಗೆ ಆಗುವ ತೊಂದರೆ ಬಗ್ಗೆ ತಮಗೆ ಗೊತ್ತಿದೆ. ಅದರ ವಿಚಾರದಲ್ಲಿ ಇಲ್ಲಿ ಅವಕಾಶ ಸಿಗದಿದ್ದರೆ ನಾವು ರೈತರಿಗಾದರೂ ಏನು ಉತ್ತರ ಕೊಡಬೇಕು ಹೇಳಿ.

ಅಧ್ಯಕ್ಷರು:- ಮಾನ್ಯ ಅರಗ ಜ್ಞಾನೇಂದ್ರ ಎತ್ತಿರುವ ಪ್ರಸ್ತಾಪ ಏನಿದೆ ಸಂಖ್ಯಾಬಲದ ಮೇಲೆ ಸಂಖ್ಯಾಬಲವನ್ನು ಆಧರಿಸಿ ಸಮಯ ನಿಗದಿಪಡಿಸಿ ಎಂದು ಹೇಳಿದರು. ಇದುವರೆಗೂ ನಾವು ಮಾಡುತ್ತಿರುವುದು ಹಾಗೆಯೇ. ನಿಮಗೆ ಒಂದು ಆಶ್ಚರ್ಯವಾಗಬಹುದು ಹೇಗೆ ವಾಟಾಳ್ ನಾಗರಾಜ್‌ರವರಿಗೆ ಅಥವಾ ಶ್ರೀರಾಮರೆಡ್ಡಿಯವರಿಗೆ ಅಥವಾ ಇನ್ನು ಕೆಲವರಿಗೆ ಹೆಚ್ಚು ಸಮಯ ಬರುತ್ತಿದೆ ಎಂದು. ಅವರಿಗೆ ಸಿಗುತ್ತಿರುವ ಹೆಚ್ಚು ಸಮಯವೆಲ್ಲಾ ಕೂಡ ಇವರುಗಳು ತ್ಯಾಗ ಮಾಡುತ್ತಿರುವುದು. ಇವರುಗಳಿಗೆ ಕೊಟ್ಟಿರುವ ಟೈಮನ್ನು ಅವರು ಉಪಯೋಗಿಸುತ್ತಾರೆ. ನನ್ನ ಬಾಂದವ್ಯ ಏನಿದೆ, ಅದನ್ನು ಉಪಯೋಗಿಸಿಕೊಂಡು ಅವರಲ್ಲಿ ಹೆಚ್ಚು ಸ್ಪೀಕರ್ಸ್ ಇಲ್ಲದೇ ಇದ್ದಾಗ ನಾನು ಅಡ್ಜಸ್ಟ್ ಮಾಡಿದ್ದೇನೆ. ನಾನು ನಿಮ್ಮ ಸಮಯವನ್ನೆಲ್ಲಾ ಅವರಿಗೆ ಕೊಟ್ಟದ್ದೆ ಎನ್ನುವ ಭಾವನೆ

ಬರುವುದು ಬೇಡ. ನಿಮಗೂ ಬರಬಾರದು. ಸದನದಲ್ಲಿ ಯಾರಿಗೂ ಹಾಗೆ ಬರಬಾರದು. ನಿಮ್ಮ ಪಾರ್ಟಿಗೆ ಕೊಟ್ಟ ಲೆಜಿಟಮೇಟ್ ಟೈಮ್ ಏನು ಇರುತ್ತದೆ, ಅದನ್ನು ನೀವಾಗಲಿ ಕಾಂಗ್ರೆಸ್ ಪಕ್ಷದವರಾಗಲಿ ಹೇಗೆ ವಿನಿಯೋಗಿಸಿಕೊಳ್ಳಬೇಕೆಂದು ನೀವು ನಿಮ್ಮ ನಿಮ್ಮಲ್ಲಿ ಚರ್ಚೆ ಮಾಡಿಕೊಳ್ಳಿ.

ಶ್ರೀ ವಿ. ಮುನಿಯಪ್ಪ:- ಇಂಥ ಪ್ರಮುಖವಾದ ವಿಚಾರ ಬಂದಾಗ ಅವಶ್ಯಕತೆ ಇದ್ದರೆ ಒಂದು ದಿವಸ ಹೆಚ್ಚಿಗೆ ಚರ್ಚೆಗೆ ಅವಕಾಶ ಮಾಡಿ ಕೊಡಬೇಕಾಗುತ್ತದೆ. ಇಂತ ಪ್ರಮುಖವಾದ ವಿಚಾರ ಇದ್ದಲ್ಲಿ ಅದಕ್ಕೆ ಲಿಜಿಟಮೇಟ್ ಟೈಮನ್ನು ಫಿಕ್ಸ್ ಮಾಡುವುದು ಅದಕ್ಕೆ ಬೈಂಡಿಂಗ್ ಮಾಡುವುದು ಸರಿಯಲ್ಲ ಎಂದು ಕಾಣುತ್ತದೆ.

ಅಧ್ಯಕ್ಷರು:- ಈ ಸದನಕ್ಕೆ ಮೂರು ಬಾಗಿಲು ಇದೆ. ಯಾವುದೇ ಬಾಗಿಲಲ್ಲಿ ಬಂದರೂ ಅವರು ಸದಸ್ಯರೇ. ಎಲ್ಲೆ ಕುಳಿತುಕೊಂಡರೂ ಕೂಡ ಒಂದು ವಿಷಯದ ಪ್ರಾಮುಖ್ಯತೆ ಹೆಚ್ಚು ಕಡಿಮೆಯಾಗುವುದಿಲ್ಲ. ಇಲ್ಲಿ ಕುಳಿತುಕೊಂಡಾಗ ಕಡಿಮೆ ಪ್ರಾಮುಖ್ಯತೆ, ಅಲ್ಲಿ ಕುಳಿತಾಗ ಜಾಸ್ತಿ ಪ್ರಾಮುಖ್ಯತೆಯಾಗುವುದಿಲ್ಲ. ಈ ವಿಷಯಕ್ಕೆ ಬಹಳ ಪ್ರಾಮುಖ್ಯತೆ ಇದೆ ಎನ್ನುವ ಕಾರಣಕ್ಕೇ ಚರ್ಚೆಗೆ ತೆಗೆದುಕೊಂಡಿರುವುದು. ಟೈಮ್ ಜಾಸ್ತಿ ತೆಗೆದುಕೊಳ್ಳುವುದು ಅದನ್ನೆಲ್ಲ ಮಾಡೋಣ. ಆದರೆ ಪ್ರತಿಯೊಂದು ವಿಚಾರಕ್ಕೂ ಕೂಡ ಒಂದು ಹಿನ್ನೆಲೆ ಇರುತ್ತದೆ. ಇಂಥದೇ ಸನ್ನಿವೇಶದಲ್ಲಿ ಹೇಗೆ ನಡೆದುಕೊಂಡಿರುತ್ತೇವೆ ಎಂದು ಇರುತ್ತದೆ. ಸದನವನ್ನು ನಡೆಸುವುದಕ್ಕೆ ಕೆಲವು ನಿಯಮಾವಳಿಗಳು ಇರುತ್ತವೆ. ಇವೆಲ್ಲವನ್ನೂ ಗಮನಿಸಿಕೊಂಡು ನಾವು ಸದನವನ್ನು ನಡೆಸಬೇಕು.

ಡಾ: ಎಂ.ಪಿ. ಕರ್ಕಿ:- ಮಾನ್ಯ ಅಧ್ಯಕ್ಷರೇ, ತಾವು ಡಾ: ನರಸಿಂಹಯ್ಯನವರ ಉದಾಹರಣೆ ಕೊಟ್ಟಿರಿ. ಅವರು ಎಕ್ಸ್‌ಪರ್ಟ್ ಎಂದು ಹೇಳಿ. ಹಾಗೆ ಎಲ್ಲಾ ವಿಷಯಗಳಲ್ಲೂ ಕೂಡ ಒಂದೊಂದು ಪಾರ್ಟಿಯಿಂದ ಒಬ್ಬರೇ ನಿಂತು ನಾನೇ ಮಾತನಾಡುತ್ತೇನೆ ಎಂದರೆ ಅವಕಾಶವನ್ನು ಕೊಡುವುದಕ್ಕಾಗುತ್ತದೆಯೇ?

MR.SPEAKER:- Thank you very much. You have come to my rescue ಥ್ಯಾಂಕ್ಯು ಎಂದು ನಾವು ಹೇಳಿದೆನಲ್ಲ. ನಾನು ಯಾರು ಅಷ್ಟು ಮಾತ್ರ ಕೇಳಲಿಲ್ಲವಲ್ಲ ಎಂದು ಇದ್ದೆ. ನೀವು ಕೇಳಿದಿರಿ ನಿಮಗೆ ಥ್ಯಾಂಕ್ಸ್. ನೋಡಿ, ನಂಜೇಗೌಡರು ಹೇಗೆ ನಗುತ್ತಾರೆ ನೋಡಿ, ಆ ನಗು ನೋಡಿ, ಹೇಗಿರುತ್ತೆ ನೋಡಿ. ಮಾನ್ಯ ಕರ್ಕಿಯವರೇ ಎಲ್ಲರೂ ನಿಮ್ಮ ಹಾಗೆ ನಮ್ಮ ಹಾಗೆ ನೇರವಾಗಿರುವುದಿಲ್ಲ. ಕುಳಿತುಕೊಳ್ಳಿ. Thank you very much ಎಂದು ಹೇಳಿದ್ದೆನಲ್ಲ.

ಶ್ರೀ ವಿ. ಮುನಿಯಪ್ಪ:- ಮಾನ್ಯ ಅಧ್ಯಕ್ಷರೇ, ಈ ವಿದ್ಯುತ್ ಮಂಡಲಿಯ ಗ್ರಾಹಕರ ಮೇಲೆ ಅವರು ಉಪಯೋಗಿಸುವ ವಿದ್ಯುತ್ ಬಗ್ಗೆ ದರ ನಿಗದಿ ಮಾಡುವ ಬಗ್ಗೆ ಕಳೆದ ವಿಧಾನ ಸಭೆಯಲ್ಲಿ ತೀವ್ರವಾದ ಚರ್ಚೆಯಾಯಿತು. ತಮ್ಮ ನೇತೃತ್ವದಲ್ಲಿಯೇ ದರ ನಿಗದಿ ಮಾಡುವ ಸದನದ ಸಮಿತಿಯನ್ನು ನೇಮಕ ಮಾಡಿದ್ದು ತಮಗೆ ತಿಳಿದಿರುವ ವಿಚಾರ. ಈಗಾಗಲೇ ಸದನದ ಸಮಿತಿ ಎಲ್ಲಾ ವಿಚಾರಗಳನ್ನು ಗಮನಿಸಿ ಯಾವ ಯಾವ ಕ್ಷೇತ್ರಕ್ಕೆ ಯಾವ ಯಾವ ರೀತಿ ದರ ನಿಗದಿ ಮಾಡಬೇಕು ಎನ್ನುವ ವಿಚಾರದ ಬಗ್ಗೆ ಗ್ರಾಹಕರ ಜೊತೆ ಚರ್ಚೆ ಮಾಡಿ ಈ ಛೇಂಬರ್ ಆಫ್ ಕಾಮರ್ಸ್ ಏನಿದೆ ಅವರ ಮುಖಂಡರುಗಳ ಜೊತೆ ಚರ್ಚೆ ಮಾಡಿ, ರೈತ ಮುಖಂಡರುಗಳ ಜೊತೆ ಚರ್ಚೆ ಮಾಡಿ,

ಎಲ್ಲಾ ಗ್ರಾಹಕರ ಮುಖಂಡರುಗಳ ಜೊತ್ತೆ ಚರ್ಚೆ ಮಾಡಿ ಅಂತಿಮವಾಗಿ ಒಂದು ಸಲಹೆಯಯನ್ನು ಸದನದ ಸಮಿತಿಯವರು ಸರ್ಕಾರಕ್ಕೆ ಕೊಟ್ಟೆವು. ಎಲ್ಲಾ ವಿಚಾರಗಳ ಬಗ್ಗೆಯೂ ನಾವು ಗಮನ ಹರಿಸಿದ್ದೇವೆ. ಅದರಲ್ಲಿ ಪ್ರಮುಖವಾಗಿ ರೈತರಿಗೆ ಇಲ್ಲಿಯವರೆಗೂ ತಮಗೆ ಗೊತ್ತಿದೆ ನಮ್ಮ ದಿವಂಗತ ಗುಂಡುರಾಯರನ್ನು ರೈತರು ಮೀಟರ್ ಹತ್ತಿರ ಹೋದಾಗ ಜ್ಞಾಪಕ ಮಾಡಿಕೊಳ್ಳುತ್ತಾರೆ. ಈ ರೈತರಿಗೆ ಮೀಟರ್ ಹಾಕಬಾರದು, ಈ ರೈತ ದೇಶಕ್ಕೆ ಅನ್ನ ಬೆಳೆಯುವ ರೈತ, ಅವನ ಉತ್ಪಾದನೆಗೆ ಏನೂ ದರ ನಿಗದಿ ಮಾಡಿಲ್ಲ. ಅವನು ಬೆಳೆದಂಥ ಏನು ಕಮಾಡಿಟಿ ಇದೆ, ಆ ಕಮಾಡಿಟಿಗೆ ಕನಿಷ್ಟ ಬೆಲೆ ನಿಗದಿ ಮಾಡುವ ಕೆಲಸ ಸರ್ಕಾರದಿಂದ ಇದುವರೆಗೂ ಆಗಿಲ್ಲ. ನೇರವಾಗಿ ರೈತರಿಗೆ ಯಾವುದೇ ಸೌಲಭ್ಯ ಸಿಗುತ್ತಿಲ್ಲ ಎನ್ನುವ ಮೂಲಗುರಿಯನ್ನು ಇಟ್ಟುಕೊಂಡು ದಿವಂಗತ ಗುಂಡುರಾಯರು ರೈತರಿಗೆ ಕನಿಷ್ಟ ಹೆಚ್‌ಪಿ ಮೇಲೆ 50 ರೂಪಾಯಿ ಹಾಕುವ ಒಂದು ಆಜ್ಞೆಯನ್ನು ಮಾಡಿದ್ದರು. ತದನಂತರ ನಮ್ಮ ಸರ್ಕಾರ ಬಂದಾಗ ಅದನ್ನು ಉಚಿತವಾಗಿ ಮಾಡಿತು. ಕಾರಣವಿಷ್ಟೆ, ನಾವು ರೈತರಿಗೆ ನೇರವಾದ ಸೌಲಭ್ಯ ಯಾವುದೂ ಕೊಡುತ್ತಿಲ್ಲ. ಈ ವಿದ್ಯುತ್ ಸರಬರಾಜಾದರೂ ಕೊಡಬೇಕು ಎನ್ನುವ ಒಂದು ಮೂಲ ಉದ್ದೇಶವನ್ನು ಇಟ್ಟುಕೊಂಡು ಮಾಡಿದ್ದರು.

ಅಧ್ಯಕ್ಷರು:- ನಾನು ಕಡಿಮೆ ಮಾತನಾಡಬೇಕು ಎಂದು ಅಪೇಕ್ಷೆಪಡುತ್ತೇನೆ. ಆದರೆ, ನನಗೆ ಮಾತನಾಡುವುದು ಅನಿವಾರ್ಯವಾಗುತ್ತದೆ. ಸದನದ ಸಮಿತಿ ಮಾಡಿದ್ದೇವೋ ಇಲ್ಲವೋ?

ಶ್ರೀ ವಿ. ಮುನಿಯಪ್ಪ:- ಮಾಡಿದ್ದೆವು.

ಅಧ್ಯಕ್ಷರು:- ಎಲ್ಲಾ ಪಾರ್ಟಿಯವರು ಇದ್ದರೋ ಇಲ್ಲವೋ? ನೀವೆಲ್ಲರೂ ಸೇರಿ ತಾನೆ ಟ್ಯಾರಿಫ್ ಫಿಕ್ಸ್ ಮಾಡಿರುವುದು.

ಶ್ರೀ ವಿ. ಮುನಿಯಪ್ಪ:- ಹೌದು ಸಾರ್.

ಅಧ್ಯಕ್ಷರು:- ಸದನದ ಸಮಿತಿಯವರು ಫಿಕ್ಸ್ ಮಾಡಿದ ಟ್ಯಾರಿಫ್‌ಗಿಂತಲೂ ಹೆಚ್ಚು ಯಾವುದಾದರೂ ಮಾಡಿದ್ದರೆ ಇಂಥಿಂಥ ಐಟಂನಲ್ಲಿ ಹೀಗೇಗೆ ಮಾಡಿದ್ದಾರೆಂದು ಹೇಳಿ ಅದನ್ನು ಪ್ರಸ್ತಾಪ ಮಾಡಿ. ವುತ್ತೆ ನೀವು ಹಿಂದಿನ ಇತಿಹಾಸಕ್ಕೆಲ್ಲಾ ಹೋಗಿ ಏಕೆ ಟೈಮ್ ವೇಸ್ಟ್ ಮಾಡಿಕೊಳ್ಳುತ್ತೀರಿ?

ಶ್ರೀ ವಿ. ಮುನಿಯಪ್ಪ:- ತಮ್ಮ ಸಲಹೆಯ ಪ್ರಕಾರ ದರ ನಿಗದಿ ಮಾಡುವ ಬಗ್ಗೆ ಸದನದ ಸಮಿತಿಯಲ್ಲಿ ಚರ್ಚೆ ಮಾಡಿದ್ದೇವೆ. ಕನಿಷ್ಟ ಒಂದು ಹೆಚ್‌ಪಿಗೆ 100 ರೂಪಾಯಿ ಹಾಕಬೇಕು ಎಂದು ಒಂದು ನಿರ್ಣಯವಾಯಿತು. ಇನ್ಯಾವುದೇ ರೀತಿಯ ಬರ್ಡನ್‌ನ್ನು ರೈತರ ಮೇಲೆ ನೇರವಾಗಿ ಹಾಕಬಾರದು ಎಂದು ಹೇಳಿ ಒಂದು ತೀರ್ಮಾನವಾಗಿತ್ತು. ಆ ರೀತಿ ಏನಾದರೂ ಹಾಕಬೇಕಾದರೆ ಇವತ್ತೇನು ಸದನದ ಸಮಿತಿ ಇದೆ, ಬಹುಶಃ ಅದರ ಗಮನಕ್ಕೆ ತಂದು ಚರ್ಚೆ ಮಾಡಬೇಕು ಎಂದು ಆವೊತ್ತು ಚರ್ಚೆಯಾಗಿರುವ ವಿಚಾರ. ತಮಗೆ ಗೊತ್ತಿದೆ, ಇತ್ತೀಚೆಗೆ ಮೂರ್‍ನಾಲ್ಕು ಹೊಸ ಹೊಸ ಆಜ್ಞೆಗಳು ಸರ್ಕಾರದಿಂದ ಹೊರಟಿದೆ. ಅದು ಪ್ರಮುಖವಾಗಿ ಅನ್ ಆಥರೈಸ್ಡ್ ಕನೆಕ್ಷನ್ಸ್ ಏನಿದೆ, ಅದನ್ನು ರೆಗ್ಯುಲರೈಜ್ ಮಾಡಬೇಕಾದರೆ ಹತ್ತು ಸಾವಿರ ರೂಪಾಯಿ ಆಮೇಲೆ ಹೆಚ್‌ಪಿಗೆ ಮೂರು ನೂರು ರೂಪಾಯಿ, ಒಟ್ಟಿಗೆ ಸೇರಿ 13,500 ರೂಪಾಯಿ ಒಂದು ಪಂಪ್‌ಸೆಟ್ ರೆಗ್ಯುಲರೈಜ್

ಮಾಡಬೇಕಾದರೆ ಒಂದು ಪವರ್ ಕನೆಕ್ಷನ್‌ಗೆ ಆಗುತ್ತದೆ, ಇದೊಂದು ಆಜ್ಞೆಯಾಗಿದೆ. 30 ದಿವಸದ ಒಳಗಡೆ ಹಣ ಕಟ್ಟದೇ ಹೋದರೆ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬೇಕು ಎಂದು ಹೊಸ ಆಜ್ಞೆ. ಈ ಸಂದರ್ಭದಲ್ಲಿ ಒಂದು ಪ್ರಶ್ನೆಯನ್ನು ಹಾಕಬೇಕಾಗಿದೆ. ಏನು ಅನ್ ಆಥರೈಸ್ಡ್ ಕನೆಕ್ಷನ್ ತೆಗೆದುಕೊಳ್ಳುತ್ತಾರೆ, ಅಲ್ಲಿ ಹಾಲಿ ಇರುವ ಕಂಬದಿಂದ ಎಲ್ಲಿ ಸಾಧ್ಯವಿದೆಯೋ ಅಲ್ಲಿ ಮಾತ್ರ ಅನ್ ಆಥರೈಸ್ಡ್ ಕನೆಕ್ಷನ್ಸ್ ತೆಗೆದುಕೊಳ್ಳುವುದಕ್ಕಾಗುತ್ತದೆ. ಎಲ್ಲೆಂದರಲ್ಲಿ ರೈತರು ಬೋರ್‌ವೆಲ್ ಹಾಕಿ ಸುಮಾರು ನೂರು ಮೀಟರ್, ಇನ್ನೂರು ಮೀಟರ್, ಅರ್ಧ ಕಿಲೋಮೀಟರ್‌ನಿಂದ ಯಾವ ರೈತರೂ ಅನ್ ಆಥರೈಸ್ಡ್ ಕನೆಕ್ಷನ್ಸ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇದು ನಮಗೆ ಆಗಿರುವ ಅನುಭವ.

ಅಧ್ಯಕ್ಷರು:- ನೀವು ಶಿಡ್ಲಘಟ್ಟ, ನಾನು ಶ್ರೀನಿವಾಸಪುರ. ಅನ್-ಆಥರೈಸ್ಡ್ ಕನೆಕ್ಷನ್ಸ್ ತೆಗೆದುಕೊಂಡಿದ್ದಾರಲ್ಲ, ಅದೂ ಕೂಡ ನಮ್ಮ ರೈತರಲ್ಲ ತೆಗೆದುಕೊಂಡಿದ್ದುದು ಇದನ್ನೆಲ್ಲಾ ಮಾಡಿದವರು ಕಂಟ್ರಾಕ್ಟರ್‌ಗಳು.

ಶ್ರೀ ವಿ. ಮುನಿಯಪ್ಪ:- ಕಂಟ್ರಾಕ್ಟರ್ ಮತ್ತು ಅಧಿಕಾರಿಗಳು. ಇದರಲ್ಲಿ ಎಲ್ಲರೂ ಶಾಮೀಲಾಗಿದ್ದಾರೆ. ನಾನೊಂದು ಪ್ರಶ್ನೆಯನ್ನು ಪ್ರಮುಖವಾಗಿ ಈ ವಿಚಾರದಲ್ಲಿ ಕೇಳ ಬೇಕಾಗುತ್ತದೆ. ಅವರಿಗೆ ರೆಗ್ಯುಲರೈಜ್ ಮಾಡಬೇಕಾದರೆ ಹತ್ತು ಸಾವಿರ ರೂಪಾಯಿ ದಂಡ ಹಾಕುತ್ತಿದ್ದೀರಿ, ಅವನು ಕಟ್ಟುವುದಕ್ಕೆ ವಿಫಲನಾದರೆ ಕ್ರಿಮಿನಲ್ ಮೊಕದ್ದಮೆ ಹೂಡವ ಕರಾಳ ಆಜ್ಞೆಯನ್ನು ಮಾಡಿದ್ದೀರಿ. ಅದಕ್ಕೆ ಸಂಬಂಧಪಟ್ಟ ಶಾಮೀಲಾಗಿರುವ ಕಂಟ್ರಾಕ್ಟರ್‌ಗಳು ಮತ್ತು ಅಧಿಕಾರಿಗಳ ಮೇಲೆ ಯಾವ ಕ್ರಮವನ್ನು ಇನ್‌ಸಿಸ್ಟ್ ಮಾಡಿದ್ದೀರಿ ಎಂದು ನಾವು ಪ್ರಶ್ನೆ ಮಾಡಬೇಕಾಗುತ್ತದೆ.

MR. SPEAKER:- It is a good suggestion.

ಶ್ರೀ ವಿ.ಮುನಿಯಪ್ಪ:- ಇದು ನಿರ್ದಿಷ್ಟವಾದ ಆರೋಪ. ಎಲ್ಲಿ ಒಂದು ಕಂಬ ಇದ್ದು ಅವನು ಅನ್ ಆಥರೈಸ್ಡ್ ಕನೆಕ್ಷನ್ಸ್ ತೆಗೆದುಕೊಂಡರೆ ತಕ್ಷಣ ಬೆಳಗ್ಗೆಯೇ ಸಂಬಂಧ ಪಟ್ಟ ಅಧಿಕಾರಿಗೆ, ಸಂಬಂಧಪಟ್ಟ ಜ್ಯೂರಿಸ್‌ಡಿಕ್ಷನ್ ಇರುವ ಲೈನ್‌ಮೆನ್ ರಿಪೋರ್ಟ್ ಮಾಡುತ್ತಾನೆ. ಆ ತಕ್ಷಣ ಅಧಿಕಾರಿ ಬಂದು ಅವನ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ಎನ್ನುವ ವಿಚಾರ ಬರುತ್ತದೆ. ಆ ಅಧಿಕಾರಿಯ ನಿರ್ಲಕ್ಷತನದ ಬಗ್ಗೆ ಸರ್ಕಾರ ಜವಾಬ್ದಾರಿ ಏನು ಫಿಕ್ಸ್ ಮಾಡಿದೆ ಎಂಬ ನಿರ್ದಿಷ್ಟವಾದ ಉತ್ತರ ಬೇಕಾಗಿದೆ. ಇವತ್ತು ಅನ್ ಆಥರೈಸ್ಡ್ ಕನೆಕ್ಷನ್‌ಗೆ ಇಷ್ಟೊಂದು ದಂಡ ಹಾಕಿರುವುದು ಖಂಡಿತಾ ಬಹಳ ದುಬಾರಿ ಅಲ್ಲಿರುವ ಕಂಬ ಅವನು ಉಪಯೋಗ ಮಾಡುತ್ತಿದ್ದಾನೆ. ಹತ್ತಾರು ಜನ ಕನ್‌ಸ್ಯೂಮರ್ಸ್ ಉಪಯೋಗ ಮಾಡಿಕೊಂಡಿದ್ದಾರೆ. ಪಂಪ್‌ಸೆಟ್ಸ್ ಒಬ್ಬೊಬ್ಬರಿಗೂ ಒಂದೊಂದು ಪಂಪ್‌ಸೆಟ್‌ಗೆ ಹತ್ತು ಸಾವಿರ ಹಾಕಿದರೆ ಹೇಗೆ?

ಅಧ್ಯಕ್ಷರು:- ಕಮಿಟಿಯಲ್ಲಿ ನೀವು ಎಷ್ಟು ಸಜೆಸ್ಟ್ ಮಾಡಿದ್ದೀರಿ?

ಶ್ರೀ ವಿ. ಮುನಿಯಪ್ಪ:- ಹೆಚ್.ಪಿ.ಗೆ ಬರೀ ನೂರು ರೂಪಾಯಿ. ಇದರ ವಿಚಾರವೇ ಕಮಿಟಿಯಲ್ಲಿ ಪ್ರಸ್ತಾಪ ಮಾಡಿಲ್ಲ. ಅನ್ ಆಥರೈಸ್ಡ್ ಕನೆಕ್ಷನ್‌ಗೆ ರೆಗ್ಯುಲರೈಜ್ ಮಾಡುವ ಬಗ್ಗೆ ಕೆಇಬಿಯವರು ಇದರ ಪ್ರಸ್ತಾಪವೇ ತರಲಿಲ್ಲ ನಾನೂ ಕೂಡ ಸಮಿತಯಲ್ಲಿದ್ದೇನೆ. ದರ ನಿಗದಿ ಮಾಡುವ ಸಮಿತಿ ಇದ್ದರು ಸಹಾ ಈ ರೀತಿ ಮಾಡಿರುವುದು ಕಾನೂನಿಗೆ ವಿರುದ್ಧವಾದ ಕ್ರಮ ಎಂದು

ಹೇಳಿದರು ತಪ್ಪಾಗುವುದಿಲ್ಲ. ಸಂವಿಧಾನಬದ್ಧವಾಗಿಯೂ ಇದು ವಿರೋಧವಾಗುತ್ತದೆ. ದರ ನಿಗದಿ ಮಾಡುವ ಸಮಿತಿ ಇರುವ ಸಂದರ್ಭದಲ್ಲಿ ಸದನದ ಸಮಿತಿಯ ಗಮನಕ್ಕೇ ತರದೇ ಪ್ರಜಾಪ್ರಭುತ್ವದಲ್ಲಿರುವ ವ್ಯವಸ್ಥೆಯಲ್ಲಿರುವ ಅಧಿಕಾರಸ್ಥ ಸಮಿತಿಯ ಗಮನಕ್ಕೇ ತರದೆ ಮಾಡುತ್ತಿರುವುದು ಬಹಳ ನಿರ್ಲಕ್ಷ್ಯ ಮನೋಭಾವ ಸರ್ಕಾರದ್ದು ಎಂದು ನೇರವಾಗಿ ತಮ್ಮ ಮುಖಾಂತರ ತಿಳಿಸುತ್ತೇನೆ. ಈಗ ಸೆಲ್ಫ್ ಫೈನಾನ್ಸ್ ಸ್ಕೀಮ್ ಎಂದು ಇನ್ನೊಂದು ಕಾನೂನನ್ನು ತಂದಿದ್ದಾರೆ. ಅದೇನೆಂದರೆ, ಹೊಸ ಪವರ್ ಕನೆಕ್ಷನ್ಸ್ ತರಬೇಕಾದರೆ ಒಂದು ಕಂಬ ಇದ್ದರೆ ಹತ್ತು ಸಾವಿರವೋ ಐದು ಸಾವಿರವೋ ಕಟ್ಟಬೇಕು. ಎರಡು ಕಂಬ, ಮೂರು ಕಂಬ ಆದರೆ ಎಸ್ಟಿಮೇಟ್ ಕಾಸ್ಟ್ ಪ್ರಕಾರ ಕಟ್ಟಬೇಕು ಎಂದು ನಿಗದಿ ಮಾಡಿದರು. ಆ ಆರ್ಡರ್ ಪ್ರಕಾರ ಕೆಲವರ ಹತ್ತಿರ ಹಣವನ್ನು ಡಿಪಾಸಿಟ್ ಮಾಡಿಸಿಕೊಂಡರು. ಅವರಿಗೆ ಇನ್ನೂ ಹೊಸ ಪವರ್ ಕನೆಕ್ಷನ್ಸ್ ಕೊಟ್ಟಿಲ್ಲ. ಅದರ ಜೊತೆಗೆ ಇನ್ನೊಂದು ಏನು ಮಾಡಿದ್ದಾರೆ ಎಂದರೆ 1-1-97 ರಿಂದ ಒಂದು ಹೊಸ ಆಜ್ಞೆಯನ್ನು ಬೋರ್ಡ್‌ನವರು ಹೊರಡಿಸಿದ್ದಾರೆ, ಆ ಆಜ್ಞೆ ಏನೆಂದರೆ ಯಾರೇ ಪಂಪ್‌ಸೆಟ್‌ಗೆ ಅರ್ಜಿ ಕೊಟ್ಟರೆ ಅರ್ಜಿ ತೆಗೆದುಕೊಳ್ಳಿ, ಡಿಪಾಸಿಟ್ ಕಟ್ಟಿಸಿಕೊಳ್ಳಬೇಡಿ, ಅವರಿಗೆ ಪವರ್ ಕನೆಕ್ಷನ್ಸ್ ಕೂಡ ಕೊಡಬೇಡಿ ಎಂದು ಹೇಳಿ ತೀರ್ಮಾನ ಮಾಡಿದ್ದಾರೆ. ನೇರವಾಗಿ ಕೆಇಬಿಯಲ್ಲಿ ಕೇಳಿದರೆ ನಮಗೇನೂ ಗೊತ್ತಿಲ್ಲ, ಸರ್ಕಾರದಿಂದ ಸ್ಟ್ಯಾಂಡಿಂಗ್ ಇನ್‌ಸ್ಟ್ರಕ್ಷನ್ಸ್ ಇದೆ, ಅರ್ಜಿ ತೆಗೆದುಕೊಳ್ಳಿ, ನೀವು ಸುಮ್ಮನೆ ಇರಿ, ಇದರ ಬಗ್ಗೆ ಯಾವುದು ಉತ್ತರ ಕೊಡಬೇಡಿ ಎಂದು ಅನಿಶ್ಚಿತವಾದಂಥ ರೀತಿ ಅಧಿಕಾರಿಗಳಿಗೆ ಹ್ಯುಮಿಲೇಟ್ ಮಾಡುವ ಆಜ್ಞೆಯನ್ನು ಇತ್ತೀಚೆಗೆ 1-1-97ರಲ್ಲಿ ಕಳುಹಿಸಿದ್ದಾರೆ.

4.30 ಪಿಎಂ

30 ದಿವಸದಲ್ಲಿ ಮಾಡದೇ ಇದ್ದರೆ ಕ್ರಿಮಿನಲ್ ಮೊಕದ್ದಮೆ ಹೂಡತಕ್ಕದ್ದು ಎಂದು ಕರಾಳ ಆಜ್ಞೆಯನ್ನು ಮಾಡಿದ್ದಾರೆ ಅದು ಖಂಡಿತ ಕೂಡದು. ಅದನ್ನು ಮಾಡುವುದೇ ರೈತರ ಮೇಲೆ. 30 ದಿವಸದಲ್ಲಿ ಹಣ ಕಟ್ಟದೇ ಇದ್ದಾಗ ಕ್ರಮ ಮಾಡುವುದು ಇದ್ದರೆ ಅಧಿಕಾರಿಗಳನ್ನು ಸೇರಿಸಿ ಮಾಡಬೇಕು. ಅಧಿಕಾರಿಗಳನ್ನು ತತ್‌ಕ್ಷಣ ಕೆಸಲದಿಂದಾ ವಜಾ ಮಾಡಬೇಕು. ಏಕೆಂದರೆ ಪೂರ್ಣವಾಗಿ ನೂರಕ್ಕೆ ನೂರು ಅನಧಿಕೃತ ವಿದ್ಯುತ್ ಸಂಪರ್ಕಕ್ಕೆ ಅವರ ಗಮನದಲ್ಲಿದ್ದು ಅವರ ಒಂದು ಆಶೀರ್ವಾದದಿಂದಲೇ ಅನಧಿಕೃತ ಸಂಪರ್ಕ ಮುಂದುವರಿಯುತ್ತಿದೆ. ಅದನ್ನು ಯಾರೂ ಮುಚ್ಚಿಡುವುದಕ್ಕೆ ಸಾಧ್ಯ ಇಲ್ಲ. ಇಂತಹ ಒಂದು ಹೊರೆಯನ್ನು ರೈತರ ಮೇಲೆ ಹಾಕಿರತಕ್ಕದ್ದು ಬಹಳ ಅನ್ಯಾಯ. ದಂಡವನ್ನು ಹತ್ತು ಸಾವಿರಕ್ಕೆ ಏನು ಹೆಚ್ಚಿಸಿದ್ದೀರಿ ಅದನ್ನು ಕನಿಷ್ಠ ಒಂದು ಸಾವಿರಕ್ಕೆ ಮಾಡಿ. 13,500 ರೂಪಾಯಿನಿಂದ 15,000 ರೂಪಾಯಿಗಳು ಕಟ್ಟಬೇಕು ಎಂಬ ಆಜ್ಞೆ ಏನು ಇದೆ, ಅದನ್ನು ಏಕದಂ ವಾಪಸ್ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇತ್ತೀಚೆಗೆ ಲೈಟಿಂಗ್ ಕನೆಕ್ಷನ್‌ಗೆ ಪೋಲು ಇಲ್ಲದೇ ಇದ್ದರೆ ಕನೆಕ್ಷನ್ ಇಲ್ಲವೆಂದು ಕನ್ಸೂಮರ್ಸ್, ಲೈಟಿಂಗ್ ಕನೆಕ್ಷನ್‌ಗೆ ದುಡ್ಡು ಕಟ್ಟುವುದಕ್ಕೆ ಅರ್ಜಿ ಕೊಟ್ಟರೆ ಅವರಿಗೂ ಲೈಟಿಂಗ್ ಕನೆಕ್ಷನ್ ಇಲ್ಲ. ಈಗ ಹೊಸ ಮೂರು ನಾಲ್ಕು ಆರ್ಡರ್‌ಗಳನ್ನು ಮಾಡಿದ್ದಾರೆ. ಈ ದರವನ್ನು ನಿಗದಿ ಮಾಡತಕ್ಕ ಅಧಿಕಾರವನ್ನು ತಮ್ಮ ಅಧ್ಯಕ್ಷತೆಯಲ್ಲಿ ಸದನ ಸಮಿತಿಗೆ ಏನು ಕೊಟ್ಟಿದ್ದೀರಿ, ಅದನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ

ಮಾಡಿ, ನೇರವಾಗಿ ಇವತ್ತು ರೈತರ ಮೇಲೆ ಹೊಸ ಆಜ್ಞೆಗಳನ್ನು ತಂದಿರುವುದರಿಂದ ರೈತರಿಗೆ ಬಹಳಷ್ಟು ಅನ್ಯಾಯ ಆಗಿದೆ. ಇವತ್ತು ಅನಧಿಕೃತ ಸಂಪರ್ಕದ ಬಗ್ಗೆ ತಮಗೆ ವಿಚಾರ ಗೊತ್ತಿದೆ. ನಮ್ಮ ಜಿಲ್ಲೆಯಲ್ಲಿ ಒಂದು ಬೋರ್‌ವೆಲ್ ಕೊರೆಯಬೇಕಾದರೆ ಎಷ್ಟು ಕಷ್ಟ ಇದೆ ಎಂದು ಗೊತ್ತಿದೆ. ಎಷ್ಟು ಕಷ್ಟಪಡುತ್ತಾರೆಂಬ ವಿಚಾರ ಗೊತ್ತಿದೆ. ಅದರ ಜೊತೆಗೆ 13,500 ರೂಪಾಯಿ ಏಕದಂ ದುಡ್ಡ ಕಟ್ಟಬೇಕು ಎಂದರೆ ರೈತನ ಪರಿಸ್ಥಿತಿ ಏನಾಗಬೇಕು, ಗತಿ ಏನಾಗುತ್ತದೆ ಎಂಬ ಬಗ್ಗೆ ತಮಗೆಲ್ಲಾ ಅರಿವು ಇರತಕ್ಕ ವಿಚಾರ. ಈಗ ದುಬಾರಿ ದಂಡದ ಹೊಸ ಆಜ್ಞೆ ಏನು ತಂದಿದ್ದಾರೆ, ಇದನ್ನು ವಾಪಸ್ ಪಡೆಯಬೇಕು. ರೈತರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡತಕ್ಕ ಈ ಕರಾಳ ಆಜ್ಞೆ ಖಂಡಿತ ಯಾವುದೇ ಕಾರಣಕ್ಕೆ ಕೂಡದು. ಅದನ್ನು ವಾಪಸ್ ಪಡೆದುಕೊಳ್ಳಬೇಕು ಎಂಬ ಒತ್ತಾಯವನ್ನು ಸರ್ಕಾರದ ಮೇಲೆ ಮಾಡುತ್ತೇನೆ. ಇನ್ನು ಮೀಟರ್ ವಿಚಾರ. ಇವತ್ತು ನಾವು ಹೆಚ್‌ಪಿ ಮೇಲೆ ದರವನ್ನು ನಿಗದಿ ಮಾಡಿದ್ದೇವೆ. ವಿದ್ಯುತ್ ಪಂಪು ಸೆಟ್‌ನ ಹೆಚ್‌ಪಿ ಮೇಲೆ ದರವನ್ನು ನಿಗದಿ ಮಾಡಿದ್ದೇವೆ.

ಮೀಟರ್ ಬೇಡ ಎಂದು ಹೇಳಿ ಕ್ಲಿಯರ್ ಇಂಡಿಕೇಶನ್ ಇದ್ದರೂ ಈಗ ಹೊಸ ಪಂಪುಸೆಟ್ಟುಗಳಿಗೆ ಮೀಟರ್ ಹಾಕಬೇಕು ಎಂಬ ಹೊಸ ಆರ್ಡರನ್ನು ಮಾಡಿದ್ದಾರೆ. ಎಲ್ಲಾ ರೈತರೂ ಕಡ್ಡಾಯವಾಗಿ ಮೀಟರನ್ನು ಹಾಕಿಸಿಕೊಳ್ಳಬೇಕು. ಯಾರು ಹೊಸ ಪಂಪು ಸೆಟ್ಟು ಕನೆಕ್ಷನ್ ಪಡೆದುಕೊಳ್ಳುತ್ತಾರೆ, ಅವರು ಮೀಟರನ್ನು ಹಾಕಿಸಿಕೊಳ್ಳಬೇಕು ಅಂದರೆ ಯೂನಿಟ್ ಮೇಲೆ ದರವನ್ನು ನಿಗದಿ ಮಾಡುತ್ತೇವೆಂದು ಇದರ ಅರ್ಥ. ಇಲ್ಲದೇ ಇದ್ದರೆ ಮೀಟರ್ ಅವಶ್ಯಕತೆ ಏನು? ರೈತನಿಗೆ ಮೀಟರ್ ಅವಶ್ಯಕತೆ ಬೇಡ. ಅವನಿಗೆ ಕೊಡತಕ್ಕ 8 ಗಂಟೆ ಅಥವಾ 10 ಗಂಟೆ ಕರೆಂಟು, ಅದು ವರ್ಷದಲ್ಲಿ 7-8 ತಿಂಗಳು ಮಾತ್ರ ಉಪಯೋಗ ಮಾಡುತ್ತಾನೆ. ಮಳೆಗಾಲದಲ್ಲಿ ಯಾವ ರೈತರೂ ಪಂಪು ಸೆಟ್ ಆನ್ ಮಾಡುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಸುಮಾರು ಒಂದು ಲಕ್ಷ ಪಂಪು ಸೆಟ್ಟುಗಳಿವೆ. ಅದರಲ್ಲಿ ಸುಮಾರು 25 ಭಾಗ ಆಪರೇಟ್ ಆಗುತ್ತಾ ಇಲ್ಲ. ಓಪನ್ ವೆಲ್ಸ್ ಎಲ್ಲಾ ಸಂಪೂರ್ಣವಾಗಿ ಡ್ರೈ ಆಗಿವೆ. ಆ ಓಪನ್ ವೆಲ್ಸ್‌ಗೆ ಇರತಕ್ಕ ಕನೆಕ್ಷನ್ಸ್ ಎಲ್ಲಾ ಸಂಪೂರ್ಣವಾಗಿ ನಿಂತು ಹೋಗಿ ಎಲ್ಲಾ ಡಿಸಕನೆಕ್ಟ್ ಆಗುವ ಸ್ಥಿತಿಯಲ್ಲಿದೆ. ಆದರೆ ಇವರ ಅಕೌಂಟ್‌ನಲ್ಲಿ ಅದು ಲೆಕ್ಕ ಇದೆ. 46 ಪರ್ಸೆಂಟ್ ರೈತರು ಇರೀಗೇಷನ್‌ಗೆ ಸೆಕ್ಟಾರ್‌ನಲ್ಲಿ ಉಪಯೋಗ ಮಾಡುತ್ತಾರೆಂದು ರಿಪೋರ್ಟ್ ಏನು ಇದೆ, ಅದರಲ್ಲಿ ಖಂಡಿತ 25 ರಿಂದ 30 ಪರ್ಸೆಂಟ್ ಉಪಯೋಗ ಮಾಡಬಹುದು. ಇನ್ನು 15 ರಿಂದ 16 ಪರ್ಸೆಂಟ್ ಏನು ಇದೆ, ಅದು ಸಂಪೂರ್ಣವಾಗಿ ಕಳ್ಳತನ ಆಗುತ್ತಾ ಇದೆ. ಎಲ್ಲ ಅಧಿಕಾರಿಗಳು ಇದರ ಬಗ್ಗೆ ಸಂಪೂರ್ಣವಾದ ಮಾಹಿತಿ ಪಡೆದುಕೊಳ್ಳದೇ, ಇವತ್ತು ಸಂಪೂರ್ಣವಾಗಿ ಮೀಟರ್ ಇಲ್ಲ, ಆದಕ್ಕೆ ನಾನ್ ಮೀಟರಿಂಗ್ ಸೆಕ್ಟಾರ್ ಏನು ಇದೆ, ಅದರ ಮೇಲೆ ಅಕೌಂಟ್ ಮಾಡುತ್ತಿದ್ದಾರೆ. ರೈತರು ಇಷ್ಟೊಂದು ಕನ್‌ಸಂಪಷನ್ ಮಾಡುತ್ತಿದ್ದಾರೆ ನಾವ್ಯಾಕೆ ಫ್ರೀ ಕೊಡಬೇಕು ಎಂಬ ಭಾವನೆ ವಿದ್ಯುತ್ ಮಂಡಳಿಯಿಂದ ಹುಟ್ಟಿರತಕ್ಕದ್ದು ಆಗಿದೆ. ವಿದ್ಯುತ್ ಮಂಡಲಿಯ ನಿರ್ಲಕ್ಷ್ಯತನ ಮತ್ತು ವಿದ್ಯುತ್ ಮಂಡಲಿಯಲ್ಲಿನ ಇರೆಗ್ಯುಲಾರಿಟೀಸ್ ಏನು ಇದೆ, ಅದರ ಬಗ್ಗೆ ನಾನು ಪ್ರತ್ಯೇಕವಾಗಿ ಮಾತಾಡಲು ಇಷ್ಟಪಡುತ್ತೇನೆ. ಇವತ್ತು ಏನು ಈ ಹೊಸ ಆಜ್ಞೆ ತಂದಿದ್ದಾರೆ.

ಇದರಿಂದ ರೈತರಿಗೆ ತೊಂದರೆ ಆಗಿದೆ. ರೈತರು ವ್ಯವಸಾಯ ಮಾಡಲು ಕೇವಲ 6 ಗಂಟೆ ಅಥವಾ 8 ಗಂಟೆ ವಿದ್ಯುತ್ ಕೊಟ್ಟರೆ ಸಾಧ್ಯ ಇದೆಯೇ ಎಂಬುದನ್ನು ತಾವು ಯೋಚನೆ ಮಾಡಬೇಕು. ಕನಿಷ್ಠ 12 ಗಂಟೆ ಆದರೂ ವಿದ್ಯುತ್ತನ್ನು ಕೊಡದೇ ಹೋದರೆ ಕಷ್ಟ ಆಗುತ್ತದೆ. ವಿದ್ಯುತ್ ಅತಿ ಅವಶ್ಯಕತೆ ಇರತಕ್ಕದ್ದು ನಮ್ಮ ಜಿಲ್ಲೆ ಮತ್ತು ಇತರೆ 5-6 ಜಿಲ್ಲೆಗಳಲ್ಲಿ ಮಾತ್ರ ಜನವರಿಯಿಂದ ಏಪ್ರಿಲ್‌ವರೆಗೆ ನಾಲ್ಕು ತಿಂಗಳು 12 ಗಂಟೆ ಕಾಲ ವಿದ್ಯುತ್ ಕೊಟ್ಟು ಉಳಿದ ಎಂಟು ತಿಂಗಳಲ್ಲಿ ಆರು ಗಂಟೆ ವಿದ್ಯುತ್ ಕೊಟ್ಟರೂ ಅವರು ಸುಧಾರಿಸಿಕೊಳ್ಳುತ್ತಾರೆ. ಈ ನಾಲ್ಕು ತಿಂಗಳಲ್ಲಿ ಮಾತ್ರ ಪೂರ್ಣವಾಗಿ ಕನಿಷ್ಠ 12 ಗಂಟೆ ವಿದ್ಯುತ್ ಕೊಡತಕ್ಕ ವ್ಯವಸ್ಥೆ ವಿದ್ಯುತ್ ಮಂಡಲಿಯಿಂದ ಆಗಬೇಕಾಗುತ್ತದೆ. ಇನ್ನು ಉಳಿದ 8 ತಿಂಗಳು ಅವರು ಎಲ್ಲಾ ಇಂಡಸ್ಟ್ರಿಗಳಿಗೆ, ಬೇರೆ ಸೆಕ್ಟಾರ್‌ಗಳಿಗೂ ವಿದ್ಯುತ್ ಕೊಡಲಿ. ಈ 4 ತಿಂಗಳು ಬೇಸಿಗೆಯಲ್ಲಿ ರೈತ ಬೆಳೆಯತಕ್ಕ ಬೆಳೆಯನ್ನು ಉಳಿಸಿಕೊಳ್ಳಬೇಕಾದರೆ, ಆತ ನಷ್ಟಕ್ಕೆ ಈಡಾಗದೇ ಇರಬೇಕಾದರೆ 12 ಗಂಟೆ ವಿದ್ಯುತ್ ಕೊಡಬೇಕು. ಅವನಿಗೆ ಎಷ್ಟು ಬೇಕೋ ಅಷ್ಟನ್ನು ಉಪಯೋಗ ಮಾಡಿಕೊಂಡು ಉಳಿದ ವಿದ್ಯುತ್ ಸಮಾಜಕ್ಕೆ ಕೊಡುತ್ತಾನೆ. ರೈತನಿಗೆ ನಾವು ಸರಿಯಾದಂತಹ ರಿಲೀಫನ್ನು ಕೊಡದೇ ಹೋದರೆ ಖಂಡಿತವಾಗಿ ಎಲ್ಲರೂ ಸೇರಿ ರೈತನಿಗೆ ಅನ್ಯಾಯ ಮಾಡಿದಹಾಗೆ ಆಗುತ್ತದೆ ಎನ್ನತಕ್ಕ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇನ್ನು ಹೊಸ ಪಂಪ್‌ಸೆಟ್‌ಗೆ ಒಂದು ಆಜ್ಞೆ ತಂದಿದ್ದಾರೆ. ಡ್ರಿಂಕಿಂಗ್ ವಾಟರ್‌ಗೆ 825 ಮೀಟರ್ ಇರಬೇಕು ಎಂದು ನಾನೂ ಒಪ್ಪುತ್ತೇನೆ. ಏಕೆಂದರೆ ಒಬ್ಬರಿಗೆ ಕನೆಕ್ಷನ್ ಕೊಡುವುದರಲ್ಲಿ ಊರಿನ ಗ್ರಾಮಸ್ಥರಿಗೆಲ್ಲಾ ಕುಡಿಯುವ ನೀರಿನ ತೊಂದರೆ ಆಗುತ್ತದೆ. ಅದು ಹಾಗಿರಲಿ. ಆದರೆ ಪಂಪುಸೆಟ್ಟಿನಿಂದ ಪಂಪುಸೆಟ್ಟಿಗೆ ಇಷ್ಟು ದೂರ ಇರಬೇಕೆಂದು ಒಂದು ಹೊಸ ಆಜ್ಞೆ ಸರ್ಕಾರ ತಂದಿದೆ. ಪಂಪುಸೆಟ್‌ಗೆ ಅದು ಖಾಸಗಿಯವರದೇ ಇರಲಿ ಬೇರೆ ಯಾವುದೇ ಇರಲಿ ಅದಕ್ಕೆ ಸಾಲ ಕೊಡುವುದರಲ್ಲಿ ಒಂದು ನಿಯಂತ್ರಣ ಇತ್ತು. 800 ಅಡಿಯಿಂದ 800 ಅಡಿಗೆ ಅವನು ಸಾಲ ತೆಗೆದುಕೊಳ್ಳಬೇಕಾದರೆ, ಬೋರ್‌ವೆಲ್‌ನಿಂದ ಬೋರ್‌ವೆಲ್‌ಗೆ ಡಿಸ್ಟನ್ಸ್ ಇರಬೇಕೆಂದು ಆದರೆ ಇವರು ಪವರ್ ಕನೆಕ್ಷನ್ ಕೊಡುವುದಕ್ಕೂ ಒಂದು ಹೊಸ ಆಜ್ಞೆಯನ್ನು ತಂದಿದ್ದಾರೆ. ಇದನ್ನೂ ದಯಮಾಡಿ ಅವರು ವಾಪಸ್ ತೆಗೆದುಕೊಳ್ಳಬೇಕು. ಸರ್ಕಾರ ಬೋರ್‌ವೆಲ್‌ನಿಂದ ಬೋರ್‌ವೆಲ್‌ಗೆ ಪವರ್ ಕನೆಕ್ಷನ್ಸ್ ಕೊಡಬೇಕಾದರೆ 800 ಅಡಿ ಖಾಸಗಿಯವರಿಗೆ ಕೊಟ್ಟಿದ್ದಾರೆ. ಅದನ್ನೂ ಖಂಡಿತವಾಗಿ ವಾಪಸ್ ತೆಗೆದುಕೊಳ್ಳಬೇಕು. ಇಲ್ಲದೇ ಇದ್ದರೆ ನಾವು ಅನಿವಾರ್ಯವಾಗಿ ಇದರ ಬಗ್ಗೆ ಉಗ್ರವಾದ ಪ್ರತಿಭಟನೆಯನ್ನು ಸರ್ಕಾರದ ಮೇಲೆ ನಾವೆಲ್ಲ ಮಾಡತಕ್ಕದ್ದರ ಬಗ್ಗೆ ತೀರ್ಮಾನ ಮಾಡಬೇಕಾಗುತ್ತದೆ ಎನ್ನತಕ್ಕ ಮಾತನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡುತ್ತಿದ್ದೇನೆ. ದುಬಾರಿ ದಂಡ, ಕರಾಳ ಆಜ್ಞೆ ಮತ್ತು ಹೊಸ ಆಜ್ಞೆ ಏನು ಇದೆ, ಇವೆಲ್ಲವನ್ನೂ ವಾಪಸ್ ಪಡೆದುಕೊಳ್ಳಬೇಕು. ತಾವು ಅಪಾಯಿಂಟ್ ಮಾಡಿರತಕ್ಕ ಸದನ ಸಮಿತಿ ದರ ನಿಗದಿ ಪಡಿಸಲು ಇದೆ; ಅದರ ಮುಖಾಂತರ ಮತ್ತೊಮ್ಮೆ ಎಲ್ಲ ವಿಚಾರವನ್ನೂ ಚರ್ಚೆ ಮಾಡಿ ಅದನ್ನು ಎಫೆಕ್ಟಿಗೆ ಕೊಡಬೇಕೆಂದು ಹೇಳಿ ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತಿದ್ದೇನೆ.

ಅಧ್ಯಕ್ಷರು:- ಮಾನ್ಯ ವಿಜಯಾ ಶಂಕರ್ ಅವರು ಮಾತನಾಡಲಿ. ರಿಪಿಟಿಷನ್ ಬೇಡ. ಸುಮಾರು ಹೊತ್ತಿನಿಂದ ರಿಪಿಟಿಷನ್ ಆಗುತ್ತಿತ್ತು. ನನಗೆ ಬೆಲ್ ಹೊಡೆಯಲು ಮನಸ್ಸು ಬರಲಿಲ್ಲ. ಏನಾದರೂ ಹೊಸ ಪಾಯಿಂಟ್ಸ್ ಇದ್ದರೆ ಹೇಳಿ. ಇನ್ನೂ ಎರಡು ಮೂರು ಜನರಿಗೆ ಮಾತನಾಡಲು ಅವಕಾಶ ಕೊಡುತ್ತೇನೆ.

\+ **ಶ್ರೀ ಸಿ.ಹೆಚ್. ವಿಜಯ ಶಂಕರ್ (ಹುಣಸೂರು)**:- ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ತಾವು ಕೊಟ್ಟಂತಹ ಅವಕಾಶವನ್ನು ಉಪಯೋಗಿಸಿಕೊಂಡು ಎರಡೇ ಎರಡು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಈ ಮೊದಲು ಮಾತನಾಡಿದ ಎಲ್ಲ ಹಿರಿಯ ಸದಸ್ಯರು ಬಹಳ ಸುದೀರ್ಘವಾಗಿ, ಸಮರ್ಪಕವಾದ ವಿಚಾರಗಳನ್ನು ಸರ್ಕಾರಕ್ಕೆ ಮನದಟ್ಟು ಮಾಡಿಕೊಟ್ಟಿದ್ದಾರೆಂದು ನಾನು ಭಾವಿಸಿರುವುದರಿಂದ ಈ ಸಮಯದಲ್ಲಿ ನನ್ನ ಅಭಿಪ್ರಾಯ ಇಷ್ಟೇ. ಬಡ ಬೋರೇಗೌಡನಿಗೆ ಪುಕ್ಕಟೆಯಾಗಿ ವಿದ್ಯುತ್ತ್‌ನ್ನು ಕೊಟ್ಟರೆ ಸರ್ಕಾರಕ್ಕೆ ನಷ್ಟ ಆಗುತ್ತದೆ ಎಂದು ಸರ್ಕಾರ ಯೋಚನೆ ಮಾಡುತ್ತದೆ. ಅನ್ನ ಬೆಳೆಯುವ ರೈತರಿಗೆ ಮೀಟರನ್ನು ಅಳವಡಿಸದೇ ಇದ್ದರೆ ಕೆಇಬಿಗೆ ಲಾಸ್ ಆಗುತ್ತದೆ ಎಂದು ಯೋಚನೆ ಮಾಡುವ ಸರ್ಕಾರ ಕೆಇಬಿ ಸಿಬ್ಬಂದಿಗೆ ಏಕೆ ವಿದ್ಯುತ್ತನ್ನು ಪುಕ್ಕಟೆಯಾಗಿ ಕೊಡುತ್ತದೆ? ನಮ್ಮ ಬಡ ಬೋರೇಗೌಡನಿಗಿಂತ ಕಡಿಮೆ ಆಗಿದೆಯೇ ಕೆಇಬಿ ಸಿಬ್ಬಂದಿ. ಬಡ ಬೋರೇಗೌಡನ ಬಗ್ಗೆ ಚಿಂತೆ ಮಾಡುವಂತಹ ಸರ್ಕಾರ, ಆತನಿಗೆ ಈ ಸೌಲಭ್ಯ ಕೊಟ್ಟರೆ ನಮ್ಮ ಸರ್ಕಾರಕ್ಕೆ ಲಾಸ್ ಆಗುತ್ತದೆ ಎನ್ನುವಂತಹ ಸರ್ಕಾರ ಕೆಇಬಿ ಸಿಬ್ಬಂದಿಯನ್ನು ಏಕೆ ಈ ವಿಚಾರದಿಂದ ಹೊರತಾಗಿ ಇಟ್ಟಿದ್ದಾರೆ? ಅವರಿಗೆ ಏಕೆ ಪುಕ್ಕಟೆ ಸೌಲಭ್ಯವನ್ನು ಕೊಡುವ ಯೋಜನೆ ಮಾಡಿದ್ದಾರೆ? ಇವತ್ತು ಅತ್ಯಂತ ಹೆಚ್ಚಿನ ಸಂಬಳ ಪಡೆಯುವಂತಹ ಸರ್ಕಾರದ ಸಿಬ್ಬಂದಿಯಲ್ಲಿ ಕೆಇಬಿ ಸಿಬ್ಬಂದಿ ಕೂಡ ಒಂದು. ಆದರೂ ಕೆ ಇ ಬಿ ಸಿಬ್ಬಂದಿಯನ್ನು ಈ ವ್ಯವಸ್ಥೆಯಿಂದ ಹೊರತಾಗಿ ಇಟ್ಟಿದ್ದಾರೆ. ಅವರಿಗೆ ಪುಕ್ಕಟೆಯಾಗಿ ವಿದ್ಯುತ್ತನ್ನು ಕೊಡುವ ವ್ಯವಸ್ಥೆ ಏನಿದೆ, ಮೀಟರನ್ನು ಅಳವಡಿಸದೇ ಇರುವಂತಹ ವ್ಯವಸ್ಥೆ ಏನಿದೆ, ಇದು ಸರಿಯಲ್ಲ. ಸರ್ಕಾರ ಉತ್ತರ ಕೊಡುವಂತಹ ಸಂದರ್ಭದಲ್ಲಿ ಆ ಸಿಬ್ಬಂದಿಯನ್ನೂ ಕೂಡ ಹೊರತಾಗಿ ಇರುವುದಿಲ್ಲ. ಅವರನ್ನೂ ಕೂಡ ಈ ನಿಯಮದ ಚೌಕಟ್ಟಿನ ಅಡಿಯಲ್ಲಿ ತರುತ್ತೇವೆ. ಅವರಿಗೆ ಕೂಡ ಮೀಟರನ್ನು ಅಳವಡಿಸುತ್ತೇವೆ. ವಿದ್ಯುಚ್ಛಕ್ತಿ ಉಪಯೋಗಿಸಿದರೆ ಅವರೂ ಕೂಡ ಕೆಇಬಿಗೆ ಹಣ ಕಟ್ಟುವಂತಹ ವ್ಯವಸ್ಥೆಯನ್ನು ಜಾರಿಗೆ ಮಾಡುತ್ತೇವೆ ಎನ್ನುವುದನ್ನು ಈ ಸರ್ಕಾರ ಸ್ಪಷ್ಟ ಮಾಡಬೇಕಾಗುತ್ತದೆ. ಎರಡನೆಯದಾಗಿ ಒಬ್ಬ ರೈತ ತನ್ನ ಪಂಪ್‌ಸೆಟ್ಟಿಗೆ ವಿದ್ಯುಚ್ಛಕ್ತಿ ಬೇಕೆಂದು ಹೇಳಿ ಬ್ಯಾಂಕಿನಲ್ಲಿ ಸಾಲ ಪಡೆಯುವುದಕ್ಕೆ ಮೊದಲು ಅನುಮತಿ ಪತ್ರವನ್ನು ಪಡೆಯಬೇಕು. ಎರಡನೆಯದಾಗಿ ನೀರು ಬರುತ್ತದೆ ಎಂದು ಹೇಳಿ ಅದಕ್ಕೆ ಫೀಸಿಬಿಲಿಟಿ ಸರ್ಟಿಫಿಕೇಟ್ ಪಡೆಯಬೇಕು. ಅನಂತರ ಬೋರ್ ಹಾಕಿಸಬೇಕು. ಬೋರ್ ಹಾಕಿಸಿ ನೀರು ಬರುತ್ತದೆ ಎಂದಾದ ಮೇಲೆ ಕೆಇಬಿನಲ್ಲಿ ರಿಜಿಸ್ಟರ್ ಆಗುತ್ತದೆ. ಆಗ ಬ್ಯಾಂಕಿನಲ್ಲಿ ಸಾಲ ಮಾಡುತ್ತಾನೆ. ಪಂಪ್‌ಸೆಟ್ಟಿಗೋಸ್ಕರ 50 ಸಾವಿರ, 60 ಸಾವಿರ, 70 ಸಾವಿರ ರೂಪಾಯಿ ಸಾಲ ಮಾಡಿದಂತಹ ರೈತ ಐದು ವರ್ಷ ಆರು ವರ್ಷ, ಏಳು ವರ್ಷವಾದರೂ ವಿದ್ಯುಚ್ಛಕ್ತಿ ಪಡೆಯದೇ ಇರತಕ್ಕಂಥ ಉದಾಹರಣೆಗಳು ನಮ್ಮಲ್ಲಿ ಇವೆ. ಒಬ್ಬ ಪಂಪುಸೆಟ್ಟನ್ನು ಮಾಡಿಕೊಳ್ಳಬೇಕೆಂದು ಬೋರನ್ನು ಕೊರೆಸಿದಂತಹ ರೈತನಿಗೆ ನಾವು 6 ತಿಂಗಳೊಳಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ

ಅಥವಾ ವರ್ಷದೊಳಗೆ ಕೊಡುತ್ತೇವೆಂದು ಒಂದು ಸ್ಪಷ್ಟವಾದಂತಹ, ನಿಗದಿತ ಸಮಯವನ್ನು ಸೂಚಿಸಿ ಈ ಸರ್ಕಾರ ಘೋಷಣೆ ಮಾಡಬೇಕು. ರೈತ ಸಾಲಗಾರನಾಗಿ ನೇಣು ಹಾಕಿಕೊಳ್ಳುವಂತಹ, ವಿಷ ಕುಡಿಯುವಂತಹ ವಾತಾವರಣ ಏನು ನಿರ್ಮಾಣ ಆಗಿದೆ. ಆ ವ್ಯವಸ್ಥೆಯನ್ನು ಸರ್ಕಾರದವರು ಸರಿಪಡಿಸಿಕೊಡುತ್ತೇವೆ. ಒಂದು ನಿಗದಿತ ಸಮಯವನ್ನು ಸ್ಪಷ್ಟವಾಗಿ ನಾವು ಕಾಣಿಸುತ್ತೇವೆ. ಕೆಇ ಬಿಗೆ ಆ ರೀತಿ ತಿಳುವಳಿಕೆ ಕೊಡುತ್ತೇವೆ ಎನ್ನುವಂತಹದನ್ನು ಸ್ಪಷ್ಟ ಮಾಡಿ ಈ ಸಮಯದಲ್ಲಿ ತಿಳಿಸಬೇಕು ಎಂದು ತಮ್ಮ ಮೂಲಕ ನಾನು ರಾಜ್ಯ ಸರ್ಕಾರವನ್ನು ಕೇಳಿಕೊಳ್ಳಲು ಇಷ್ಟಪಡುತ್ತೇನೆ.

+ ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು):- ಸನ್ಮಾನ್ಯ ಅಧ್ಯಕ್ಷರೆ, ಈಗ ರಾಜ್ಯದಲ್ಲಿ ವಿದ್ಯುತ್ತಿನ ಸಮಸ್ಯೆ ಏನು ಸೃಷ್ಟಿ ಆಗಿದೆ, ಕೊರತೆ ಆಗಿದೆ, ಅದರಿಂದ ರೈತರಿಗೆ ಮತ್ತು ಗ್ರಾಹಕರಿಗೆ ಬಹಳ ತೊಂದರೆ ಆಗಿದೆ ಎನ್ನತಕ್ಕ ವಿಷಯದ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ. ಸರ್ಕಾರ ಮಾಯಾ ಮಂತ್ರ ಮಾಡಿ ಈ ಸಮಸ್ಯೆಯನ್ನು ಬಗೆಹರಿಸುತ್ತದೆ ಎನ್ನತಕ್ಕ ಅಭಿಪ್ರಾಯ ಕೂಡ ನಮ್ಮದಲ್ಲ. ಆದರೆ ಸರ್ಕಾರ ವಿದ್ಯುತ್ ಉತ್ಪಾದನೆಗೆ ಮತ್ತು ನಿರ್ವಹಣೆಗೆ ಸರಿಯಾಗಿ ಗಮನವನ್ನು ಕೊಡುತ್ತಾ ಇಲ್ಲ ಎನ್ನತಕ್ಕದ್ದು ನಮ್ಮ ಅಭಿಪ್ರಾಯ. ಈಗ ಒಂದನೆಯದಾಗಿ ರಾಯಚೂರು ಥರ್ಮಲ್ ಕೇಂದ್ರದಲ್ಲಿ ಸುಮಾರು 14 ಮಿಲಿಯನ್ ಯೂನಿಟ್ ವಿದ್ಯುತ್ತನ್ನು ಉತ್ಪಾದನೆ ಮಾಡುತ್ತಿದ್ದಾರೆ. ಅಲ್ಲಿ ಇನ್ನೂ ಕೂಡ ನಾಲ್ಕು ಮಿಲಿಯನ್ ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದಿಸುವುದಕ್ಕೆ ಆ ಜನರೇಶನ್ ಸ್ಟೇಶನ್‌ಗೆ ಸಾಮರ್ಥವಿದ್ದರೂ ಅಲ್ಲಿಗೆ ಕಲ್ಲಿದ್ದಲನ್ನು ಕೊಂಡುಕೊಳ್ಳುವುದಕ್ಕೆ ಕೆ.ಪಿ.ಸಿ.ಯವರಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಹಣ ಕೊಟ್ಟಿಲ್ಲವೆನ್ನುವ ಕಾರಣಕ್ಕೆ ವಿದ್ಯುತ್ ಉತ್ಪಾದಿಸುತ್ತಿಲ್ಲ. ಸರ್ಕಾರ ಏಕೆ ಇದಕ್ಕೆ ಗಮನ ಕೊಡುತ್ತಿಲ್ಲವೆಂಬುದನ್ನು ದಯಮಾಡಿ ಹೇಳಬೇಕು. ಪಂಪುಸೆಟ್ಟುಗಳನ್ನು ಇಟ್ಟುಕೊಂಡಿರುವ ರೈತರು ಬೇಸಿಗೆ ಕಾಲದಲ್ಲಿ ಬೆಳೆ ಬೆಳೆಯಬಾರದೆಂಬ ಮಾತನ್ನು ಸರ್ಕಾರದವರು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಮುಖಾಂತರ ಹೇಳಿಸಿದ್ದಾರೆ. ರೈತರು ಬೇಸಿಗೆಯಲ್ಲಿ ವಿದ್ಯುತ್ ಪಂಪುಸೆಟ್ಟುಗಳನ್ನು ಉಪಯೋಗಿಸಿ ಸುಮಾರು ಹತ್ತು ಲಕ್ಷಗಳಷ್ಟು ಎಕರೆ ಪ್ರದೇಶದಲ್ಲಿ ತರಕಾರಿ, ಹಣ್ಣು-ಹಂಪಲು ಇತ್ಯಾದಿ ಬೆಳೆ ಬೆಳೆಯುತ್ತಾರೆ. ನಮ್ಮ ರಾಜ್ಯದ ರೈತರುಗಳು ಹತ್ತು ಲಕ್ಷಗಳಷ್ಟು ಎಕರೆಗಳಲ್ಲಿ ಏನು ಉತ್ಪಾದಿಸುತ್ತಿದ್ದರು ಅದು ಈಗ ಸರ್ಕಾರ ಹಾಕಿರುವ ನಿರ್ಬಂಧದಿಂದ ಆಗುತ್ತಿಲ್ಲ. ಒಂದು ಎಕರೆಗೆ ಐದು ಸಾವಿರ ರೂಪಾಯಿಗಳಂತೆ ಸುಮಾರು ಐದು ನೂರು ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತಿದೆ. ಇದಕ್ಕೆ ಯಾರು ಹೊಣೆ ಎಂಬುದಕ್ಕೆ ಸರ್ಕಾರ ಉತ್ತರಿಸಬೇಕೆಂದು ಈ ಸಂದರ್ಭದಲ್ಲಿ ತಮಗೆ ತಿಳಿಸಲಿಚ್ಛಿಸುತ್ತೇನೆ. ಈ ಸರ್ಕಾರ ಅಧಿಕಾರಕ್ಕೆ ಬರುವಂಥ ಸಂದರ್ಭದಲ್ಲಿ ಚುನಾವಣಾ ಪ್ರಣಾಳಿಕೆಯಲ್ಲಿ ವಿದ್ಯುಚ್ಛಕ್ತಿ ಬಗ್ಗೆ ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದ್ದರು. ವಿದ್ಯುತ್ತಿಗೆ ನ್ಯಾಯೋಚಿತವಾದ ಶುಲ್ಕವನ್ನು ಗೊತ್ತು ಪಡಿಸಿ ವಿದ್ಯುತ್ ಸೌಕರ್ಯ ಮಾತ್ರ ನಿರಂತರವಾಗಿ ಸರಬರಾಜಾಗುವಂತೆ ನೋಡಿಕೊಳ್ಳುವ ಆಶ್ವಾಸನೆ ನೀಡುತ್ತೇವೆ, ದಿನವೊಂದಕ್ಕೆ ಕನಿಷ್ಠ ಹತ್ತು ಗಂಟೆಗಳ ಕಾಲ ತಡೆರಹಿತವಾಗಿ ವಿದ್ಯುಚ್ಛಕ್ತಿ ಪೂರೈಸುತ್ತೇವೆಂಬ ಸ್ಪಷ್ಟ ಭರವಸೆ ಕೊಡುತ್ತೇವೆ ಎಂದು ತಿಳಿಸಿದ್ದರು. ಆದರೆ, ಅಧಿಕಾರಕ್ಕೆ ಬಂದ ನಂತರ ಅಂದಿನ ಮುಖ್ಯಮಂತ್ರಿಗಳು ಮುಂದಿನ ಒಂದು ವರ್ಷದಲ್ಲಿ ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ರೈತರಿಗೂ ಕೃಷಿ ಉದ್ದೇಶಕ್ಕಾಗಿ ಮತ್ತು ಸಣ್ಣ ಕೈಗಾರಿಕೆಗಳಿಗೆ ದಿನದ 24 ಗಂಟೆಗಳ ಕಾಲ ಸತತವಾಗಿ ವಿದ್ಯುತ್

ಸೌಕರ್ಯ ಪೂರೈಸದೆ ಹೋದರೆ ಇದೇ ವಿಚಾರದ ಮೇಲೆ ನಮ್ಮ ಸರ್ಕಾರವನ್ನು ಮನೆಗೆ ಕಳುಹಿಸಬಹುದು ಎಂದು ಹೇಳಿದ್ದರು. ಈ ಮಾತನ್ನು ಒಂದು ವರ್ಷದ ಹಿಂದೆ ಹೇಳಿದ್ದರು. ಅದೇ ಕೆಲಸವನ್ನು ಈಗ ರಾಮನಗರದ ಜನತೆ ಮಾಡಿ ತೋರಿಸಿದ್ದಾರೆ. ಯಾವ ಸರ್ಕಾರ ನುಡಿದಂತೆ ನಡೆಯುವುದಿಲ್ಲವೋ ಆಗ ಜನರು ಅದನ್ನು ಮಾಡಿ ತೋರಿಸುತ್ತಾರೆನ್ನುವ ನಿದರ್ಶನ ರಾಮನಗರದಿಂದ ಪ್ರಾರಂಭವಾಗಿದೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕಾರ್ಯನಿರ್ವಹಣೆ ಏನಿದೆ ಅಥವಾ ವಿದ್ಯುತ್ ಉತ್ಪಾದನೆಗೆ ಚಾರ್ಜ್ ಕೇಂದ್ರಗಳನ್ನು ಇನ್ನೊಂದು ವರ್ಷದಲ್ಲಿ ಪ್ರಾರಂಭಿಸುವುದಾಗಿ ಇದೇ ಸದನದಲ್ಲಿ ಒಂದು ವರ್ಷದ ಹಿಂದೆ ಅಂದಿನ ಮುಖ್ಯಮಂತ್ರಿಗಳು ಹೇಳಿದ್ದು ನಿಮಗೆ ನೆನಪಿರಬಹುದು. ಆದರೆ, ಇವೊತ್ತಿನವರೆವಿಗೂ ಕೂಡ ವಿದ್ಯುಚ್ಛಕ್ತಿ ಉತ್ಪಾದಿಸುವ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಮಾನ್ಯ ಸಭಾಧ್ಯಕ್ಷರೆ, ನಾನು ಒಂದು ಮಾತನ್ನು ಹೇಳಿದರೆ ತಾವು ತಪ್ಪು ತಿಳಿದುಕೊಳ್ಳಬಾರದು. ಈ ಸರ್ಕಾರದ ದುರಾಡಳಿತ ದಿನಗಳು ಸೂರ್ಯಾಸ್ತಮಾನದ ಹಂತಕ್ಕೆ ಬರುತ್ತಿದೆ. ಅದೇ ರಾಮನಗರದ ಉಪ ಚುನಾವಣೆಯ ಸಂಕೇತವೆಂದು ತಾವು ಯಾರೂ ಕೂಡ ಮರೆಯಬಾರದು. ರೈತರ, ಮಣ್ಣಿನ ಹೆಸರಿನಲ್ಲಿ ಅಧಿಕಾರಕ್ಕೆ ಬಂದು ಇವೊತ್ತು ರೈತರಿಗೆ ಮಣ್ಣು ತಿನ್ನಿಸತಕ್ಕಂಥ ಕೆಲಸ ಮಾಡುತ್ತಿದ್ದೀರಿ. ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ ನಾಲ್ಕು ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವಿದ್ದರೂ ಅದರ ಕಡೆ ಏಕೆ ತಾವು ಗಮನ ಕೊಟ್ಟಿಲ್ಲ? ಹಣವನ್ನು ಏಕೆ ಕೊಟ್ಟಿಲ್ಲ? ಮಾಯ-ಮಂತ್ರ ಮಾಡಿ ವಿದ್ಯುತ್ ಉತ್ಪಾದಿಸುವುದಕ್ಕಾಗುವುದಿಲ್ಲ. ವಿದ್ಯುತ್ ಉತ್ಪಾದಿಸುವುದಕ್ಕೆ ಸಾಮರ್ಥ್ಯ ಇದ್ದರೂ ಕೂಡ ಅದನ್ನು ತಾವು ಉಪಯೋಗಿಸಿಕೊಳ್ಳದಿರತಕ್ಕಂಥಾದ್ದು ನಿಜಕ್ಕೂ ದುರ್ದೈವ. ಇವೊತ್ತು ರಾಜ್ಯದಲ್ಲಿ ಕಳ್ಳತನದಿಂದ ಮತ್ತು ಟ್ರಾನ್ಸ್‌ಮಿಶನ್ ಲಾಸ್ ಶೇಕಡಾ 30 ರಷ್ಟು ಆಗುತ್ತಿದೆ. ಮೂರನೇ ಒಂದು ಭಾಗ ಕಳ್ಳತನ ಮತ್ತು ಸಾಗಾಣಿಕೆ ನಷ್ಟದಿಂದಾಗುತ್ತಿದೆ. ಅದನ್ನು ಕೂಡ ತಪ್ಪಿಸಿ ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಲು ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಆ ದಕ್ಕಿನಲ್ಲಿ ಸರ್ಕಾರ ವಿಫಲವಾಗಿದ್ದು, ಅಧಿಕಾರದಲ್ಲಿ ಮುಂದುವರಿಯಲು ಅದಕ್ಕೆ ಅರ್ಹತೆಯಿಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುತ್ತಾ ಸರ್ಕಾರ ಈಗಲೂ ಕೂಡ ಥರ್ಮಲ್ ಕೇಂದ್ರದಲ್ಲಿ ನಾಲ್ಕು ಮಿಲಿಯನ್ ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವಿರುವುದರಿಂದ ತತ್‌ಕ್ಷಣ ಉತ್ಪಾದಿಸುವ ಕಡೆ ಗಮನ ಕೊಡಬೇಕು.

ಅಧ್ಯಕ್ಷರು:- ನಾನು ನಿಮ್ಮಿಂದ ಏನು ನಿರೀಕ್ಷಿಸುತ್ತೇನೆಂದರೆ, ನಾನು ಬೇರೆ ಸಂದರ್ಭಗಳಲ್ಲಿ ನಿಮ್ಮ ಭಾಷಣ ಆಲಿಸಿದ್ದೇನೆ. ನೀವು ಕೃಷಿ ಪದವೀಧರರಾಗಿದ್ದು ವಿದ್ಯುಚ್ಛಕ್ತಿ ವಿಚಾರವಾಗಿ ನೀವು ಈಗ ಮಾತನಾಡುವಾಗ ನಾವು ಏನು ಮಾಡಿದರೆ ಈಗ ಉದ್ಭವಿಸಿರುವ ಸಮಸ್ಯೆ ಸರಿಪಡಿಸುವುದಕ್ಕಾಗುತ್ತದೆ ಎಂಬುದರ ಬಗ್ಗೆ ಸಲಹೆ ಕೊಡಬೇಕೇ ವಿನಹ ರಾಜಕೀಯವಾಗಿ ಬಹಳಷ್ಟು ಹೊತ್ತು ಮಾತನಾಡಿದರೆ ವಿದ್ಯುಚ್ಛಕ್ತಿ ಪರಿಸ್ಥಿತಿ ಸುಧಾರಿಸುವುದಿಲ್ಲ. ತಾವು ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಸಲ್ಲಿಸುವಾಗ ತಮಗೆ ಅವಕಾಶ ಸಿಗುತ್ತದೆ. This is a matter which concerns all of us. ತಾವು ಸ್ವಲ್ಪ ಹಾಸನ ಬಿಟ್ಟು ಹೊರಗಡೆ ಬನ್ನಿ.

ಶ್ರೀ ಎ.ಟಿ. ರಾಮಸ್ವಾಮಿ:- ನಾನು ಹಾಸನ ಬಿಟ್ಟೇ ಹೊರಕ್ಕೆ ಬಂದಿದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರು ಹಾಸನ ಬಿಟ್ಟು ರಾಯಚೂರಿನ ಥರ್ಮಲ್ ಪ್ಲಾಂಟ್‌ಗೆ ಹೋಗಿದ್ದರು. ಆದರೆ, ಮತ್ತೆ ಅಲ್ಲಿಗೇ ಬನ್ನಿ ಎಂಬುದು ತಮ್ಮ ಆಸೆಯಾಗಿರುವುದರಿಂದ ಅದು ಬೇಡ.

ಶ್ರೀ ಎ.ಟಿ. ರಾಮಸ್ವಾಮಿ:- ನಾನು ಈಗಾಗಲೇ ಮೊದಲೇ ಹೇಳಿದಂತೆ ರಾಯಚೂರಿನ ಶಾಖೋತ್ಪನ್ನ ಕೇಂದ್ರದಲ್ಲಿ 14 ಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಿದ್ದು ಇನ್ನು ಕೂಡ ನಾಲ್ಕು ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದಿಸಲು ಸಾಮರ್ಥ್ಯವಿದೆ.

ಅಧ್ಯಕ್ಷರು:- ತಾವು ಒಂದು ಪ್ರಶ್ನೆಗೆ ಉತ್ತರ ಹೇಳಿ. ಕಳೆದ ಹತ್ತು ವರ್ಷಗಳಲ್ಲಿ ಯಾವುದೇ ಸರ್ಕಾರ ಅಧಿಕಾರದಲ್ಲಿದ್ದಿರಬಹುದು, ಈ ಅವಧಿಯಲ್ಲಿ ಎಷ್ಟು ಮೆಗಾವ್ಯಾಟ್‌ಗಳಷ್ಟು ಹೆಚ್ಚು ವಿದ್ಯುತ್ ಅನ್ನು ನಾವು ಉತ್ಪಾದಿಸಿದ್ದೇವೆ? ಮತ್ತು ಎಷ್ಟು ಗ್ರಾಹಕರುಗಳನ್ನು ಹೆಚ್ಚಿಸಿದ್ದೇವೆ? ಎಂಬುದನ್ನು ಹೇಳಿ.

ಶ್ರೀ ಎ.ಟಿ. ರಾಮಸ್ವಾಮಿ:- ಆವೊತ್ತು ಇಷ್ಟೊಂದು ಸಮಸ್ಯೆ ಉಲ್ಬಣವಾಗಿರಲಿಲ್ಲ. ಇವರು ಪಂಪುಸೆಟ್ಟುಗಳಿಗೆ ಆರು ಗಂಟೆಗಳ ಕಾಲ ನಿರಂತರವಾಗಿ ವಿದ್ಯುತ್ ಸೌಕರ್ಯ ಕೊಡುತ್ತೇವೆಂದು ಹೇಳಿದರು. ಇದನ್ನು ಅವರೇ ಹೇಳಿರುವುದರಿಂದ, ಆರು ಗಂಟೆಗಳ ಕಾಲ ನಿರಂತರವಾಗಿ ರೈತರಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುತ್ತಿದ್ದಾರೆಯೇ? ಎಂದು ಆತ್ಮಶೋಧನೆ ಮಾಡಿಕೊಂಡು ಹೇಳಲಿ.

ಅಧ್ಯಕ್ಷರು:- ಒಂದು ಕಾಲದಲ್ಲಿ ಈ ರಾಜ್ಯದಲ್ಲಿ ದಿವಂಗತ ದೇವರಾಜ ಅರಸುರವರನ್ನು ಕೆಟ್ಟದಾಗಿ ಬಯ್ದರು. ಇಡೀ ದೇಶದ ಭೂಪಟದಲ್ಲಿ ಅವರ ಅಧಿಕಾರಾವಧಿಯಲ್ಲಿ ಕರ್ನಾಟಕ ರಾಜ್ಯ ಎಲ್ಲಿತ್ತು? Whether it was power production or growth rate ನೋಡಿಕೊಂಡು ಎಲ್ಲಾ ಮಾಹಿತಿಗಳನ್ನು ಕಲೆ ಹಾಕಿಕೊಂಡು ಹೇಳಿ. ಕಳೆದ ಹತ್ತು ವರ್ಷಗಳಲ್ಲಿ ಒಬ್ಬರಿಗಿಂತ ಒಬ್ಬರು ಕಾಂಪಿಟೀಶನ್ ಮೇಲೆ ಪಾಪ್ಯುಲಿಸ್ಟ್ ಮೆಶರ್‌ಗೆ ಹೊರಟು they kept on tempting the people. Nobody bothered about the power production then and all of us are victims today.

ಶ್ರೀ ಎ.ಟಿ. ರಾಮಸ್ವಾಮಿ:- ಆರು ಗಂಟೆಗಳ ಕಾಲ ನಿರಂತರವಾಗಿ ವಿದ್ಯುಚ್ಛಕ್ತಿ ಸೌಕರ್ಯ ಕೊಡುತ್ತೇವೆಂದು ಹೇಳಿದ್ದರೂ ಕೂಡ ಕೊಡುತ್ತಿಲ್ಲ, ವೋಲ್ಟೇಜ್ ಕಡಿಮೆಯಾಗುತ್ತಿದೆ, ಮೋಟಾರುಗಳು ಸುಡುತ್ತಿವೆ. ನಮ್ಮ ರಾಜ್ಯದಲ್ಲಿ ಹತ್ತು ಲಕ್ಷ ಎಕರೆ ಪ್ರದೇಶದಲ್ಲಿ ಏನು ಬೆಳೆ ಬೆಳಯಬೇಕಾಗಿತ್ತು ಅಲ್ಲಿ ಬೆಳೆಯುತ್ತಿಲ್ಲ. ಬೇಸಿಗೆ ಕಾಲದಲ್ಲಿ ಬೆಳೆ ಬೆಳೆಯಬಾರದೆಂದು ಹೇಳಿದ್ದಾರೆ. ಇದರಿಂದ ಸುಮಾರು ಕನಿಷ್ಠ 500 ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತಿರುವುದರಿಂದ ಇದಕ್ಕೆ ಹೊಣೆಗಾರರು ಯಾರು? ವ್ಯವಸ್ಥೆ ಬಗ್ಗೆ ನಾವು ಯಾರನ್ನು ಪ್ರಶ್ನಿಸಬೇಕು? ಈ ಪ್ರಶ್ನೆಗೆ ನಾನು ಅತ್ತ ಕಡೆ (ಆಡಳಿತ ಪಕ್ಷ) ಕುಳಿತುಕೊಂಡರೆ ಉತ್ತರ ಹೇಳುತ್ತೇನೆ. ಈಗ ಅವರು ಅಲ್ಲಿ ಕುಳಿತಿರುವುದರಿಂದ ಉತ್ತರಿಸಬೇಕು. ದಯಮಾಡಿ ಲೋಪ-ದೋಷಗಳನ್ನು ಸರಿಪಡಿಸಿ ವಿದ್ಯುತ್

ಅಭಾವದಿಂದ ಏನು ತೊಂದರೆಯುಂಟಾಗಿದೆ ಅದನ್ನು ನೀಗಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೋರುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಸಭಾಧ್ಯಕ್ಷರೆ, ನಾನು ಈ ವಿಷಯವನ್ನು ಪುನರಾವರ್ತನೆ ಮಾಡುವುದಿಲ್ಲ. ಸರ್ಕಾರಕ್ಕೆ ಈ ವಿದ್ಯುತ್ ಉತ್ಪಾದನೆ ಹಂತದಲ್ಲಿ ಏನೇನು ಸಮಸ್ಯೆಗಳಿವೆ ಎನ್ನುವ ಬಗ್ಗೆ ನಮಗೆ ಜ್ಞಾನವಿದೆ, ಅದೇ ರೀತಿ ಕಡಿಮೆಯಿರುವ ವಿದ್ಯುತ್ತಿನಲ್ಲಿ ಹೇಗೆ ಸರಬರಾಜು ಮಾಡಬೇಕೆನ್ನುವ ಬಗ್ಗೆ ಇರುವ ತೊಂದರೆಗಳ ಕುರಿತು ನಮಗೆ ಗೊತ್ತಿದೆ. ಆದರೆ, ಆ ನೆಪದಲ್ಲಿ ದಿನಾಂಕ 2-1-97ರಲ್ಲಿ ಹೊರಡಿಸಿರತಕ್ಕ ಕ್ರೂರ ಆದೇಶವೇನಿದೆ, ಇದನ್ನು ನಾವು ತೀವ್ರವಾಗಿ ವಿರೋಧಿಸುತ್ತೇವೆ. ಇವೊತ್ತು ಏನಾಗಿದೆಯೆಂದರೆ, ಅನಧಿಕೃತ ನೀರಾವರಿ ಪಂಪುಸೆಟ್ಟುಗಳನ್ನು ಸಕ್ರಮಗೊಳಿಸುವ ಬಗ್ಗೆ ದಿನಾಂಕ 2-1-97ರಲ್ಲಿ ಆದೇಶ ಹೊರಡಿಸಿದ್ದಾರೆ. ನನ್ನ ಪ್ರಕಾರ ಇದು ಅನಧಿಕೃತ ಅಲ್ಲವೇ ಅಲ್ಲ. ಇವೊತ್ತು ಸಾವಿರಾರು ರೈತರು ಒಂದೊಂದು ತಾಲ್ಲೂಕಿನಲ್ಲೂ ಪಂಪು ಸೆಟ್ಟುಗಳಿಗೆ ಸಂಪರ್ಕ ತೆಗೆದುಕೊಂಡಿದ್ದಾರೆ, ಅವರಿಗೆ ಎಸ್ಟಿಮೇಟ್ ಸ್ಯಾಂಕ್ಷನ್ ಆಗಿದೆ ಮತ್ತು ವರ್ಕ್ ಆರ್ಡರ್ ಸಹ ಇಶ್ಯೂ ಮಾಡಿದ್ದಾರೆ ಜೊತೆಗೆ ಮೆಟಿರಿಯಲ್ಸ್ ಸಪ್ಲೈ ಮಾಡಿ ಸರ್ವೀಸ್ ಕೊಟ್ಟಿದ್ದರೂ ಇದನ್ನು ಅನಧಿಕೃತವೆಂದು ಹೇಳುವುದು ಸರಿಯಲ್ಲವೆನ್ನುವುದು ನನ್ನ ವಾದವಾಗಿದೆ. ಎರಡನೆಯದಾಗಿ, ರೈತನಿಗೆ ಸರ್ವೀಸ್ ಕೊಟ್ಟಿರುವುದನ್ನು ಆತ ಉಪಯೋಗಿಸಿ ಕೊಳ್ಳುತ್ತಿದ್ದಾನೆ. ಏನೂ ಗೊತ್ತಿಲ್ಲದೆ ಇರತಕ್ಕಂಥವನಿಗೆ ಅನಧಿಕೃತ ಎನ್ನುವ ಹೆಸರಿನಲ್ಲಿ ಸುಮಾರು 13,000 ರೂಪಾಯಿಗಳನ್ನು ನೀವು ದಂಡದ ರೂಪದಲ್ಲಿ ಕೊಡಬೇಕೆಂಬ ಆದೇಶವೇನಿದೆ, ಅದು ಸರಿಯಲ್ಲ. ಮೂರನೆಯದಾಗಿ, ವಿದ್ಯುಚ್ಛಕ್ತಿ ಸರಬರಾಜು ನಿಯಮ 1978ರ ನಿಬಂಧನೆ 44(7)ರ ಪ್ರಕಾರ ಪ್ರತಿ ಅನಧಿಕೃತ ನೀರಾವರಿ ಪಂಪುಸೆಟ್ಟುಗಳಿಗೆ ಪ್ರತಿ ಅಶ್ವ ಶಕ್ತಿಗೆ 300 ರೂಪಾಯಿಗಳ ದಂಡ ಕಟ್ಟಿಸಿಕೊಳ್ಳುವುದು ಎನ್ನುವ ಪದವೇನಿದೆ ಅದು ಸರಿಯಲ್ಲ. ಇವೊತ್ತು ದಂಡವೆಂದರೆ ಆತ ಏನೋ ಘೋರವಾದ ಅಪರಾಧ ಮಾಡಿರಬೇಕು. ಆತ ಏನು ಅಪರಾಧ ಮಾಡಿದ್ದಾನೆ? ಸುಮಾರು 40,000 ರೂಪಾಯಿ 50,000 ರೂಪಾಯಿಗಳನ್ನು ಖರ್ಚು ಮಾಡಿ ಒಂದು ಬೋರ್‌ವೆಲ್ ತೆಗೆಸಿ ನನಗೆ ಸರ್ವೀಸ್ ಕೊಡಿ ಎಂದಾಗ ಇಂಜನಿಯರ್, ಗುತ್ತಿಗೆದಾರರು ಸೇರಿ ಆತನಿಗೆ ಎಸ್ಟಿಮೇಟ್ ಸ್ಯಾಂಕ್ಷನ್ ಮಾಡಿ ಮೆಟಿರಿಯಲ್ಸ್ ಕೊಟ್ಟು ಸರ್ವೀಸ್ ಕೊಟ್ಟರೆ ಪುನಃ ನೀವು ದಂಡ ಕೊಡಬೇಕು ಅದು ಅಪರಾಧವೆಂದು ನೀವು ತೀರ್ಮಾನ ಮಾಡುವುದಾದರೆ ಇದು ಬಹಳ ತಪ್ಪಾಗುತ್ತದೆ. ಇನ್ನೊಂದು ಮಾತನ್ನು ಹೇಳುತ್ತಾ ಅನಧಿಕೃತ ನೀರಾವರಿ ಪಂಪುಸೆಟ್ಟುಗಳನ್ನು ಸಕ್ರಮಗೊಳಿಸಲು ನೀಡಲಾಗಿರುವ ಸೌಲಭ್ಯವನ್ನು ನಿಗದಿತ ಅವಧಿಯೊಳಗೆ ಬಳಸಿಕೊಳ್ಳಲು ವಿಫಲರಾಗುವ ಮಾಲೀಕರ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಿ ಮಂಡಳಿಯ ನಿಯಮಾನುಸಾರ ಅವರ ವಿರುದ್ಧ ನ್ಯಾಯಾಂಗ ಕಟ್ಟಳೆಯನ್ನು ಹೂಡಲಾಗುವುದೆಂದು ಹೇಳಿದ್ದಾರೆ. ಈಗಾಗಲೇ ರೈತ ಸಂಕಷ್ಟದ ಸಂಕೋಲೆಯಲ್ಲಿ ಸಿಲುಕಿ ನರಳಾಡುತ್ತಿದ್ದಾನೆ. ಪುನಃ ಇಂಥ ಕ್ರೂರವಾದಂಥ, ಘೋರವಾದಂಥ ಆದೇಶವನ್ನು ಹೊರಡಿಸಿ ರೈತರು ಮೇಲಕ್ಕೇ ಬಾರದಂತೆ ನೋಡಿಕೊಳ್ಳತಕ್ಕ ಕೆಲಸವನ್ನು ಕೆ.ಇ.ಬಿ. ಯವರು ಮಾಡುವುದು ಬೇಡ. ಸರ್ಕಾರ ಇದರ ಬಗ್ಗೆ ತೀವ್ರವಾದ ಗಮನವನ್ನು ಹರಿಸಬೇಕು. ಈ ಆದೇಶವೇನಿದೆ ಅದನ್ನು ವಾಪಸ್ ಪಡೆದುಕೊಳ್ಳಬೇಕು. ಅದರ ಜೊತೆಗೆ, ಇದೇ ನೆಪದಲ್ಲಿ

ನೂರಾರು ಕ್ರಿಮಿನಲ್ ಕೇಸುಗಳನ್ನು ರೈತರ ಮೇಲೆ ಹಾಕಿದ್ದಾರೆ. ವಿದ್ಯುತ್‌ನ್ನು ಕಳವು ಮಾಡಿದ್ದಾರೆಂದು ರೈತರ ಮೇಲೆ ಕೇಸನ್ನು ಹಾಕಿ ಜೈಲಿಗೆ ಕಳಿಸಿದ್ದಾರೆ. ಸರ್ವಿಸಸ್ ಲೀಗಲೈಸ್ ಆಗಿ ಆಗಿದ್ದರೂ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಗುತ್ತಿಗೆದಾರರನ್ನು ಕೈಬಿಟ್ಟು ರೈತರ ಮೇಲೆ ಕ್ರಿಮಿನಲ್ ಕೇಸನ್ನು ಹಾಕುತ್ತಾರೆ. ದಯವಿಾಡಿ, ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಯಾವ ತಪ್ಪನ್ನೂ ಮಾಡದಿರತಕ್ಕ ರೈತರ ಮೇಲೆ ವಿದ್ಯುಚ್ಛಕ್ತಿ ಕಳ್ಳತನ ಮಾಡದಿರುವ ರೈತರ ಮೇಲೆ ಕ್ರಿಮಿನಲ್ ಕೇಸ್ ಹಾಕತಕ್ಕದ್ದು ತಪ್ಪು. ಈಗಾಗಲೇ ರೈತರ ಮೇಲೆ ಹಾಕಿರುವ ಕ್ರಿಮಿನಲ್ ಕೇಸುಗಳನ್ನು ಈ ಕೂಡಲೇ ಸರ್ಕಾರ ವಾಪಸ್ ತೆಗೆದುಕೊಳ್ಳಬೇಕು. ರೈತರ ವಿರುದ್ಧವಿರತಕ್ಕ ಆದೇಶ, ಬಳಕೇದಾರರು ಠೇವಣಿ ಕೊಡತಕ್ಕ ಆದೇಶ, ಹೀಗೆ ಸಾರ್ವಜನಿಕರ ಮೇಲೆ ಹೊರಿಸಿರತಕ್ಕ ಹೊರೆಯ ಆದೇಶಗಳನ್ನು ದಯಮಾಡಿ ಸರ್ಕಾರ ವಾಪಸ್ ತೆಗೆದುಕೊಳ್ಳಬೇಕು. ಒಂದು ವೇಳೆ ವಾಪಸ್ ತೆಗೆದುಕೊಳ್ಳದಿದ್ದರೆ, ರೈತರ ಮತ್ತು ಸಾರ್ವಜನಿಕರ ಶಾಪ ಸರ್ಕಾರಕ್ಕೆ ತಟ್ಟುತ್ತದೆ. ನಾವೂ ಆ ಆದೇಶವನ್ನು ವಾಪಸ್ ತೆಗೆದುಕೊಳ್ಳಲು ಹೋರಾಟ ಮಾಡಬೇಕಾಗುತ್ತದೆಂದು ಹೇಳಿ. ನನಗೆ ಇದರ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ವಿದ್ಯುತ್‌ನ ಅಭಾವ ಒಂದು ಕಡೆಯಾದರೆ, ಇಲ್ಲದಿರುವ ವಿದ್ಯುಚ್ಛಕ್ತಿಗೆ ಜಾಸ್ತಿ ಹಣವನ್ನು ಕಟ್ಟಬೇಕೆಂದು ಸರ್ಕಾರ ಆದೇಶವನ್ನು ಇತ್ತೀಚೆಗೆ ಹೊರಡಿಸಿದೆ. ಮಾರಿಯ ಕಣ್ಣು ಹೋರಿಯ ಮೇಲೆ ಎನ್ನುವಂತೆ ಸರ್ಕಾರ ದೊಡ್ಡ ದೊಡ್ಡ ಉದ್ದಿಮೆಗಳ ಮೆಲೆ ಕೈ ಹಾಕದೆಯೇ, ರೈತರು ಮತ್ತು ಸರ್ವ ವಿದ್ಯುತ್ ಗೃಹಗಳ ಬಳಕೆದಾರರ ಮೇಲೆ ಬಹಳ ದೊಡ್ಡ ಹೊರೆಯನ್ನು ಹೊರಿಸುತ್ತಿದೆ. ತಮ್ಮ ಮೂಲಕ ನಾನು ಸರ್ಕಾರಕ್ಕೆ ಕೇಳುವುದೇನೆಂದರೆ, ಹಣವನ್ನು ಜಾಸ್ತಿ ಕೊಟ್ಟಕೂಡಲೆ ವಿದ್ಯುತ್‌ನ್ನು ಜಾಸ್ತಿ ಕೊಡುತ್ತೀರಾ ಹಣವನ್ನು ಜಾಸ್ತಿ ಕಟ್ಟಬೇಕೆಂದು ಹೇಳುತ್ತೀರಿ, ಆದರೆ ನಿಮ್ಮ ಹತ್ತಿರ ವಿದ್ಯುತ್ ಇಲ್ಲವೆಂದು ಸಹ ಹೇಳುತ್ತೀರಿ. ಹಣವನ್ನು ಕೊಟ್ಟರೂ ಸಿಗದಿರುವ ವಸ್ತುವಿಗೆ ಹಣವನ್ನೇಕೆ ಜಾಸ್ತಿ ಕೇಳಬೇಕು. ಈ ತರ್ಕ ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು:- ಅನಧಿಕೃತವಾಗಿ ವಿದ್ಯುತ್ತ್‌ನ್ನು ಅವರು ಉಪಯೋಗ ಮಾಡುತ್ತಿದ್ದಾರೆ ಅದನ್ನು ಅಧಿಕೃತಗೊಳಿಸುತ್ತಿರತಕ್ಕದ್ದು, ಹೆಚ್ಚು ವಿದ್ಯುತ್‌ನ್ನು ಕೊಡುತ್ತಿರುವುದಲ್ಲ, ಅವರು ಹಣವನ್ನು ಕೊಡದಿದ್ದರೂ ಈಗಾಗಲೇ ವಿದ್ಯುತ್‌ನ್ನು ಬಳಸುತ್ತಿದ್ದಾರಲ್ಲವೇ. ತಾವು ಹಣವನ್ನು ಕೊಟ್ಟರೆ ಹೆಚ್ಚು ವಿದ್ಯುತ್ತ್‌ನ್ನು ಕೊಡುತ್ತಾರೆಯೇ ಎಂದು ಕೇಳಿದ್ದೀರಿ, ಆದರೆ ಅವರು ಈಗ್ಗಾಗಲೇ ವಿದ್ಯುತ್ತ್‌ನ್ನು ಉಪಯೋಗ ಮಾಡುತ್ತಿದ್ದಾರಲ್ಲ? ಆದ್ದರಿಂದ ಅಕ್ರಮವಾಗಿ ಬಳಕೆ ಮಾಡುತ್ತಿದ್ದೀರಿ, ಹಣವನ್ನು ಕಟ್ಟಿ ಎಂದು ಸರ್ಕಾರದವರು ಹೇಳುತ್ತಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ:- ಅಕ್ರಮವಾಗಿ ಬಳಕೆ ಮಾಡುತ್ತಿರುವವರ ಬಗ್ಗೆ ನಾನು ಹೇಳಲೇ ಇಲ್ಲ. ಅಕ್ರಮವಾಗಿ ಬಳಕೆ ಮಾಡುತ್ತಿರುವವರ ಬಗ್ಗೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಈಗಾಗಲೆ ಹೇಳಿದ್ದಾರೆ. ತಾವು ಚರ್ವಿತಚರ್ವಣ ಮಾಡಬಾರದೆಂದು ಹೇಳಿದ್ದೀರಿ ನಾನು ಅಲ್ಲಿಗೆ ಕೈಹಾಕಲು ಹೋಗುವುದಿಲ್ಲ.

ಅಧ್ಯಕ್ಷರು:- ಹೆಚ್ಚಿಗೆ ಹಣವನ್ನು ಕೊಟ್ಟರೆ ವಿದ್ಯುತ್ ಎಲ್ಲಿಂದ ಬರುತ್ತದೆ ಎಂದು ನೀವು ಯಾವುದರ ಬಗ್ಗೆ ಕೇಳಿದ್ದು?

ಶ್ರೀ ಅರಗ ಜ್ಞಾನೇಂದ್ರ:- ವಿದ್ಯುತ್‌ನ ದರವನ್ನು ಜಾಸ್ತಿ ಮಾಡುತ್ತೇವೆಂದಿದ್ದಾರೆ. ಹೊಸ ಎಲೆಕ್ಟ್ರಾನಿಕ್ಸ್ ಮೀಟರ್‌ಗಳನ್ನು ಅಳವಡಿಸಬೇಕೆಂದು ಹೇಳಿದ್ದಾರೆ. ಇದರಿಂದ 120 ಕೋಟಿ ರೂಪಾಯಿಗಳನ್ನು ಬಳಕೆದಾರರಿಂದ ಜಾಸ್ತಿ ವಸೂಲಿ ಮಾಡಿದಂತಾಗುತ್ತದೆ. ಇದರಿಂದ ಎಷ್ಟು ಯೂನಿಟ್ ವಿದ್ಯುತ್ ಜಾಸ್ತಿಯಾಗುತ್ತದೆ ಎಂಬ ಬಗ್ಗೆ ಸರ್ಕಾರ ಎಲ್ಲೂ ಹೇಳಲಿಲ್ಲ. ಈಗ ಆರು ಗಂಟೆಗಳ ಕಾಲ ವಿದ್ಯುತ್ ಪೂರೈಕೆ ಮಾಡುತ್ತೇವೆಂದು ಹೇಳಿದ್ದಾರೆ. ಹೊಸ ಮೀಟರ್‌ಗಳನ್ನು ಅಳವಡಿಸಿದ ಮೇಲೆ ಹೆಚ್ಚಾಗಿ ಎಷ್ಟು ಗಂಟೆಗಳ ಕಾಲ ವಿದ್ಯುತ್‌ನ್ನು ಕೊಡುತ್ತೇವೆ ಎಂದು ಹೇಳಲಿಲ್ಲ. ಯಾವ ರೀತಿ ವಿದ್ಯುತ್‌ನ್ನು ಉಳಿಸಬಹುದು ಎಂಬ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ, ಬೇರೆ ಬೇರೆ ಸೆಮಿನಾರ್‌ಗಳಲ್ಲಿ ತಜ್ಞರುಗಳು ಹೇಳಿದ್ದಾರೆ. ಉದ್ದಿಮೆಗಳ ಯಂತ್ರೋಪಕರಣಗಳನ್ನು ನವೀಕರಣ ಮಾಡುವುದರಿಂದ ವಿದ್ಯುತ್ತ್‌ನ್ನು ಉಳಿಸಬಹುದು, ಹೆಚ್ಚು ವಿದ್ಯುತ್ತ್‌ನ್ನು ಕಳವು ಮಾಡುತ್ತಿರತಕ್ಕ ಉದ್ದಿಮೆದಾರರುಗಳ ಮೇಲೆ ಕ್ರಮ ತೆಗೆದುಕೊಳ್ಳುವುದನ್ನು ಬಿಟ್ಟು ಸರ್ವ ವಿದ್ಯುತ್ ಮನೆಗಳಿಗೆ ಎಲೆಕ್ಟ್ರಾನಿಕ್ ಮೀಟರ್‌ಗಳನ್ನು ಅಳವಡಿಸಿ ಎಂದು ಹೇಳಿದರೆ ಏನಾಗುತ್ತದೆ? ಈ ರೀತಿಯ ಹೊರೆಯನ್ನು ಜನಸಾಮಾನ್ಯರ ಮೇಲೆ ಹಾಕುತ್ತ, ಬಳಕೆದಾರರ ಮೇಲೆ ಒಂದೇ ಸಾರಿ ಗದಾಪ್ರಹಾರ ಮಾಡುತ್ತಿರತಕ್ಕದ್ದು ಸರ್ಕಾರಕ್ಕೆ ಗೌರವತರತಕ್ಕ ಕೆಲಸವಾಗುವುದಿಲ್ಲ. ವಿದ್ಯುತ್ ಉತ್ಪಾದನಾ ವೆಚ್ಚವು ಸಾಕಷ್ಟು ಜಾಸ್ತಿಯಾಗುತ್ತಿದೆ. ಒಂದು ಚಿಕ್ಕ ಉದಾಹರಣೆ ಹೇಳುವುದಾದರೆ, ನನ್ನ ಕ್ಷೇತ್ರ ವಿದ್ಯುತ್ ಉತ್ಪಾದನೆ ಮಾಡಲು ಅನೇಕ ಯೋಜನೆಗಳು ಇರತಕ್ಕ ಕ್ಷೇತ್ರ. ಚಕ್ರ, ವಾರಾಹಿ, ಶರಾವತಿ ಭಾಗದಲ್ಲಿ ನನ್ನ ಕ್ಷೇತ್ರ ಬರುತ್ತದೆ. ಅಲ್ಲಿ ಕೆ.ಪಿ.ಸಿ. ಮಾಡುತ್ತಿರತಕ್ಕ ಅವ್ಯವಹಾರವನ್ನು ನೋಡಿದರೆ ಅವೆಲ್ಲವನ್ನು ಇವತ್ತು ನಮ್ಮ ಬಳಕೆದಾರರ ಮೇಲೆ ಹಾಕುತ್ತಿದ್ದಾರೆ. ಉದಾಹರಣೆಗೆ, ವಿದ್ಯುತ್ ಉತ್ಪಾದನೆ ಮಾಡತಕ್ಕ ಮಾನ್ವಿ ಡ್ಯಾಂ ಇದೆ. ಅದನ್ನು ಸುಂದರಗೊಳಿಸುವುದಕ್ಕಾಗಿ ಆರ್ನ್‌ಮೆಂಟಲ್ ಪ್ಯಾರಫಿಟ್‌ವಾಲ್ ಕಟ್ಟುತ್ತಿದ್ದಾರೆ. ಅದಕ್ಕೆ ಇಪ್ಪತ್ತೈದು ಲಕ್ಷ ರೂಪಾಯಿಗಳ ಅಂದಾಜನ್ನು ಮಾಡಿ ಟೆಂಡರ್ ಕರೆದು, ಅರವತ್ತೆಂಟು ಲಕ್ಷ ರೂಪಾಯಿಗಳಿಗೆ ಒಪ್ಪಿಕೊಂಡರು. ಮೊನ್ನೆ ಪತ್ರಿಕಾ ಹೇಳಿಕೆಯಲ್ಲಿ ನಾನು ಅದರ ವೆಚ್ಚ ಒಂದು ಕೋಟಿಗಿಂತ ಜಾಸ್ತಿಯಾಗುತ್ತಿದೆ ಎಂದು ಹೇಳಿದ್ದೆ. ವಿದ್ಯುತ್ ನಿಗಮದ ಎಂ.ಡಿ.ಯವರು ನನಗೆ ಪತ್ರವನ್ನು ಬರೆದು ಅದು 75 ಲಕ್ಷ ರೂಪಾಯಿಗಳನ್ನು ಮೀರುವುದಿಲ್ಲವೆಂದು ಹೇಳಿದ್ದಾರೆ. 25 ಲಕ್ಷ ರೂಪಾಯಿ ವೆಚ್ಚ ಆಗತಕ್ಕ ಆರ್ನಮೆಂಟಲ್ ವಾಲನ್ನು 75 ಲಕ್ಷ ರೂಪಾಯಿ ಖರ್ಚು ಮಾಡಿ ಕಟ್ಟುತ್ತಿದ್ದಾರೆ. ಅದಕ್ಕೆ ಕಾರಣಗಳನ್ನಾಗಿ ಏನು ಹೇಳುತ್ತಾರೆಂದರೆ, ಡಿಸೈನ್‌ನ್ನು ಬದಲಾವಣೆ ಮಾಡಿಕೊಂಡರಂತೆ, ಕಲ್ಲನ್ನು ತೀರ್ಥಹಳ್ಳಿಯಿಂದ ತರುವುದಕ್ಕೆ ಬದಲಾಗಿ ಕಾರ್ಕಳ ಮತ್ತು ಶಿರಾದಿಂದ ತಂದರಂತೆ, ಇವೆಲ್ಲ ವೆಚ್ಚವನ್ನು ಬಳಕೆದಾರರ ಮೇಲೆ ಹಾಕುತ್ತಿದ್ದಾರೆ. ಕೆ.ಪಿ.ಸಿ.ಗೆ ಜಯರಾಜ್ ಎನ್ನತಕ್ಕ ಧಕ್ಷ ಅಧಿಕಾರಿಯನ್ನು ಎಂ.ಡಿ.ಯನ್ನಾಗಿ ಹಾಕಿದ್ದೀರಿ, ಅವರ ಬಗ್ಗೆ ನಾನು ದೂರುವುದಿಲ್ಲ. ಆದರೆ ಆ ಇಲಾಖೆ ಅವರ ನಿಯಂತ್ರಣದಲ್ಲಿ ಇಲ್ಲ. ನಮ್ಮ ಸಬ್‌ಮರ್ಷನ್ ಏರಿಯಾದಲ್ಲಿ ಡ್ಯಾಂನ್ನು ಕಟ್ಟಿದ್ದರಿಂದ ಮುಳಗಡೆಯಾಗಿದೆ. ಮುಳಗಡೆಯಾದವರಿಗೆ ಪರಿಹಾರ ಮತ್ತು ಪುನರ್ ವಸತಿಯನ್ನು ಇನ್ನೂ ಕೊಟ್ಟಿಲ್ಲ. ಅವರುಗಳ ಶಾಪ

ರಾಜ್ಯ ಸರ್ಕಾರಕ್ಕೆ ತಟ್ಟಿದೆ. ಅನೇಕ ಕುಟುಂಬಗಳು ಸರ್ವನಾಶವಾಗುತ್ತಿದೆ. ನಾವು ಒತ್ತಾಯ ಮಾಡಿದರು ಸಹ ಇದುವರೆಗೆ ಏನು ಆಗಿಲ್ಲ. ಕುಂದಾಪುರದಿಂದ ಶಿವಮೊಗ್ಗಕ್ಕೆ ಬರತಕ್ಕ ರಾಜ್ಯ ಹೈವೇಯನ್ನು ಮುಳುಗಿಸಿದ್ದಾರೆ. ಸಾವಿರಾರು ವಾಹನಗಳು ಪ್ರತಿನಿತ್ಯ ಬರುತ್ತಿದೆ. ಐದು ಕಿಲೋಮೀಟರ್ ರಸ್ತೆಯನ್ನು ಮಾಡಲು ಕೆ.ಪಿ.ಸಿ.ಯವರು ಆರು ವರ್ಷಗಳ ಕಾಲ ಸಮಯ ತೆಗೆದುಕೊಂಡಿದ್ದಾರೆ. ಇನ್ನೂ ಶೇಕಡ ಐವತ್ತು ಭಾಗ ಕೆಲಸ ಮುಗಿದಿಲ್ಲ. ಇದರಿಂದ ನಮಗೆ ಮರ್ಯಾದೆ ಬರುತ್ತದೆಯೇ? ಬೇರೆ ಬೇರೆ ದೇಶಗಳಲ್ಲಿ ಚಂದ್ರಲೋಕಕ್ಕೆ ಹೋಗಿಬರುವಷ್ಟು ಆಧುನಿಕ ತಂತ್ರಜ್ಞಾನವನ್ನು ಹೊಂದಿದ್ದಾರೆ. ಆದರೆ ನಮ್ಮ ಪವರ್ ಕಾರ್ಪೊರೇಷನ್ ಐದು ಕಿಲೋಮೀಟರ್ ರಸ್ತೆ ಮಾಡಲು ಆರು ವರ್ಷ ತೆಗೆದುಕೊಂಡಿದೆ. ಇದರಿಂದ ನಿರ್ಮಾಣ ವೆಚ್ಚ ಎಷ್ಟು ಜಾಸ್ತಿಯಾಗಿದೆ ಎಂಬ ಬಗ್ಗೆ ತಾವು ಆಲೋಚನೆ ಮಾಡಬೇಕು. ಇವತ್ತು ಆ ಇಲಾಖೆ ಯಾರ ನಿಯಂತ್ರಣದಲ್ಲೂ ಇಲ್ಲ. ಚಕ್ರಾ, ಮಾಸ್ತಿಕಟ್ಟೆ, ಬೇರೆ ಬೇರೆ ಯೋಜನಾ ಪ್ರದೇಶದಲ್ಲಿ ಇತ್ತೀಚೆಗೆ ಕೋಟಿಗಟ್ಟಲೆ ಬೆಲೆ ಬಾಳತಕ್ಕ ಹೊಸ ಹೊಸ ಸಾಮುಗ್ರಿಗಳನ್ನು ತರುತ್ತಾರೆ, ಅದನ್ನು ಬೇಕಾಬಿಟ್ಟಿಯಾಗಿ ಹರಾಜು ಹಾಕುತ್ತಾರೆ, ಅದರಿಂದ ಕೆ.ಪಿ.ಸಿ.ಗೆ ನಷ್ಟವಾಗುತ್ತಿದೆ. ಈ ರೀತಿ ಹಣ ಸೋರಿಹೋಗುತ್ತಿದೆ. ನಮಗೆ ಸುಮಾರು ಹನ್ನೊಂದು ಸಾವಿರ ಮೆಗಾವ್ಯಾಟ್ ವಿದ್ಯುತ್‌ನ ಬೇಡಿಕೆ ಇದೆ, ಸುಮಾರು ಮೂರುವರೆ ಸಾವಿರ ಮೆಗಾವ್ಯಾಟ್ ಉತ್ಪಾದನೆ ಇದೆ, ಮಾನ್ಯ ಮುಖ್ಯಮಂತ್ರಿಯವರು ಇಷ್ಟುಂದು ಚರ್ಚೆಯಾದ ತಕ್ಷಣ ವಿದ್ಯುತ್‌ನ್ನು ಉತ್ಪಾದನೆ ಮಾಡಲು ಆಗುತ್ತದೆಯೇ? ನಾನೇನು ಮಂತ್ರ ಮಾಡಲೆ ಎಂದು ಹೇಳುತ್ತಿದ್ದಾರೆ. ಕಳೆದ ಹದಿನೈದು ವರ್ಷಗಳಲ್ಲಿ ದೂರದರ್ಶಿತ್ವ ಇಲ್ಲದೇ ಇರತಕ್ಕ ಕರ್ನಾಟಕ ರಾಜ್ಯವನ್ನಾಳಿರತಕ್ಕ ಈ ಎರಡೂ ಪಕ್ಷಗಳೇ ಕಾರಣ. ಕರ್ನಾಟಕ ರಾಜ್ಯದ ವಿದ್ಯುತ್ ಬಳಕೆದಾರರ ಮೇಲೆ ಗದಾ ಪ್ರಹಾರ ಮಾಡುವುದಕ್ಕೂ ಆ ಎರಡು ಪಕ್ಷಗಳೇ ಕಾರಣ. ಆ ಪಾಪದ ಕೂಸು ಈ ಎರಡೂ ಪಕ್ಷದ್ದು. ಇದನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ಈ ರೀತಿಯಾಗಿ ವಿದ್ಯುತ್ ಬಳಕೆದಾರರ ಜೇಬಿಗೆ ಕತ್ತರಿಯನ್ನು ಹಾಕತಕ್ಕಂಥ ಕೆಲಸವನ್ನು ತಪ್ಪಿಸಬೇಕು. ಯಾವುದೇ ದೃಷ್ಟಿಯಿಂದ ಹೊಸ ಮೀಟರ್‌ಗಳನ್ನು ಅಳವಡಿಕೆ ಮಾಡುವುದಾಗಲಿ, ವಿದ್ಯುಚ್ಛಕ್ತಿಯ ದರವನ್ನು ಹೆಚ್ಚು ಮಾಡುವುದಾಗಲಿ ಆಗಬಾರದು. ತಾವು ಇದನ್ನು ವಾಪಸ್ ತೆಗೆದುಕೊಳ್ಳಬೇಕು. ಜನರ ಸರ್ವೋಚ್ಚ ಅಭಿಪ್ರಾಯವನ್ನು ವ್ಯಕ್ತಮಾಡತಕ್ಕ ಸದನದ ಸಮಿತಿಯನ್ನೇನು ತಾವು ಮಾಡಿದ್ದೀರಿ ಆ ಸಮಿತಿಯು ಏನು ಸಲಹೆಯನ್ನು ಕೊಟ್ಟಿದೆ ಅದರ ಆಧಾರದ ಮೇಲೆ ಮಾತ್ರ ತಾವು ಹೋಗಬೇಕೆಂದು ವಿನಂತಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

5.00 ಪಿಎಂ

+ ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ಅಧ್ಯಕ್ಷರೆ, ನಾನು ನೇರವಾಗಿ ಭಾಷಣ ಮಾಡಲಿಕ್ಕೆ ಹೋಗುವುದಿಲ್ಲ. ಎರಡೇ ಎರಡು ವಿಚಾರಗಳನ್ನು ತಮ್ಮ ಅನುಮತಿ ಪಡೆದು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಈ ಅನ್-ಆಥರೈಸ್ಡ್ ಕನೆಕ್ಷನ್ಸ್‌ಗೆ ರೈತರು ಜವಾಬ್ದಾರರೋ ಅಥವಾ ಇಲಾಖೆಯ ಅಧಿಕಾರಿಗಳು ಜವಾಬ್ದಾರೋ? ಎಂಬ ವಿಚಾರ

ನನಗೆ ಗೊತ್ತಾಗಬೇಕು. ನಾನು ಒಬ್ಬ ರೈತನಾಗಿ 10 ವರ್ಷಗಳಾಗಿವೆ. ಇವತ್ತು ನನ್ನ ಕಾಫಿ ತೋಟದಲ್ಲಿ ಒಂದು ಕೊಳವೆ ಬಾವಿ ತೋಡಿಸಿ ಅದಕ್ಕೆ ವಿದ್ಯುತ್ ಪಂಪ್‌ಸೆಟ್ಟು ಅಳವಡಿಸಿದ್ದೇನೆ. ಇಲಾಖೆಯವರು ಇದನ್ನು ಅನ್-ಆಥರೈಸ್ಡ್ ಎಂದು ಹೇಳುತ್ತಾರೋ ಎಂದು ಕೇಳತಕ್ಕಂಥದ್ದು ನನ್ನ ಪ್ರಶ್ನೆಯಾಗಿದೆ. ಜೊತೆಗೆ ಇಲಾಖೆಗೆ ಕಳುಹಿಸುವಂತಹ ಕಂಬ ಆಗಲೀ, ತಂತಿ ಆಗಲೀ, ಇತರ ಸಾಮಗ್ರಿಗಳಾಗಲೀ ಒದಗಿಸಿ ಕೊಡುವಂತಹವರು ಯಾರು? ಇದೊಂದು ಮೂಲಭೂತವಾದಂತಹ ಪ್ರಶ್ನೆ. ರಾಜ್ಯದಲ್ಲಿ ಇರುವಂತಹ 11 ಲಕ್ಷ ಪಂಪ್‌ಸೆಟ್ಟುಗಳಲ್ಲಿ ಅನ್-ಆಥರೈಸ್ಡ್ ಪಂಪ್‌ಸೆಟ್ಟಗಳು ಎಷ್ಟಿವೆ? ಎಂಬ ಬಗ್ಗೆ ಸರ್ಕಾರದವರು ನಮಗೆ ಮಾಹಿತಿ ನೀಡಿಲ್ಲ. ಅದರ ಬಗ್ಗೆ ನಮಗೆ ಸಂಪೂರ್ಣವಾದ ಮಾಹಿತಿ ಕೊಡಬೇಕಾಗುತ್ತದೆ. ಸರ್ಕಾರ ಹೊರಡಿಸಿರುವ ಆದೇಶ ಪ್ರಕಾರ ನಾನೂ ಸಹ ಅನ್-ಆಥರೈಸ್ಡ್ ಕನೆಕ್ಷನ್ಸ್ ತೆಗೆದುಕೊಂಡವರ ಸಾಲಿಗೆ ಸೇರಿ. ಒಬ್ಬ ಅಪರಾಧಿಯಾಗುವ ಸಾಧ್ಯತೆಗಳಿವೆ. ಆದುದರಿಂದ ಸರ್ಕಾರ ಇದರ ಬಗ್ಗೆ ಒಂದು ಕರೆಕ್ಟಾದ ಸ್ಪಷ್ಟೀಕರಣವನ್ನು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ನಿಮ್ಮ ಮೇಲೆ ಕ್ರಿಮಿನಲ್ ಕೇಸ್ ಹಾಕದಂತೆ ನಾನು ಹೇಳುತ್ತೇನೆ ಬಿಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೇ, ಇಲ್ಲಿ ನನ್ನ ಮೇಲೆ ಕೇಸ್ ಹಾಕಬಹುದು ಎಂಬ ಪ್ರಶ್ನೆಯೊಂದೇ ಅಲ್ಲ. ಇದು ಇಡೀ ರೈತರ ಬಗ್ಗೆ ಚಿಂತನೆ ಮಾಡುವಂತಹ ವಿಚಾರವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ನಾವಿಲ್ಲಿ ಎಷ್ಟು ಹೊತ್ತು ಮಾತನಾಡಿದರೂ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಆಗುವುದಿಲ್ಲವೆಂದು ಆಗಲೇ ಹೇಳಿದರು. ಇದನ್ನು ನಾವೂ ಒಪ್ಪುತ್ತೇವೆ. ಅನೇಕ ಜನ ಸನ್ಮಾನ್ಯ ಸದಸ್ಯರು ಈಗ ಮಾತನಾಡಿದ್ದಾರೆ. ರೈತರಿಗಿಂತ ಉತ್ತಮವಾದ ಸೇವೆ ಮಾಡುವಂತಹ ಇಲಾಖೆಯ ಅಧಿಕಾರಿಗಳಿಗೆ ಪುಕ್ಕಟೆಯಾಗಿ ವಿದ್ಯುತ್ ಕೊಡುವಂಥಾದ್ದರ ಬಗ್ಗೆ ಸರ್ಕಾರ ಏಕೆ ತೀರ್ಮಾನ ಮಾಡುತ್ತಿಲ್ಲ?

ಮಾನ್ಯ ಸದಸ್ಯರು:- ಮಾನ್ಯ ಸಗೀರ್ ಅಹಮದ್‌ರವರೇ, ತಾವು ರೈತರೇ ಅಲ್ಲವೆಂದು ಮಾನ್ಯ ಲಕ್ಷ್ಮಯ್ಯನವರು ಹೇಳುತ್ತಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಅವರಿಗೆ ವಯಸ್ಸಾಗಿದೆ, ರಿಟೈರ್ಡ್ ಆಗುವಂತಹ ವಯಸ್ಸು ಅವರದು. ಅವರು ಏನು ಮಾತನಾಡುತ್ತಾರೋ ಅದು ಅವರಿಗೇ ಅರ್ಥವಾಗುವುದಿಲ್ಲ. ರೆಕಾರ್ಡ್‌ನಲ್ಲಂತೂ ನಾನು ಯಾವತ್ತೂ ಅವರ ಹೇಳಿಕೆ ನೋಡಲಿಕ್ಕೆ ಸಾಧ್ಯವೇ ಆಗಿಲ್ಲ...

ಶ್ರೀ ಎಸ್.ಆರ್. ಲಕ್ಷ್ಮಯ್ಯ:- ... ಇವರು ಹುಚ್ಚೆಳ್ಳು, ಹುರುಳಿ ಕಾಳು, ಅವರೆ, ತೊಗರಿ, ಎಳ್ಳು...

ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೆ, ಹಿಂದಿಯಲ್ಲಿ 'ಅವರೆ' ಎಂದರೆ ಏನು ಅರ್ಥ ಅಂತ ಅವರನ್ನು ಕೇಳಿ.

ಶ್ರೀ ಎಸ್.ಆರ್. ಲಕ್ಷ್ಮಯ್ಯ:- ... ನೀವು ರೈತರೇ? ಹಾಗಾದರೆ ಪ್ರಪಂಚದಲ್ಲಿ ಇರುವವರೆಲ್ಲಾ ರೈತರೇ...

ಶ್ರೀ ಸಿ.ಆರ್. ಸಗೀರ್ ಅಹಮದ್:- ಭೂ ನ್ಯಾಯ ಮಂಡಳಿಯಲ್ಲಿ ನಮ್ಮ ಪಿತ್ರಾರ್ಜಿತ ಸೊತ್ತು ಎಷ್ಟು ಹೊಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇದೆ. ಮಾನ್ಯ ಲಕ್ಷ್ಮಯ್ಯನವರಿಗೆ ಇಲ್ಲ. ಮಾನ್ಯ ಲಕ್ಷ್ಮಯ್ಯನವರು ಶಾಸಕರಾಗುವುದಕ್ಕೆ ಮೊದಲು ಅವರು ಮೇಷ್ಟ್ರು ಆಗಿದ್ದರು. ಮೊನ್ನೆ ಮೊನ್ನೆ ಜಮೀನು ಮಾಡಿಕೊಂಡಿದ್ದಾರೆ. ಇಲ್ಲಿಗೆ ಬಂದ ನಂತರವೇ ಅವರು ಜಮೀನು ಮಾಡಿಕೊಂಡು ಜಮೀನ್‌ದಾರರಾಗಿದ್ದಾರೆ. ನಾವು ಹುಟ್ಟಿದಾಗಿನಿಂದ ಜಮೀನ್‌ದಾರರಾಗಿದ್ದೇವೆ. ಅದಕ್ಕೆ ದಾಖಲಾತಿಗಳೇನಾದರೂ ಬೇಕಾದರೆ ಆ ಬಗ್ಗೆ ಸರ್ಕಾರದವರು ಬೇಕಾದರೆ ತನಿಖೆ ನಡೆಸಲಿ. ಅದಕ್ಕೆ ನಾನು ಸಿದ್ಧವಾಗಿದ್ದೇನೆ.

(ಗೊಂದಲ)

ಅಧ್ಯಕ್ಷರು:- ಒಂದೊಂದು ಸಲ ಹೀಗಾಗುವುದು ಒಳ್ಳೆಯದು. ಏಕೆಂದರೆ ಅದರಿಂದ ನಮಗೆ ಸತ್ಯ ಏನು ಎಂಬುದು ಗೊತ್ತಾಗುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಸನ್ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಉಪಸ್ಥಿತರಿರುವುದರಿಂದ ಈವರೆಗೆ ಸುತ್ತೋಲೆಗಳು ಮತ್ತು ಆದೇಶಗಳನ್ನು ಕಳುಹಿಸಿರುವಂತಾದ್ದನ್ನು ಹಿಂತೆಗೆದುಕೊಳ್ಳುವ ಬಗ್ಗೆ ನಾನೂ ಸಹ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು:- ಮಾನ್ಯ ಲಕ್ಷ್ಮಯ್ಯನವರೇ, ನನಗೆ ನಿಮ್ಮ ವಿಚಾರ ಗೊತ್ತು ಬಿಡಿ. ನೀವು ಸರ್ವ ಒಕ್ಕಲಿಗರು ಎಂಬುದು ನನಗೆ ಗೊತ್ತಿದೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ.ಆರ್. ಸಗೀರ್ ಅಹಮದ್:- ನೀವು ಲೋಕಾಯುಕ್ತಕ್ಕೆ ನಿಮ್ಮ ಆಸ್ತಿ-ಪಾಸ್ತಿ ವಿವರ ಕೊಟ್ಟಿದ್ದೀರಲ್ಲಾ, ಅದರಲ್ಲಿ ಎಲ್ಲಾ ವಿವರ ಇರುತ್ತದೆ ಬಿಡಿ. ನೀವು ಮೇಷ್ಟ್ರು ಇದ್ದಾಗ ಎಷ್ಟು ಜಮೀನು ಇತ್ತು? ನಿಮ್ಮ ಮೇಷ್ಟ್ರುಗಿರಿ ಹೋದ ಮೇಲೆ ಎಷ್ಟು ಜಮೀನು ಇತ್ತು? ಎಂಬುದು ಅದರಿಂದ ಗೊತ್ತಾಗುತ್ತದೆ. ಬೆರಕೆ ಸಾಹೇಬರು ಅಂತಾರಲ್ಲ, ಹಾಗೆ ನಾವು ಬೆರಕೆ ರೈತರು ಎಂದು ಒಪ್ಪಿಕೊಳ್ಳುತ್ತೇನೆ ಬಿಡಿ. ನೀವು ಹೇಳಿದಂತೆಯೇ ಆಗಲಿ ಬಿಡಿ.

ಅಧ್ಯಕ್ಷರು:- ನಾವು ಮಂಡ್ಯದವರು ಮತ್ತು ಹಾಸನದವರು ಜಗಳ ಆಡುವುದನ್ನು ಕೇಳಿದ್ದೇವೆ ಮತ್ತು ನೋಡಿದ್ದೇವೆ. ಚಿಕ್ಕಮಗಳೂರು ಮಲೆನಾಡು ಪ್ರದೇಶಕ್ಕೆ ಬರುತ್ತದೆ. ಅಲ್ಲಿನವರು ಬಹಳ ಸೌಮ್ಯ ಸ್ವಭಾವದವರು ಎಂದು ನಾನು ತಿಳಿದುಕೊಂಡಿದ್ದೆ. ನಿಮಗೇನಾಯಿತು? ನೀವು ಅವರ ತರಹವೇ ಆಡುತ್ತೀರಲ್ಲ?

ಶ್ರೀ ಜಿ.ಬಿ. ಶಿವಕುಮಾರ್:- ಮಾನ್ಯ ಅಧ್ಯಕ್ಷರೇ, ಇಲ್ಲಿ ಮಂಡ್ಯ ಜಿಲ್ಲೆ ಹೆಸರು ಏಕೆ ಬಂತು?

ಅಧ್ಯಕ್ಷರು:- ಅಲ್ಲಿ ಜಗಳ ಹೆಚ್ಚು ಇದೆಯಲ್ಲಾ, ಅದಕ್ಕೆ ಮಂಡ್ಯ ಹೆಸರು ಹೇಳಿದೆ.

ಶ್ರೀ ಜಿ.ಬಿ. ಶಿವಕುಮಾರ್:- ಮಂಡ್ಯದ ಜನ ಸಕ್ಕರೆಯಷ್ಟೆ ಸಿಹಿಯಾದ ಜನ.

ಅಧ್ಯಕ್ಷರು:- ಆದರೆ ನೀವು ಮಲೆನಾಡಿನವರ ತರಹ ಕಾಣುತ್ತೀರಿ.

ಶ್ರೀ ಜಿ.ಬಿ. ಶಿವಕುಮಾರ್:- ಮಾನ್ಯ ಅಧ್ಯಕ್ಷರೇ, ನೀವು ಬೇರೆಯವರನ್ನು ಬಿಟ್ಟು ಸಕ್ಕರೆಯಂತಹ ಸಿಹಿಯ ಜನರುಳ್ಳ ಮಂಡ್ಯ ಜಿಲ್ಲೆಯ ಹೆಸರೇಕೆ ಹೇಳುತ್ತೀರಿ?

ಅಧ್ಯಕ್ಷರು:- ಆದರೆ ನಿಮ್ಮ ಜಿಲ್ಲೆಯಲ್ಲಿ ಮಾನ್ಯ ಶಿವರಾಮೇಗೌಡರೂ ಇದ್ದಾರಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಸರ್ಕಾರಕ್ಕೆ ನಾನು ಕೊಡುವಂತಹ ಸಲಹೆ ಏನೆಂದರೆ,

ಅಧ್ಯಕ್ಷರು:- ನೀವಿನ್ನೂ ಸಲಹೆ ಕೊಡುವುದರಲ್ಲೇ ಇದ್ದೀರೋ?

ಶ್ರೀ ಸಿ.ಆರ್. ಸಗೀರ್ ಅಹಮದ್:- ಒಂದೆ ಒಂದು ಮುಖ್ಯವಾದ ಸಲಹೆ ಕೊಡುತ್ತೇನೆ. ಏಕೆಂದರೆ, ಮಾನ್ಯ ಲಕ್ಷ್ಮಯ್ಯನವರು ಮಧ್ಯೆ ಪ್ರವೇಶಿಸಿ ಹಲವಾರು ಸಲಹೆಗಳನ್ನು ಕೊಟ್ಟರಲ್ಲ.

ಅಧ್ಯಕ್ಷರು:- ಮಾನ್ಯ ಮುಖ್ಯಮಂತ್ರಿಗಳು ತಮ್ಮ ಕಡೆ ಗಮನವೇ ಕೊಡುತ್ತಿಲ್ಲ. ನೀವು ಅದರ ಗಾಂಭೀರ್ಯವನ್ನೇ ಕಳೆದು ಬಿಟ್ಟಿರಿ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೇ, ತಾವು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದರೆ ಆಗಬಹುದು. ಇವತ್ತು ರೈತರು ಅವರ ಜಮೀನಿನಲ್ಲಿರುವಂತಹ ಕೊಳವೆ ಬಾವಿಗಳಿಗೆ ಜನರೇಟರ್ ಸೆಟ್‌ಗಳನ್ನು ಅಳವಡಿಸಿರುವಂತಾದ್ದು, ಇಲ್ಲಿ ಕುಳಿತಿರುವಂತಹ ಎಲ್ಲಾ ಶಾಸಕ ಮಿತ್ರರೂ ಇದನ್ನು ಒಪ್ಪುತ್ತಾರೆಂದು ನಾನಂತೂ ಭಾವಿಸುತ್ತೇನೆ. ಎಲ್ಲರೂ ಹಾಕಿದ್ದಾರೆ, ನಾವೂ ಹಾಕಿದ್ದೇವೆ, ಮಾನ್ಯ ಲಕ್ಷ್ಮಯ್ಯನವರೂ ಹಾಕಿದ್ದಾರೆ. ಆದರೆ ಅವರು ಕೂಗಾಡುತ್ತಾರೆ. ತಮ್ಮ ಸರ್ಕಾರ ಹೀಗೆ ತಪ್ಪು ಮಾಡುತ್ತದೆಯಲ್ಲಾ ಎಂದು ಅವರಿಗೆ ನೋವು ಉಂಟಾಗುತ್ತದೆ. ಆದುದರಿಂದ ಅವರು ಕೂಗಾಡುತ್ತಾರೆ. ಜನರೇಟರ್ ಸೆಟ್‌ಗಳನ್ನು ಸರ್ಕಾರ ಸಬ್ಸಿಡೈಸ್ಡ್ ರೇಟಿನಲ್ಲಿ ಕೊಡಿಸುವ ಬಗ್ಗೆ ಏಕೆ ಚಿಂತನೆ ಮಾಡಬಾರದು? ಈ ಬಗ್ಗೆ ದಯಮಾಡಿ ಸರ್ಕಾರ ಉತ್ತರ ಹೇಳಬೇಕು.

ಅಧ್ಯಕ್ಷರು:- ತಾವು ಇಷ್ಟೆಲ್ಲಾ ಮಾತನಾಡುವ ಬದಲು ಇದೊಂದು ಸಲಹೆ ಹೇಳಿದ್ದರೆ ಸಾಕಾಗಿತ್ತು.

ಶ್ರೀ ಸಿ.ಆರ್. ಸಗೀರ್ ಅಹಮದ್:- ಜನರೇಟರ್ ಸೆಟ್‌ಗಳಿಗೆ ಸಹಾಯ ಧನ ಕೊಡುವಂತಹ ಒಂದು ಯೋಜನೆಯನ್ನು ಸರ್ಕಾರ ಹಮ್ಮಿಕೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಅಧ್ಯಕ್ಷರು:- ತಾವು ನೀಡಿರುವ ಸಲಹೆ ಬಹಳ ಒಳ್ಳೆಯದು.

ಶ್ರೀ ಮಂಜುನಾಥ ಸಿ.ಕುನ್ನೂರ್:- ಸನ್ಮಾನ್ಯ ಅಧ್ಯಕ್ಷರೇ, ನಾನು ಒಂದೇ ಒಂದು ನಿಮಿಷ ಮಾತನಾಡಲು ಅವಕಾಶ ಮಾಡಿ ಕೊಡಿ. ಈಗಾಗಲೇ ಮಾನ್ಯ ಸದಸ್ಯರುಗಳು ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ನಾನು ಮಾತನಾಡುವುದಿಲ್ಲ. ನಮ್ಮ ಕ್ಷೇತ್ರದಲ್ಲಿ ವಿದ್ಯುತ್ತಿನ ಅಸಮರ್ಪಕ ಸರಬರಾಜಿನಿಂದಾಗಿ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿರುವುದಿಲ್ಲ. ಜೊತೆಗೆ ಅಲ್ಲಿ ರಾತ್ರಿ ವೇಳೆ 12 ಗಂಟೆಯಿಂದ ಬೆಳಗಿನ 6 ಗಂಟೆಯವರೆಗೆ ಸಂಪೂರ್ಣವಾಗಿ ವಿದ್ಯುಚ್ಛಕ್ತಿ ನಿಲುಗಡೆ ಮಾಡಿದ್ದಾರೆ. ಇದರಿಂದ ಕೆಲವು ಕಡೆಗಳಲ್ಲಿ ರಾತ್ರಿ ವೇಳೆಯಲ್ಲಿ ಕಳ್ಳತನ ಮತ್ತು ದರೋಡೆಗಳಾಗುತ್ತಿವೆ. ಹುಬ್ಬಳ್ಳಿಯಲ್ಲಿ ಎಗ್ಸಿಕ್ಯೂಟಿವ್ ಇಂಜಿನಿಯರ್‌ರವರಿಗೆ ನಾನು ವಿದ್ಯುತ್ ನಿಲುಗಡೆ ಬಗ್ಗೆ ಫೋನ್

ಮಾಡಿ ವಿಚಾರಿಸಿದರೆ ಆ ಬಗ್ಗೆ ನಮಗೆ ಮೇಲಿನಿಂದ ಆದೇಶ ಬಂದಿದೆ ಎಂದು ಹೇಳುತ್ತಾರೆ. ಈ ಬಗ್ಗೆ ಮೇಲಿನಿಂದ ದೇಶಗಳನ್ನು ಹೊರಡಿಸಿದ್ದೀರೋ ಇಲ್ಲವೋ? ಒಂದು ವೇಳೆ ಹೊರಡಿಸಿದ್ದರೆ ಅದನ್ನು ಹಿಂತೆಗೆದುಕೊಳ್ಳಬೇಕು. ರಾತ್ರಿ ವಳೆ ಸಂಪೂರ್ಣವಾಗಿ ವಿದ್ಯುತ್ ಬಂದ್ ಮಾಡತಕ್ಕದ್ದನ್ನು ನಿಲ್ಲಿಸಿ ಬೇರೆ ವೇಳೆಯಲ್ಲಿ ವಿದ್ಯುತ್ ನಿಲುಗಡೆಯಾಗುವಂತೆ ಸಮಯ ಬದಲಾವಣೆ ಮಾಡಬೇಕು ಎಂದು ತಮ್ಮ ಮುಖಾಂತರ ಕೇಳುತ್ತೇನೆ. ಇನ್ನು ಕೆ.ಇ.ಬಿ.ಯೊಳಗೆ ಎಷ್ಟು ವಿದ್ಯುಚ್ಛಕ್ತಿ ಉತ್ಪಾದನೆ ಆಗಿದೆ? ಎಷ್ಟು ಕೊರತೆ ಇದೆ, ತಿಳಿಸಬೇಕು.

ಅಧ್ಯಕ್ಷರು:- ತಾವು ಹೀಗೆ ಮಾಡಿದರೆ ಅದಕ್ಕೆ ಅರ್ಥವಿರುವುದಿಲ್ಲ. ಪ್ರತಿಯೊಬ್ಬರೂ ಈ ರೀತಿ ಎರಡೆರಡು ನಿಮಿಷ ಮಾತನಾಡಬೇಕೆಂದರೆ ಹೇಗೆ ಸಾಧ್ಯವಾಗುತ್ತದೆ?

ಶ್ರೀ ಎಂ. ಶ್ರೀನಿವಾಸ್:- ಅಧ್ಯಕ್ಷರೇ, ನನಗೆ ಕೆಲವು ಮಾತುಗಳನ್ನು ಆಡಲು ಅವಕಾಶ ಕೊಡಿ.

ಅಧ್ಯಕ್ಷರು:- ನಾನು ಆಗಲೇ ಮಾನ್ಯ ಮುಖ್ಯಮಂತ್ರಿಗಳನ್ನು ಉತ್ತರ ನೀಡಲು ಕರೆದಿದ್ದೇನೆ. ಅವರೂ ಸಹ ಉತ್ತರಿಸಲು ನಿಂತಿದ್ದಾರೆ.

ಶ್ರೀ ಎಂ. ಶ್ರೀನಿವಾಸ್ (ಉತ್ತರಹಳ್ಳಿ):- ಮಾನ್ಯ ಅಧ್ಯಕ್ಷರೇ, ಕೆ.ಇ.ಬಿ.ಯವರು ಕರೆಂಟ್ ಕೊಡುವಾಗ, ಅಪ್ಲಿಕೇಷನ್ ತೆಗೆದುಕೊಳ್ಳುವಾಗ ಸಿಂಗಲ್ ಫೇಸ್ 250 ಓಲ್ಟೇಜ್ ಎಂದು ಕನೆಕ್ಷನ್ ಕೊಟ್ಟಿದ್ದಾರೆ. ಅದಾದ ಮೇಲೆ ತ್ರಿ ಫೇಸ್ ಕರೆಂಟ್ ಕೊಡುವಾಗ 440 ಓಲ್ಟೇಜ್ ಎಂದು ಕರೆಂಟ್ ಕೊಟ್ಟಿದ್ದಾರೆ. ಎರಡೂ ಕೊಡುವುದಕ್ಕೆ ನಮ್ಮ ಹತ್ತಿರ ಡಿಪಾಸಿಟ್ ಕಟ್ಟಿಸಿ ಕೊಂಡಿದ್ದಾರೆ. ಆ ಎರಡನ್ನು ನೀವು 180 ಓಲ್ಟೇಜ್ ಮಾಡುತ್ತಿದ್ದೀರಿ. ಸಿಂಗಲ್ ಫೇಸ್ 380 ಓಲ್ಟೇಜ್ ಮಾಡುತ್ತಿದ್ದೀರಿ. ಯಾವ ಕಾನೂನಿನಿಂದ ನೀವು ಈ ರೀತಿ ಮಾಡುತ್ತಿದ್ದೀರಿ? ನೀವು ಕಟ್ಟಿಸಿಕೊಳ್ಳುವುದೇ ಒಂದಾದರೆ ಮನೆಗೆ ಕೊಡುವುದೇ ಒಂದು. ಮನೆಗೆ ನೀವು ಕರೆಂಟ್ ಕೊಡುವಾಗ 250 ಓಲ್ಟೇಜ್ ಕೊಟ್ಟು ಮೀಟರ್ ಹಾಕುತ್ತೀರಿ. ತ್ರೀ ಫೇಸ್ ಕೊಡುವಾಗ 440 ಓಲ್ಟೇಜ್ ಕರೆಂಟ್ ಕೊಡುತ್ತೀರಿ. ಇವತ್ತು ನೀವು ಏನು ಮಾಡುತ್ತಿದ್ದೀರಿ? ನೀವು ಕರೆಂಟ್ ಕಡಿಮೆ ಕೊಡುತ್ತಿದ್ದೀರಿ? ಮುಖ್ಯಮಂತ್ರಿಗಳು ಇದರ ಬಗ್ಗೆ ತಮ್ಮ ಉತ್ತರದಲ್ಲಿ ಹೇಳಬೇಕು. ಡಿಪಾಸಿಟ್ ಕಟ್ಟಿಸಿಕೊಳ್ಳುವುದಕ್ಕೆ ಇನ್ನೂ ತೀರ್ಮಾನವೇ ಆಗಿಲ್ಲ, ದಯವಿಟ್ಟು ನಾನು ಹೇಳಿದ್ದು ತಾವು ಅರ್ಥಮಾಡಿಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳ ಮನೆಗೆ ಹೋದರೂ ಬೆಳಗಿನ ಹೊತ್ತು 180 ಓಲ್ಟೇಜ್ ಕರೆಂಟ್ ಇರುತ್ತದೆ. ನಮಗೆ ಕನೆಕ್ಷನ್ ಕೊಡಲು ಕಟ್ಟಿಸಿಕೊಳ್ಳುವುದು ಒಂದು. ಕನೆಕ್ಷನ್‌ಕೊಟ್ಟಾಗ ಕೊಡುವ ಓಲ್ಟೇಜ್ ಬೇರೆಯದ್ದೇ ಆಗಿರುತ್ತದೆ. ಇದರ ಬಗ್ಗೆ ಯಾರ ಮೇಲೆ ಕ್ರಿಮಿನಲ್ ಕೇಸು ಹಾಕಬೇಕು ಎನ್ನುವುದನ್ನು ನೀವೇ ಪರಿಶೀಲನೆ ಮಾಡಿ ಹೇಳಿ. ನಮ್ಮಿಂದ ಕಟ್ಟಿಸಿಕೊಳ್ಳುವ ದುಡ್ಡಿಗೆ ನೀವು ಇವತ್ತು ಅರ್ಧ ಭಾಗ ಮಾತ್ರ ಕರೆಂಟ್ ಕೊಟ್ಟರೆ, ನೀವು ಅದಕ್ಕೆ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡಬೇಕು. ಇನ್ನೂ ಆರ್ಡರ್ ಆಗದೇ ಇದ್ದರೂ ಸಹ 16 ಸಾವಿರ ರೂಪಾಯಿ ಡಿಪಾಸಿಟ್ ಕಟ್ಟಬೇಕೆಂದು ಈ ತಿಂಗಳ ಬಿಲ್ಲಿನಲ್ಲಿ ಸೇರಿಸಿ ಕಳುಹಿಸಿದ್ದಾರೆ. ಅದಕ್ಕೆ ತಾವು ದಯವಿಟ್ಟು ಉತ್ತರ ಹೇಳಬೇಕು.

+ ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿ):- ಮಾನ್ಯ ಅಧ್ಯಕ್ಷರೇ, ಯಾವುದೋ ಒಂದು ಅಥವಾ ಎರಡು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೇಂದು ಹೋಗಿ ಬಿಲ್ ಕೊಡುವುದರವರೆಗೂ ಇವತ್ತು ಚರ್ಚೆ ನಡೆಯಿತು. ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ ಹೊಸದಾಗಿ ಮೀಟರ್ ಅಳವಡಿಸಬೇಕು ಎಂದು ಹೇಳಿದ್ದೊಂದು. ಮತ್ತೊಂದು ರೈಗ್ಯುಲರೈಸೇಷನ್‌ಗೆ ಇಷ್ಟು ಎಂದು ದುಡ್ಡು ಕೊಟ್ಟು ರೆಗ್ಯುಲರೈಸ್ ಮಾಡಿಕೊಳ್ಳಬೇಕು ಎಂಬ ಎರಡೇ ಅಂಶಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಚರ್ಚೆಯಾದಾಗ ಪ್ರಸ್ತಾಪಸಿದ್ದರು. ಈಗ ಓಲ್ಟೇಜ್ ಪ್ರಶ್ನೆಯವರೆಗೆ ಇಲ್ಲಿ ಚರ್ಚೆಗೆ ಬಂದಿದೆ. ಮಾನ್ಯ ಸದಸ್ಯರು 400 ಓಲ್ಟೇಜ್ ಎಂದು ಹೇಳುತ್ತಾರೆ. 400 ಅಂದರೆ ಏನು? ಅದು ಕಿಲೋವ್ಯಾಟೋ? ಮೆಗಾವ್ಯಾಟೋ? ಜಿಗಾವ್ಯಾಟೋ? ಇದರಲ್ಲಿ ಯಾವುದು ಎಂದು ಹೇಳಿ? ವೋಲ್ಟೇಜ್ ಮೇಂಟೆನೆನ್ಸ್ ಮಾಡುವುದು ಒಂದು, ಒಟ್ಟು ಜನರೇಷನ್ ಇಂಪ್ರೂವ್ ಮಾಡಿ ಅದನ್ನು ನಾವು ಸಿಸ್ಟಮ್ಯಾಟಿಕ್ಕಾಗಿ ಡಿಸ್ಟ್ರಿಬ್ಯೂಟ್ ಮಾಡುವುದು ಒಂದು. ಕೆಲವು ಸಾರಿ ಜನರೇಷನ್ ಕಡಿಮೆ ಆಗುವುದರಿಂದ ವೋಲ್ಟೇಜ್ ಬಿದ್ದು ಹೋಗುವುದು ಅಥವಾ ಟ್ರಾನ್ಸ್‌ಮಿಷನ್‌ನಲ್ಲಿ ಡಿಫೆಕ್ಟ್ ಆದಾಗ ವೋಲ್ಟೇಜ್ ಬಿದ್ದು ಹೋಗುವುದು, ವೋಲ್ಟೇಜ್ ಎಂದರೆ ಕ್ವಾಲಿಟಿ ಆಫ್ ಪವರ್. ನಾವು ಕ್ವಾಲಿಟಿ ಹೇಳುವಾಗ ಕ್ವಾಂಟಿಟಿ ಹೇಳಬಾರದು. ಅದಕ್ಕೋಸ್ಕರ ಅದು ಏನೇ ಇರಲಿ ಕೆಲವು ಸಾರಿ ವೋಲ್ಟೇಜ್ ಡ್ರಾಪ್ ಆಗುತ್ತದೆ.

MR. SPEAKER:- There is a drop in the quality of power also.

SRI J.H. PATEL:- There is a drop in the quality of power and generally in the country.

ಶ್ರೀ ವಾಟಾಳ್ ನಾಗರಾಜ್:- ಜೆ.ಹೆಚ್.ಪಟೇಲ್‌ರವರ ಬಾಯಿಯಲ್ಲಿ ಬಹಳ ಸ್ವಾರಸ್ಯಕರವಾದ ಮಾತುಗಳು ಬರುತ್ತಿದೆ.

ಶ್ರೀ ಜೆ.ಹೆಚ್.ಪಟೇಲ್:- ಮಾನ್ಯ ವಿರೋಧ ಪಕ್ಷದ ನಾಯಕರು ಎರಡು ಮಾತುಗಳನ್ನು ಹೇಳಿದರು, ಒಂದು, ಮೀಟರ್‌ಗಳನ್ನು ಛೇಂಜ್ ಮಾಡಿ ಎಲೆಕ್ಟ್ರಾನಿಕ್ ಮೀಟರ್‌ಗಳನ್ನು ಅಳವಡಿಸುವುದಕ್ಕೆ ಹೊರಟಿರುವುದು. ಹಿಂದೆ ಇದ್ದ ಎಲೆಕ್ಟ್ರೋ ಮೆಕ್ಯಾನಿಕಲ್ ಮೀಟರ್‌ಗಳನ್ನು ತೆಗೆಯುವುದು. ಈಗ ಒಂದನೆಯದು, ಟೆಕ್ನಾಲಜಿ ಟ್ಯಾಂಪರ್ ಮಾಡುವುದಕ್ಕೆ ಸಾಧ್ಯ ಇದೆ ಮಾಡುತ್ತಿದ್ದೇವೆ. ನಾವು ಇವತ್ತು ಎಲ್ಲವನ್ನೂ ರೈತರ ಮೇಲೆ ಹಾಕಿ 42 ಪರ್ಸೆಂಟ್ ಅವರದೇ, 42 ಪರ್ಸೆಂಟ್ ಅವರದೆ ಎಂದು ಹೇಳುವುದಕ್ಕೆ ಮೊದಲು ನಿಜವಾಗಿಯೂ 42 ಪರ್ಸೆಂಟ್ ರೈತರಿಗೆ ಹೋಗುತ್ತಿದೆಯೋ ಅಥವಾ ಬೇರೆ ಎಲ್ಲಾದರೂ ಪೋಲಾಗುತ್ತಿದೆಯೋ ಎಂದು ನನಗೂ ಅನ್ನಿಸುತ್ತಿದೆ. ಸೋರಿ ಹೋಗುತ್ತಿದ್ದರೆ ಇಂಡಸ್ಟ್ರಿಯಲ್ ಸೆಕ್ಟಾರ್‌ನಲ್ಲಿ ಬಹಳ ಹೈ ಟೆನ್‌ಷನ್ ಯೂಸರ್ಸ್ ಅಷ್ಟು ಕಡಿಯುವುದಕ್ಕೆ ಸಾಧ್ಯವಿಲ್ಲ. ಕದಿಯುವುದಕ್ಕೆ ಇಚ್ಛೆ ಇರಬಹುದು ಆದರೆ ಕದಿಯುವುದಕ್ಕೆ ಸಾಧ್ಯವಿಲ್ಲ. ಮೀಡಿಯಮ್ ಎಲ್.ಟಿ.ಯಂತಹ ಇಂಡಸ್ಟ್ರೀಗಳಲ್ಲಿ ಇದು ಮ್ಯಾನಿಪ್ಯುಲೇಷನ್ ಮಾಡುತ್ತಾರೆ. ಮೀಟರ್ ಮ್ಯಾನಿಪ್ಯುಲೇಟ್ ಮಾಡುತ್ತಾರೆ. ನಮ್ಮ ಕೆಇಬಿ

ಆಫೀಸರ್ಸ್ ಅವರಿಗೆ ದಾರಿ ತೋರಿಸುತ್ತಾರೆ. ಇದೆಲ್ಲಾ ಇದೆ. 10 ಲಕ್ಷದ ಮೇಲೆ ಪಂಪ್‌ಸೆಟ್‌ಗಳಿವೆ. ಮೀಟರ್ ಇಲ್ಲ, ಎಷ್ಟು ಯೂಸ್ ಮಾಡಿದ್ದಾರೆಂದು ಯಾರಿಗೂ ಗೊತ್ತಿಲ್ಲ. ಅದು ಮೊದಲು ಗೊತ್ತಾಗಬೇಕು. 10 ಲಕ್ಷ ಪಂಪ್‌ಸೆಟ್‌ಗಳಿಗೆ ಇಷ್ಟು ಪವರ್ ಹೋಯಿತು, ಅದನ್ನು ನಾವು ಪುಕ್ಕಟೆ ಕೊಡುತ್ತೇವೊ, ಛಾರ್ಜ್ ಮಾಡುತ್ತೇವೊ ಅದು ಗೊತ್ತಾಗಬೇಕು. ಹಿಂದೆ ಐದು ಹೆಚ್.ಪಿ. ಮೋಟಾರ್ ರನ್ ಮಾಡಿದರೆ ಇಷ್ಟು ಯೂನಿಟ್ ಎಂದು ಸುಮ್ಮನೆ ಅಂದಾಜು ಮೇಲೆ ಎರಡು ಥೌಸೆಂಡ್ ಯೂನಿಟ್, ನಾಲ್ಕು ಥೌಸೆಂಡ್ ಯೂನಿಟ್ ಎಂದು ಆ್ಯವರೇಜ್ ಮಾಡಿದರೂ ಬರುತ್ತಾ ಬರುತ್ತಾ ನಮ್ಮ ಅಗ್ರಿಕಲ್ಚರಲ್ ಡಿಮ್ಯಾಂಡ್ ಹೆಚ್ಚಾದ ಮೇಲೆ ನಮಗೆ ವಾಸ್ತವಿಕವಾಗಿ ಎಲ್ಲಿ ಏನು ದೋಷ ಇದೆ, ಯಾರು ಇದಕ್ಕೆ ಕಾರಣರು ಎಂದು ಗೊತ್ತಾಗಬೇಕು. ಅದಕ್ಕೋಸ್ಕರ ನಾವು ನಿಷ್ಠೂರವಾಗಿ ಈ ತೀರ್ಮಾನ ತೆಗೆದುಕೊಂಡಿದ್ದೇವೆ. ಆ ತೀರ್ಮಾನ ನನ್ನದು ಅಲ್ಲ, ಈ ಸದನ ಸಮಿತಿ ರೆಕಮಂಡ್ ಮಾಡಿದೆ. ಸದನ ಸಮಿತಿ ಏನು ರೆಕಮಂಡ್ ಮಾಡಿದೆ. ಆ ರೆಕಮಂಡೇಷನ್ ಮೀರಿ ಎಲ್ಲೂ ಹೋಗಿಲ್ಲ. ಮೀಟರ್ ಅಳವಡಿಸಬೇಕೆಂದು ಹೇಳಿರುವುದು ಸದನ ಸಮಿತಿ, ಒಂದು ಹೆಚ್.ಪಿ.ಗೆ 100 ರೂಪಾಯಿ ಮಾಡಬೇಕೆಂದು ಹೇಳಿರುವುದು ಸದನ ಸಮಿತಿ ಎಇ ಹೆಚ್ ಮತ್ತು ಹೈ ಟೆನ್‌ಷನ್ ಯೂಸರ್ಸ್ ದೊಡ್ಡ ದೊಡ್ಡ ಬಾಕಿ ಇರತಕ್ಕಂತಹ ಇಂಡಸ್ಟ್ರಿಗಳಿಗೆ ಎಷ್ಟು ಇದೆ ಅವೆಲ್ಲಾ ಇದರಲ್ಲೇ ಬರಲಿಲ್ಲ. ಅಗ್ರಿಕಲ್ಚರಿಸ್ಟ್‌ಗೆ ಟ್ಯಾರಿಫ್ ಎಷ್ಟು ಇರಬೇಕು ಅದು ಹೇಳಿದೆ. ಇವತ್ತು ಸದನ ಸಮಿತಿಯ ರೆಕಮಂಡೇಷನ್ ವಯಲೇಟ್ ಮಾಡಿದ್ದಾರೆ ಮತ್ತೆ ಈ ಸದನ ಸಮಿತಿಯನ್ನು ಕೂರಿಸಿ ಕೇಳಬೇಕೆಂದರೆ ಏನು ಅರ್ಥ. ನಮ್ಮ ಸದನ ಸಮಿತಿಯ ರೆಕಮಂಡೇಷನ್ನ್ನೇ ಕೆ ಇಬಿ ಇಂಪ್ಲಿಮೆಂಟ್ ಮಾಡಿದೆ. ಬೇರೆ ವರ್ಗಗಳಿಗೆ ಇವತ್ತು ಹೆಚ್ಚು ಮಾಡಿದ್ದೇವೆ. ಹೆಚ್ಚು ಮಾಡಿದ್ದರಿಂದ ನಮಗೆ ಏನು ಮಾಡಿದರೆ ಮಾಡಲಿ ಎಂದು ಹೇಳಬಹುದು 23% of consumption is giving 68% revenue. Nearly 45% of consumption is giving totally zero. ಈಗ ಕಾಂಪಿಟಿಟೀವ್ ಉದ್ದೇಶದಿಂದ ಒಂದು ರೂಪಾಯಿ 80 ಪೈಸೆ ಒಂದು ಯೂನಿಟ್‌ಗೆ ಛಾರ್ಜ್ ಮಾಡುವುದಾದರೆ ನಾನು ಒಂದು ರೂಪಾಯಿ 60 ಪೈಸೆಗೆ ಕೊಡುತ್ತೇನೆಂದು ತಮಿಳುನಾಡಿನವರು ಹೇಳಿದರೆ ನಮ್ಮ ಇಂಡಸ್ಟ್ರಿಗಳು ಇರುವುದಿಲ್ಲ. ಬಹಳ ದೊಡ್ಡ ಇಂಡಸ್ಟ್ರೀಸ್ ಮುಚ್ಚಿಕೊಂಡು ಹೋಗುತ್ತಿದ್ದಾರೆ. ನಾವು ಒಂದು ಕಡೆ ನಮ್ಮದು ಪಯನೀರ್‌ಸ್ಟೇಟ್ ಅತ್ಯಂತ ಮುಂದುವರೆದ ರಾಜ್ಯ ಎಂದು ಹೇಳುತ್ತೇವೆ. ಆಗ ಬರೀ ಆರು ಪೈಸೆಗೆ ಒಂದು ಯೂನಿಟ್ ಜನರೇಟಿಂಗ್ ಕಾಸ್ಟ್ ಇತ್ತು. ಆಗ ನಾವು ಅಲ್ಯುಮಿನಿಯಂ ಕಂಪನಿಯವರಿಗೆ, ಸ್ಟೀಲ್ ಕಂಪನಿಯವರಿಗೆ ಮತ್ತು ಟೆಕ್ಸ್‌ಟೈಲ್ ಕಂಪನಿಯವರೆಗೆ ನೀವು ಬನ್ನಿ ಎಂದು ಹೇಳಿದೆವು. ಎಲ್ಲಾ ಬಂದರು. because cost of generation was so cheap ಏಕೆಂದರೆ ಆಗ 75 ಪರ್ಸೆಂಟ್ of our generation was hydal, ಹೈಡ್ಲ್‌ದು ಒಂದು ಮಟ್ಟಕ್ಕೆ ಬಂದು ನಿಂತು ಹೋಯಿತು. ಒಂದು ಕಡೆ ಇನ್ನು ಪೊಟೆನ್‌ಷಿಯಲ್ ಇದ್ದರೂ ಹೈಡಲ್ ಇದ್ದರೂ ಇದು ಬೇಡ್ತಿ ಬೇಡ, ಬಾರ್ಕೊಳೆ ಬೇಡ, ಇದು ಬೇಡ, ಅದು ಬೇಡ ಮತ್ತೊಂದು ಬೇಡ ಎಂದು ಹೇಳಿದರು. ಹಾಗಿದ್ದರೂ ಇದಕ್ಕೆ ಮನ್ನಣೆ ಕೊಟ್ಟು ಹೈಡ್ಲ್ ಇನ್‌ಛಾರ್ಜ್, ಮಿನಿ ಹೈಡ್ಲ್ ಇಲ್ಲೊಂದು ಅಲ್ಲೊಂದು ಮೆಗಾ ವ್ಯಾಟ್ ಹೀಗೆ ಮಾಡಿ today we rely on thermal power plant at Raichur. ನಮಗೆ ಮಳೆ ಬರಲಿಲ್ಲ,

ಮಳೆ ಬಂದು ನಮ್ಮ ಜಲಾಶಯಗಳಲ್ಲಿ 50 ಪರ್ಸೆಂಟ್ ನೀರು ಸ್ಟೋರ್ ಆಗಲಿಲ್ಲ. ಅದಕ್ಕೆ ಏನು ಮಾಡೋಣ? ಅದಕ್ಕೆ ನಾವು ಲೋಡ್ ಶೆಡ್ಡಿಂಗ್, ಪವರ್ ಕಟ್ ಅಂದಾಗ ಇಂಡಸ್ಟ್ರಿ ಅವರು ಏನು ಹೇಳುತ್ತಾರೆ ನಮಗೆ ನೀವು ಪವರ್ ಲೋಡ್‌ಶೆಡ್ಡಿಂಗ್, ಪವರ್ ಕಟ್ ಇಂಪೋಸ್ ಮಾಡಿದ್ದೀರಿ, ಬೇರೆಯವರಿಗೆ ನಮ್ಮ ಕಣ್ಣಿಗೆ ಕಂಡ ಹಾಗೆ ನೀವು ಪುಕ್ಕಟೆ ಕೊಟ್ಟು ಆ ಎಲ್ಲಾ ಲೋಡ್ ನಮ್ಮ ಮೇಲೆ ಹಾಕುತ್ತೀರಿ ನಾವು ಏಕೆ ಈ ರಾಜ್ಯದಲ್ಲಿ ಇರೋಣ? ನಮಗೆ ಅಂತಹ ಒತ್ತಾಸೇ ಏಕೆ? ನಾವು ಬೇರೆ ಕಡೆ ಹೋಗುತ್ತೇವೆ ಎನ್ನುವ ವಿಚಾರ ಇರುವುದರಿಂದ industrial growth has come down ಜೊತೆಗೆ ಎಂಪ್ಲಾಯ್‌ಮೆಂಟ್ ಆಪರ್ಚುನಟೀಸ್ ಬೇರೆ, ಮೀಟರ್ ಹಾಗೇ ಇದ್ದರೂ ಇಲ್ಲಿ ಶಾಕ್ ಹೊಡೆಯಿತು ಎಂದು ಹೇಳುತ್ತಾರೆ. Total economic growth of the state and plan size not that our Finance Minister wanted it, That is the result of what has happened in the last 4-5 years ಅದಕ್ಕೆ ಇವತ್ತು ನಾವು ಸಮಗ್ರವಾಗಿ ಆಲೋಚನೆ ಮಾಡೋಣ. ನಾನು ರೈತ ನನ್ನವು ಮೂರು ಪಂಪ್‌ಸೆಟ್‌ಗಳಿವೆ. ನಾನು ಏನು ಮಾಡುತ್ತೇನೆ, 10 ಹಾರ್ಸ್ ಪವರ್‌ಗಿಂತ ಜಾಸ್ತಿ ಆದರೆ ಮೀಟರ್ ಹಾಕಬೇಕು, ಛಾರ್ಜ್ ಮಾಡಬೇಕೆಂದು ಅಂದಾಗ ಒಂಭತ್ತೂವರೆ ಹಾರ್ಸ್ ಪವರ್ ಮಾಡುವುದು ಅಥವಾ ಮೂರು ಇಟ್ಟುಕೊಳ್ಳುವುದು, ಇಂತಹವು 100 ಪಂಪ್‌ಸೆಟ್‌ಗಳು ಇಟ್ಟುಕೊಂಡಿರುವ ಒಬ್ಬ ರೈತ ಇದ್ದಾನೆ. ಏಕೆಂದರೆ ಎಕ್ಸಂಪ್ಟ್ ಆಗುತ್ತದೆ. ಹಾಗೆ ಇವತ್ತು ಎಲ್ಲರೂ ಮಾಡಿಕೊಂಡಿರುವುದು. ಎದೆ ಮುಟ್ಟಿಕೊಂಡು ಹೇಳಿ, ನೀವು ರೈತರಾಗಿದ್ದರೆ ಹೇಳಿ, ನೀವೂ ಪಂಪ್‌ಸೆಟ್‌ಗಳನ್ನು ಉಪಯೋಗ ಮಾಡುತ್ತಿದ್ದರೆ, ನಿಮ್ಮ ಜಮೀನಿನಲ್ಲಿ ಕಬ್ಬು, ಭತ್ತ ಮತ್ತೊಂದನ್ನು ಬೆಳೆದು ಕೋಲಾರದಂತಹ ಕಡೆ ಟೊಮಾಟೋ ಮತ್ತು ಕೊತ್ತಂಬರಿ ಬೆಳೆದು ನೀವು ಏನು ಇಪ್ರೂವ್‌ಮೆಂಟ್ ಮಾಡಿಕೊಂಡಿದ್ದೀರಿ, ನಿಮಗೆ ಏನು ಅನುಕೂಲವಾಗಿದೆ ಅದರಲ್ಲಿ 10 ಪರ್ಸೆಂಟ್ ಬೇಡವೇ ಎಲೆಕ್ಟ್ರಿಸಿಟಿ ಬೋರ್ಡ್ ಎಂದರೆ ಅದು ಆಫ್ರಿಕಾದ, ಅವರು ನಮಗೆ ಎನಿಮಿಸಾ? ಅಲ್ಲೂ ಕಳ್ಳರಿರಬಹುದು, ಸುಳ್ಳರೂ ಇರಬಹುದು, I am not defending. ಇವತ್ತು ನಾವು ರೈತರು ನಮ್ಮದೇ ಆಸ್ತಿಗಳು ನಾವು ಉಳಿಸಿಕೊಳ್ಳದೆ ಇದ್ದರೆ ಬೇರೆಯವರನ್ನು ಯಾರು ಉಳಿಸಿಕೊಳ್ಳುತ್ತಾರೆ. ಬೇರೆ ಯಾರಿಗೂ ಇಂಟರೆಸ್ಟ್ ಇಲ್ಲ. ಆದುದರಿಂದ ಅವರು ಹೋಗುತ್ತಾರೆ, ನೀವು ಮಾಡಿದರೆ ಮಾಡಿಕೊಳ್ಳಿ, ಬಿಟ್ಟರೆ ಬಿಡಿ ನಂಜೇಗೌಡರೂ ರೈತರಿದ್ದಾರೆ, ನಾವು ಡೀಸಲ್ ಪಂಪ್‌ಸೆಟ್‌ಗಳನ್ನು ಇಟ್ಟುಕೊಂಡು ಇರ್‍ರಿಗೇಟ್ ಮಾಡುತ್ತೇವೆ, ಎಲ್ಲಿ ಎಲೆಕ್ಟ್ರಿಸಿಟಿ ಇಲ್ಲ, ಅಲ್ಲಿ ಡೀಸಲ್ ಪಂಪ್‌ಸೆಟ್‌ಗಳನ್ನು ಇಟ್ಟುಕೊಂಡು ಡೀಸಲ್ ಇಂಜಿನ್ ಇಟ್ಟುಕೊಂಡು ಇರ್‍ರಿಗೇಟ್ ಮಾಡುತ್ತೇವೆ. ಒಂದು ಎಕರೆಗೆ 45,000 ರೂಪಾಯಿ ಮಿನಿಮಮ್ ಖರ್ಚಾಗುತ್ತಿದೆ. ಅಲ್ಲಿ ನಾನು ಒಂದು ಎಕರೆಗೆ 45,000 ರೂಪಾಯಿ ಖರ್ಚು ಮಾಡುವುದಕ್ಕೆ ತಯಾರಿರುತ್ತೇನೆ. ಇಲ್ಲಿ ನಾನು ಹೇಳುವುದೇನು? ಎಲೆಕ್ಟ್ರಿಸಿಟಿ ಬೋರ್ಡ್, ನಿಮ್ಮ ಬೋರ್ಡ್ ಉಳಿದುಕೊಳ್ಳುವುದಕ್ಕೆ ಎಷ್ಟು ದುಡ್ಡು ಬೇಕೋ ಅಷ್ಟು ದುಡ್ಡ ಕೊಡಿ ಎಂದು ಹೇಳಿದ್ದು ಲಾಭವಲ್ಲ. ನಾವು ಈ ಸರ್ಕಾರದವರು ಎಲೆಕ್ಟ್ರಿಸಿಟಿ ಮಾರಿ ದುಡ್ಡು ಮಾಡಬೇಕಾಗಿಲ್ಲ. ಅಗ್ರಿಕಲ್ಚರ್ ಮತ್ತು ಇಂಡಸ್ಟ್ರಿಯಲ್ ಗ್ರೋತ್ ಕಡಿಮೆಯಾಯಿತು ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಈ ಸರ್ಕಾರ ಬಂದ ಮೇಲೆ ಏನಾಯಿತು ಎಂದು ಮಾನ್ಯ ವಿರೋಧ ಪಕ್ಷದ ನಾಯಕರು

ಮಾತನಾಡುತ್ತಾರೆ. ಅವರ ಪಕ್ಷ 45 ವರ್ಷ ಈ ರಾಜ್ಯ ಆಳಿದೆ. ಸ್ವಲ್ಪ ಏನಾದರೂ ಸೆನ್ಸ್ ಇದ್ದರೆ ನಾವು ತಪ್ಪು ಮಾಡಿದ್ದೇವೆ ಎನ್ನುವ ಪಶ್ಚಾತ್ತಾಪ ಬೇಡವೇ? ನಾವು ಬಂದ ಮೇಲೆ ಇವತ್ತು 40 ಮೆ.ವ್ಯಾ ನಾಳೆಗೆ ಎಕ್ಸ್‌ಟ್ರಾ ಆ್ಯಡ್ ಆಗುತ್ತದೆ. First time in last ten year ಏನೂ ಮಾಡದೆ ಉಪದೇಶ ಮಾಡುವುದಕ್ಕೆ ಬರುತ್ತದೆ. ನಾನು ವಿರೋಧ ಪಕ್ಷಗಳಲ್ಲಿ ಇದ್ದು ಮಾತನಾಡಿದ್ದೇನೆ. ವಾಸ್ತವಿಕತೆಗೆ ದೂರ ಹೋಗಬಾರದು, ತಾವು ಏನು ಮಾಡಿದ್ದೀರಿ, ಇವತ್ತು ರಾಜ್ಯಕ್ಕೆ ಏನು ಕಷ್ಟ ಬಂದಿದೆ, ಅದು ತಿಳಿದುಕೊಳ್ಳದೆ ಇವರು ಬಂದುಬಿಟ್ಟರು. ರೈತರ ಸರ್ಕಾರವೆ ಎಂದು ಹೇಳುವುದು. ನಮ್ಮದು ಮಾರ್ವಾಡಿಗಳ ಸರ್ಕಾರವೇ. ಕ್ರಿಟಿಸೈಸ್ ಮಾಡಲಿ, ಸಲಹೆ ಕೊಡಲಿ, ನಮ್ಮ ತಪ್ಪಿದ್ದರೆ ತಿದ್ದಲಿ ಅವರು ಮಾಡಿದ ಎಲ್ಲಾ ತಪ್ಪುಗಳಿಂದ ನಾನು ಇವತ್ತು ಉತ್ತರ ಕೊಡಬೇಕಾಗಿದೆ. ಅವರ ಪಾಪದ ಕೂಸನ್ನು ನಾನು ಇವೊತ್ತು ಹೊತ್ತುಕೊಂಡು ಓಡಾಡಬೇಕಾಗಿದೆ. ಏನು ಮಾಡಲಿ? ಅದಕ್ಕಾಗಿ ನಾನು ಮಾನ್ಯ ಸದಸ್ಯರುಗಳಿಗೆ ಹೇಳುವುದು, ವಿರೋಧ ಪಕ್ಷದ ನಾಯಕರು ಹೇಳಲಿ. ನಾನು ಅವರ ಫರ್ಜಸ್ ಕೇಳಿದ್ದೇನೆ. ಆದರೆ Did you add one K.W. of pwer in your regime? ವಿದ್ಯುಚ್ಛಕ್ತಿ ಎಂದರೆ ಜಾದು ಮಾಡುವುದಕ್ಕಾಗುವುದಿಲ್ಲ ಎಂದು ಬಹಳ ಸಾರಿ ಹೇಳುತ್ತೇವೆ. ಹಿಂದೊಂದು ಸಾರಿ ಒಬ್ಬರು ಕಾಂಗ್ರೆಸ್ ಸದಸ್ಯರಿದ್ದರು, ಅವರು ವಿದ್ಯುಚ್ಛಕ್ತಿ ಎಂದರೆ ಏನು ಎಂದು ಕೇಳಿದರು ತಂತಿ ಮುಟ್ಟಿ ನೋಡಿ ಎಂದು ಹೇಳಿದೆ. ಆ ರೀತಿ ತಂತಿ ಮುಟ್ಟಿ ನೋಡಿ ಎಂದು ಹೇಳಬೇಕಾಗುತ್ತದೆ. ಇವೊತ್ತಿನ ಪರಿಸ್ಥಿತಿಯಲ್ಲಿ ಇದಕ್ಕೆ ನಾವೆಲ್ಲರೂ ಸೇರಿ ರಾಜ್ಯದ ಹಿತದೃಷ್ಟಿಯಿಂದ ಆಲೋಚನೆ ಮಾಡಿದರೆ ಸಾಧ್ಯವಾಗುತ್ತದೆ ಹೊರತಾಗಿ ರೈತರನ್ನು ಎತ್ತಿ ಕಟ್ಟಿದರೆ ಹೇಗೆ? ರೈತರಿಗೆ ಏಕೆ ಪುಕ್ಕಟೆ ಕೊಡಬೇಕು ನಾನು ರೈತ ಅಂದರೆ, ನಾವೆಲ್ಲರೂ ರೈತರ ಮಕ್ಕಳೇ ಪುಕ್ಕಟೆ ಕೊಡೋಣ. ಯಾರಿಗೆ ಸಾಧ್ಯವೋ ಅವರು ಕೊಡಲಿ. ಯಾವ ಸರ್ಕಾರಕ್ಕೆ ರೈತರಿಗೆ ಇದನ್ನು ಪುಕ್ಕಟೆಯಾಗಿ ಕೊಡುವುದಕ್ಕೆ ಸಾಧ್ಯವೋ ಅವರು ಕೊಡಲಿ. ಇಲ್ಲಿ ನಮ್ಮ ಕೆ.ಇ.ಬಿ.ಗೆ ಸಾಧ್ಯವಿಲ್ಲ. ಈಗ ಎಲ್ಲಾ ಕಡೆ ಜಾಸ್ತಿ ಬೆಲೆ ಇದೆ. ಹರಿಯಾಣ - ರಾಜಾಸ್ಥಾನದಲ್ಲಿ ಒಂದು ಯೂನಿಟ್‌ಗೆ ಐವತ್ತು ಪೈಸೆ. We are not charging even five paise. ಇವೊತ್ತು ರೈತರಿಗೆ ಸತ್ಯಾಂಶವನ್ನು ಹೇಳಿದರೆ ಅವರು ಒಪ್ಪಿಕೊಳ್ಳುತ್ತಾರೆ. ಹತ್ತಿಪ್ಪತ್ತು ಸಾವಿರ ಜನರು ಇರತಕ್ಕ ಸಭೆಗಳಲ್ಲಿ ಏನಪ್ಪಾ ದುಡ್ಡು ಕೊಡುತ್ತೀರಾ ಎಂದು ನಾನು ಕೇಳಿದಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ನೀವು ಸರಿಯಾಗಿ ಪವರನ್ನು ಕನ್ಸಿಸ್ಟೆಂಟ್ ಆಗಿ ನಮಗೆ ಸಪ್ಲೈ ಮಾಡಿ ನಾವು ಕೊಡುತ್ತೇವೆ ಎಂದು ಹೇಳುತ್ತಾರೆ. ನಾನು ಹೇಳುವುದು ರೈತರಿಗೆ ಮನವರಿಕೆ ಮಾಡಬಹುದು. ಇಲ್ಲದಿದ್ದರೆ ಇದು ಬಂದ್ ಆಗಿ ಹೋಗುತ್ತದೆ. ಇವೊತ್ತು ರೈತರ ಸಮಸ್ಯೆಯ ಬಗ್ಗೆ ಚರ್ಚೆ ಪ್ರಾರಂಭವಾಗಿ ಅದು ಅಲ್ಲಿಂದ, ಇಲ್ಲಿಂದ ಹೋಗಿ ಎಲ್ಲೆಲ್ಲೋ ಹೋಗಿ ಈಗ ವೊಲ್ಟೇಜ್‌ಗೆ ಬಂದಿದೆ. ನಾನು ಇವೊತ್ತು ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಮತ್ತು ಉಳಿದ ವಿರೋಧ ಪಕ್ಷದ ನಾಯಕರುಗಳಿಗೆ ಹೇಳುವುದು ಏನೆಂದರೆ ಇವೊತ್ತು ನಾವು ಸತ್ಯಾಂಶವನ್ನು ಜನರ ಮುಂದೆ ಇಡಬೇಕು. ಮೀಟರ್‌ಗಳನ್ನು ಹಾಕಿಸಬೇಕು. ಯಾರು ಎಷ್ಟು ತಿಂದಿದ್ದಾರೆ, ಯಾರು ಎಷ್ಟು ಕಕ್ಕಿದಾರೆಂದು ಲೆಕ್ಕ ಗೊತ್ತಾಗಬೇಕು. ಪಾಪ್ಯುಲ್ಯಾರಿಟಿಗೋಸ್ಕರ ಸುಮ್ಮನೆ ಒಬ್ಬ ಮೀಟರ್ ತೆಗೆದ, ಒಬ್ಬ ಕಂಬ ತೆಗೆದ ಎಂದು ಮಾಡಿದರೆ ನಾನು ಪ್ರಾಣವನ್ನು ತೆಗೆದುಕೊಳ್ಳುವ ಪರಿಸ್ಥಿತಿ ಬರುತ್ತದೆ. ಬರೀ ತೆಗೆಯುತ್ತಾ ಹೋಗುವುದೇ

ಒಂದು ಸಾಧನೆಯಲ್ಲ. ಪರಿಸ್ಥಿತಿ ಹೀಗೆ ಇದೆ ಇವೊತ್ತು ನೀವು ಸಹಕಾರ ಕೊಡಬೇಕು ಎಂದು ರೈತರಿಗೆ ಹೇಳಬೇಕು.

ಏಳನೂರು ಕೋಟಿ ರೂಪಾಯಿ ಸಬ್ಸಿಡಿ ಕೊಡುತ್ತಿದ್ದೇವೆ ಅದು ಯಾರ ದುಡ್ಡು? ಯಾವ ರಾಜ್ಯ ಸರ್ಕಾರವೂ ಈ ರೀತಿ ಸಬ್ಸಿಡಿ ಕೊಟ್ಟುಕೊಂಡು ಎಲೆಕ್ಟ್ರಿಸಿಟಿ ಕೊಡುವುದಿಲ್ಲ. ಎಲ್ಲಾ ರಾಜ್ಯ ಸರ್ಕಾರಗಳಲ್ಲಿ ಇವೊತ್ತು ಎಲೆಕ್ಟ್ರಿಸಿಟಿ ಕೊರತೆ ಇದೆ. ಆದರೆ ಯಾರೂ ಪುಕ್ಕಟೆಯಾಗಿ ಕೊಟ್ಟು ಇನ್ನೊಬ್ಬರಿಗೆ ಅದರ ಭಾರ ಹಾಕುವುದಿಲ್ಲ. ತಮಿಳುನಾಡು ತೆಗೆದುಕೊಳ್ಳಿ, ಆಂಧ್ರಪ್ರದೇಶ ತೆಗೆದುಕೊಳ್ಳಿ, ಪಕ್ಕದ ಯಾವ ರಾಜ್ಯವನ್ನಾದರೂ ತೆಗೆದುಕೊಳ್ಳಿ, ಯಾವುದೇ ಸರ್ಕಾರ ತೆಗೆದುಕೊಳ್ಳಿ, ಬಹಳ ಜನರಿಗೆ ಇದನ್ನು ಕೇಳಿದರೆ ಆಶ್ಚರ್ಯವಾಗಬಹುದು, ಮಹಾರಾಷ್ಟ್ರದಲ್ಲಿ ಒಂದು ಯೂನಿಟ್‌ಗೆ ನಾಲ್ಕು ರೂಪಾಯಿ ಚಾರ್ಜ್ ಮಾಡುತ್ತಿದ್ದಾರೆ. ನಾವು ಇನ್ನೂ 1.80 ರೂಪಾಯಿ 2.20 ರೂಪಾಯಿಗೆ ಆಗಲೇ ತೂಕಡಿಸಿ ತೂಕಡಿಸಿ ಸಾಕಾಗಿ ಹೋಗುತ್ತಿದೆ.

ಅಧ್ಯಕ್ಷರು:- ಮಹಾರಾಷ್ಟ್ರದಲ್ಲಿ ಅಷ್ಟೊಂದು ಇದೆ ಎಂದು ನನಗೆ ಅನಿಸುವುದಿಲ್ಲ. ಏನು ರಾಮಕೃಷ್ಣರವರೇ ಅಷ್ಟೊಂದು ಇರಬಹುದೇ?

ಶ್ರೀ ಜೆ.ಹೆಚ್. ಪಟೇಲ್:- ಕೆಲವು ಇಂಡಸ್ಟ್ರಿಸ್‌ಗಳು ಇದ್ದಾವೆ ಅವರ ರಿಕ್ವೈರ್‌ಮೆಂಟ್‌ಗೆ ರೆಗ್ಯುಲರ್ ಸರ್ವೀಸ್‌ನಿಂದ ಆಗುವುದಿಲ್ಲ. they pay Rs. 4/- per unit. It is high cost power.

ಶ್ರೀ ವೈ. ರಾಮಕೃಷ್ಣ:- ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ನಾವು ಕೇಳುತ್ತಿದ್ದೇವೆ. We have not studied it. Let's be honest.

ಶ್ರೀ ಎಲ್.ಆರ್. ಶಿವರಾಮೇಗೌಡ:- ಕೊಡಬಹುದು, ನಾಲ್ಕು ರೂಪಾಯಿ ಕೊಡಬಹುದು, ಏಕೆಂದರೆ ಇಂಡಸ್ಟ್ರಿಸ್‌ಗಳಿಗೆ ಸಾಲದೇ ಹೋದರೆ ನಾಲ್ಕು ರೂಪಾಯಿ ಕೊಡಬಹುದು. ಏಕೆಂದರೆ ಇವೊತ್ತು ಡೀಸಲ್ ಹಾಕಿಕೊಂಡರೆ ನಾಲ್ಕು ರೂಪಾಯಿ ಆಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್:- ಬಿಹಾರದಲ್ಲಿ ಆರು ರೂಪಾಯಿಗೆ ಒಂದು ಯೂನಿಟ್ ಕೊಟ್ಟರೆ ಕೊಂಡುಕೊಳ್ಳಲು ತಯಾರಿದ್ದಾರೆ. Which I know. ಅವರಿಗೆ ಅವಶ್ಯಕತೆ ಇದ್ದರೆ ಅವರು ಹೆಚ್ಚು ದುಡ್ಡು ಕೊಟ್ಟು ಕೊಂಡುಕೊಳ್ಳಲು ತಯಾರಿರುತ್ತಾರೆ. ಆದರೆ ನಮ್ಮ ಹತ್ತಿರ ಕೊಡುವುದಕ್ಕೆ ಇರಬೇಕಲ್ಲ. ಈಗ ಕೆ.ಪಿ.ಸಿ.ನವರು ನನ್ನ ಹತ್ತಿರ ಬಂದು ನೇರವಾಗಿ ನಾವು ಹೈ ಕಾಸ್ಟ್‌ಗೆ ಮಾರಿಕೊಳ್ಳುತ್ತೇವೆ ಎಂದರು. ಕೆಲವರು ದುಡ್ಡುಕೊಟ್ಟು ಕೊಂಡುಕೊಳ್ಳಲು ತಯಾರು ಇರುತ್ತಾರೆ. ಈಗ ಗ್ರೌಂಡ್ಸ್‌ನಲ್ಲಿ ಎಕ್ಸಿಬಿಶನ್ ಎಲ್ಲಾ ಮಾಡುತ್ತಾರಲ್ಲ ಅವರ ಕಾಸ್ಟ್ ಆಫ್ ಎನರ್ಜಿ ಎಷ್ಟು ಗೊತ್ತಾ ನಾಲ್ಕೂವರೆ ರೂಪಾಯಿ ಒಂದು ಯೂನಿಟ್‌ಗೆ. ಅವರಿಗೆ ಅವಶ್ಯಕತೆ ಇದ್ದರೆ ನಾಲ್ಕೂವರೆ ರೂಪಾಯಿಯಾಗಲಿ, ಆರು ರೂಪಾಯಿಯಾಗಲಿ ಕೊಂಡುಕೊಳ್ಳುತ್ತಾರೆ. ಆದರೆ ಕೊಡಲಿಕ್ಕೆ ನಮ್ಮ ಹತ್ತಿರ ಪವರ್ ಇರಬೇಕಲ್ಲ. ಇವೊತ್ತು ರೈತರ ಹಿತರಕ್ಷಣೆ ಮಾಡಬೇಕು ಎನ್ನುವ ಆಸಕ್ತಿ ಇದ್ದರೆ ಮಾಡಬಹುದು ಸುಮ್ಮನೆ ಮಾತನಾಡುವುದಕ್ಕೋಸ್ಕರ ಮಾತನಾಡುತ್ತಿಲ್ಲ. ನಮ್ಮ ಅನುಭವದಿಂದ ಅವರಿಗೆ ಹೇಳಬೇಕು ನೀನು ಡೀಸಲ್ ಪಂಪ್‌ಸೆಟ್‌ನಿಂದ ಇರಿಗೇಶನ್ ಮಾಡಿದರೆ ಎಷ್ಟು

ಖರ್ಚಾಗುತ್ತದೆ. ಬೇರೆ ರೀತಿಯಿಂದ ಇರಿಗೇಶನ್ ಮಾಡಿದರೆ ಎಷ್ಟು ಖರ್ಚಾಗುತ್ತದೆ ಎಂದು ತಿಳಿಸಬೇಕು. ಬೇರೆ ರೀತಿಯಿಂದ ಇರಿಗೇಷನ್ ಇಷ್ಟು ಚೀಪ್ ಆಗುವುದಿಲ್ಲ ಎಂದು ಅವರಿಗೆ ಮನವರಿಕೆ ಮಾಡಬೇಕು. ಈಗ ನಮ್ಮ ಯು.ಕೆ.ಪಿ.ಯಲ್ಲಿ ಇರಿಗೇಷನ್ ಕಾಸ್ಟ್ ಒಂದು ಹೆಕ್ಟೇರ್‌ಗೆ ಒಂದು ಲಕ್ಷ ರೂಪಾಯಿ ಇದೆ. ಮಹಾರಾಷ್ಟ್ರದಲ್ಲಿ ಏಕೆ ಎಂದರೆ ಅವರು ನೀರನ್ನು ಮಾರುತ್ತಾರೆ, ಎಲೆಕ್ಟ್ರಿಸಿಟಿಯನ್ನು ಮಾರುತ್ತಾರೆ. ಆದ್ದರಿಂದ ಸರ್ವಿಸ್ ಚೆನ್ನಾಗಿ ಇಟ್ಟುಕೊಂಡಿದ್ದಾರೆ. ಅದಕ್ಕಾಗಿ ಜನ ಸಂತುಷ್ಟವಾಗಿದ್ದಾರೆ. ಈಗ ಅಲ್ಲೆಲ್ಲಾ ಕೆಡೆಸಿ ಹಾಳು ಮಾಡಿ ಕೆ.ಇ.ಬಿ.ಯನ್ನು ಎಲ್ಲಿಯಾದರು ಬಿಸಾಕಬೇಕು ಎನ್ನುವ ಮಟ್ಟಕ್ಕೆ ಮಾಡಿಟ್ಟು ಹೋಗಿ ಈಗ ಏನೋ ದೊಡ್ಡ ಉಪದೇಶ ಹೇಳುವುದು ರೈತರ ಸರ್ಕಾರ ಎಂದು ಹೇಳುವುದು. ನಾವು ಈ ಸದನದ ಸಮಿತಿಯ ಶಿಫಾರಸ್ಸುಗಳ ವಿರುದ್ಧ ಹೋಗಿಲ್ಲ. ನಾವು ಡಿವಿಯೇಟ್ ಆಗಿಲ್ಲ. ಬೇರೆ ವರ್ಗದವರಿಗೆ ನಾವು ಹೊರೆ ಹಾಕಿದ್ದೇವೆ ಹೊರತು ರೈತರಿಗಲ್ಲ. ಆದಕಾರಣ ಈಗಲೂ ಈ ಸದನದಲ್ಲಿ irrespective of Party ತಮ್ಮನ್ನೆಲ್ಲಾ ಕೇಳಿಕೊಳ್ಳುವುದೇನೆಂದರೆ ನಾವು ಇವೊತ್ತು ರೈತರಿಗೆ ಕನ್ವಿನ್ಸ್ ಮಾಡದಿದ್ದರೆ ನಾಳೆ ನಾವು ಅವರಿಗೆ ದ್ರೋಹ ಮಾಡುತ್ತೇವೆ. ಕೆ.ಇ.ಬಿ. ಕ್ಲೋಸ್ ಡೌನ್ ಆಗುತ್ತದೆ, ಕೆ.ಇ.ಬಿ. ಮುಚ್ಚಿ ಹೋಗುತ್ತದೆ. It may be privatised. The Government Cannot manage it. ಹಿಂದೆ ಒಂದು ಸಾರಿ ನಾನು ಈ ಮಾತನ್ನು ಹೇಳಿದ್ದೇನೆ. ಪ್ರೈವೇಟೈಸ್ ಎಂದ ತಕ್ಷಣ ನಿಮಗೆ ಬೇಕಾಗಿದ್ದು ನೀವು ಖಾಸಗಿಯವರಿಂದ ಖರೀದಿ ಮಾಡುತ್ತೀರಿ. You have to buy power from them. ಆದ್ದರಿಂದ ಇವೊತ್ತು ನಾನು ಕೆ.ಇ.ಬಿ. ಉಳಿಸಿಕೊಂಡು, ಪ್ರೈವೇಟೈಸ್ ಮಾಡಬಾರದು ಎನ್ನುವ ಉದ್ದೇಶದಿಂದ ಸತ್ಯಾಂಶವನ್ನು ರೈತರಿಗೆ ಹೇಳಬೇಕು. ಸಕ್ಕರೆ ಕಾಯಿಲೆ ಇದ್ದವನಿಗೆ ಬೆಲ್ಲ ಕೊಡಬಾರದು, ಸಾಯಿಲಿ ಎಂದು. ಅವನಿಗೆ ಹಾಗಲಕಾಯಿ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್:- ಈಗ ಹಾಗಾಲಕಾಯಿ ತಿಂದರೂ ಹೋಗುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್:- ಇವೊತ್ತು ಪರಿಸ್ಥಿತಿ ಹೀಗೆ ಇದೆ ಎಂದು ಅವರಿಗೆ ನೀವು ಸತ್ಯ ಹೇಳಬೇಕು. ಮೀಟರ್ ಹಾಕುವುದಕ್ಕೆ ಹತ್ತು ಸಾವಿರ ರೂಪಾಯಿ ದಂಡ ಎಂದು ಹೇಳಿದಿರಿ. ಆದರೆ ಅದು ದಂಡ ಅಲ್ಲ. ಇವೊತ್ತು ಇಲ್ಲಿ ಭೈರೇಗೌಡರು ಇದ್ದರೆ ಅವರು ಹೇಳುತ್ತಿದ್ದರು. ಕೋಲಾರದಲ್ಲಿ ಅವರೇ ಸ್ವತಃ ಬಂದು ನಮಗೆ ಬಹಳ ಅವಶ್ಯಕತೆ ಇತ್ತು ನಾವು ಕನೆಕ್ಷನ್ ತೆಗೆದುಕೊಂಡಿದ್ದೇವೆ. ಈಗ ರೆಗ್ಯುಲರೈಸ್ ಮಾಡುವುದಾದರೆ ನಾವು ಹತ್ತು ಸಾವಿರ ರೂಪಾಯಿ ಕೊಡುತ್ತೇವೆ ಎಂದು ಬಂದರು. About Rs. 2.5 Crores we have received from them voluntarily. ಬಂದು ಅವರು ರೆಗ್ಯುಲರೈಸ್ ಮಾಡಿಸಿಕೊಂಡಿದ್ದಾರೆ. ನಾವು ಪರ್ಮಿಶನ್ ಇಲ್ಲದೇ ಲಿಗ್ಯಾಲಿಟೀಸ್ ಇಲ್ಲದೆ ನಡೆಸುತ್ತಿದ್ದೇವೆ ಎನ್ನುವ ಕಾರಣದಿಂದ ಕಾನೂನು ಪ್ರಕಾರ ಆಗಲಿ ಎಂದು ರೆಗ್ಯುಲರೈಸ್ ಮಾಡಿಸಿಕೊಂಡಿದ್ದಾರೆ. ಇವೊತ್ತು ನಾವು ತಿಳಿಸಿ ಹೇಳಿದರೆ ಜನ ಒಪ್ಪುತ್ತಾರೆ. ಆದ್ದರಿಂದ ಅದು ದಂಡ ಅಲ್ಲ. ಕೆಲವು ಕಡೆ ಎಸ್ಟಿಮೇಟೆಡ್ ಕಾಸ್ಟ್ ಮಿನಿಮಮ್ ಹತ್ತು ಸಾವಿರ ಇದೆ. The estimated cost of that new connection if it is less than Rs. 1,0,000, I am prepared to consider for the actual cost of it. Most of them are

above 10,000. ಅದಕ್ಕಾಗಿ ಮೀಟರ್ ಅಳವಡಿಸುವುದು ಅನಿವಾರ್ಯವಾಗಿದೆ ಎಂದು ತಮ್ಮ ಅನುಮತಿ ಮೇರೆಗೆ ಹೇಳುತ್ತೇನೆ. At least we should know who is using how much? And how much money is being given to us? ಈ ಹತ್ತು ಸಾವಿರ ರೂಪಾಯಿಗಳು ದಂಡ ಅಲ್ಲ. ವಾಲಂಟರಿಯಾಗಿ ಅವರೇ ಬಂದು ಈ ಫೆಸಿಲಿಟಿ ಕೊಡಿ ಎಂದು ಹೇಳಿದ್ದಾರೆ. Regarding overall improvement of power generation ಈಗ ಈ ವರ್ಷ Next month we are adding 40 MWs and smaller units ನಿಂದ ಅಂದರೆ ವಿಂಡ್‌ಮಿಲ್‌ನಿಂದ ಎರಡು ಮೆಗಾವ್ಯಾಟ್ ಎರಡು ತಿಂಗಳ ಕೆಳಗೆ ಹೊಸದಾಗಿ ಆ್ಯಡ್ ಆಗಿದೆ. ಇನ್ನು ಈ ವರ್ಷದ ಅಂತ್ಯದೊಳಗೆ ಅಂದರೆ 1997-98ರೊಳಗೆ We are sure to add another 650 MWs of power. ಇದು ಕ್ಲಿಯರ್ ಆಗಿರುವ ಪ್ರಾಜೆಕ್ಟ್ಸ್. ನಾನು ಬರೀ ಅಂತೆ ಕಂತೆ ಹೇಳುವುದಕ್ಕೆ ಸಿದ್ಧನಿಲ್ಲ. ಅವು ಸೇರಿದರೆ total service condition of the State will be tolerable good, not self-satisfactory. Tolerably good. After 2 1/2 years we will be self-sufficient. This is the position and this is my statement to you Sir.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಬಹಳ ಸಂತೋಷ ಮಾನ್ಯ ಮುಖ್ಯಮಂತ್ರಿಗಳು ಕೆಲವು ಮಾತುಗಳನ್ನು ಬಹಳ ಲಘುವಾಗಿ ಮಾತನಾಡಿದ್ದಾರೆ. ನಲವತ್ತೊಂದು ವರ್ಷಗಳಲ್ಲಿ ಕಾಂಗ್ರೆಸ್‌ನವರು ಏನೂ ಮಾಡಿಲ್ಲ, ಅವರ ಪಾಪದ ಕೂಸನ್ನು ನಾವು ಇವೊತ್ತು ತೆಗೆದುಕೊಂಡು ಸಫರ್ ಮಾಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ಅದು ರೆಕಾರ್ಡಿಗೆ ಹೋಗಿದೆ. ಎರಡು ವರ್ಷದ ಅವಧಿಯಲ್ಲಿ ಬೆಳಕು, ಲೈಟು ಎಲ್ಲಾ ಇವರೇ ಮಾಡಿದ್ದಾರೆ ಎನ್ನುವ ರೀತಿ ಹೇಳಿದರು. ಕಾಂಗ್ರೆಸ್‌ನವರು ಏನೂ ಮಾಡಿಲ್ಲ, ಅಂದರೆ ಯಾವ ದೇಶದಲ್ಲಿ ಒಂದು ಸೂಜಿ ತಯಾರು ಆಗುತ್ತಿರಲಿಲ್ಲ ಆ ದೇಶದಲ್ಲಿ ಇವೊತ್ತು ರ್ಯಾಕೆಟ್ ಓಡಿಸತಕ್ಕಂಥ ಕೆಲಸ ಮಾಡಿದವರು ಕಾಂಗ್ರೆಸ್ ಪಕ್ಷದವರು ನೀವಲ್ಲ. ಆ ಮೇಲೆ ಲಿಂಗನಮಕ್ಕಿ ಡ್ಯಾಂ ಅಲ್ಲಿ ಎಕ್ಸಿಸ್ಟಿಂಗ್ ಪವರ್ ಹೌಸ್ ಯಾರು ಮಾಡಿದ್ದು.

ಮಾನ್ಯ ಸದಸ್ಯರು:- ಐದು ವರ್ಷದ್ದು ಹೇಳಬೇಡಿ.

5.30 ಪಿಎಂ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಐದು ವರ್ಷದ್ದು ಎಂದರೆ, ಕಾಂಗ್ರೆಸ್ ಪಕ್ಷದ ನಲವತ್ತು ವರ್ಷದ ಇತಿಹಾಸವನ್ನು ನೀವು ಹೇಳುತ್ತೀರಿ, ನಲವತ್ತು ವರ್ಷದಲ್ಲಿ ನಾವು ಮಾಡಿದ ಸಾಧನೆ ಹೇಳುತ್ತೇವೆ. ನೀವೇ ಕೊಟ್ಟಂಥ ಅಂಕಿಅಂಶಗಳ ಪುಸ್ತಕ ಇದೆ, ಅದನ್ನು ಬೇಕಾದರೆ ನೀವು ಮತ್ತೊಮ್ಮೆ ಓದಿ. ಅದನ್ನು ಬಿಟ್ಟು ಸುಮ್ಮನೇ ಹಾರಿಕೆ ರೀತಿಯಲ್ಲಿ ಮಾತನಾಡಿ ಒಂದು ಚೇಷ್ಟೆ ಮಾಡಿ ನಗಿಸುವುದಕ್ಕೆ ಹೇಳಬೇಡಿ. ಅಂಕಿ ಅಂಶ ಇದೆ, ನೀವು ಕೊಟ್ಟಂಥ ಪುಸ್ತಕ ಇದೆ, ಅದರ ಆಧಾರದ ಮೇಲೆ ನಾನು ಹೇಳುತ್ತಿದ್ದೇನೆ. ಯಾವ್ಯಾವ ಪವರ್ ಹೌಸ್‌ನಲ್ಲಿ ಯಾವ್ಯಾವ ವರ್ಷಗಳಲ್ಲಿ ಎಷ್ಟೆಷ್ಟು ಪವರ್ ಜನರೇಶನ್ ಆಯಿತು ಎಂದು ಗೊತ್ತಿದೆ. ಇವೊತ್ತು 3,470.25 ಮೆಗಾವ್ಯಾಟ್ ಕರೆಂಟ್‌ನ್ನು

ನೀವೇ ಜನರೇಟ್ ಮಾಡಿದಿರಾ? ನಮ್ಮ ಕಾಲದಲ್ಲಿ ಆಗಿದ್ದ ಪ್ರಾಜೆಕ್ಟ್‌ಗಳಿಂದ ಈಗ ಸುಮಾರು 10,44,000 ಪಂಪ್‌ಸೆಟ್‌ಗಳಿಗೆ ಕರೆಂಟ್‌ನ್ನು ಕೊಟ್ಟಿರುವ ವಿದ್ಯುತ್ ನಿಮ್ಮದೇ? ಇಷ್ಟು ಕರೆಂಟ್‌ನ್ನು ನೀವು ಹಿಂದೆ ಜನರೇಟ್ ಮಾಡಿದ್ದೀರಿ, ಮುಂದೆ ನಾವು ಇಷ್ಟು ಜನರೇಟ್ ಮಾಡುತ್ತೇವೆ ಎಂದು ಹೇಳುವುದನ್ನು ಬಿಟ್ಟು ಬೇರೆ ರೀತಿಯಲ್ಲಿ ಹೇಳುವುದು ಸರಿಯೇ? ನಮ್ಮ ಕಾಲದಲ್ಲಿ ಹಲವಾರು ಪ್ರಾಜೆಕ್ಟ್‌ಗಳು ಪ್ರಾರಂಭವಾಗಿರಬಹುದು, ಅದು ನಿಮ್ಮ ಕಾಲದಲ್ಲಿ ಮುಗಿದಿರಬಹುದು. ಹಲವಾರು ಪ್ರಾಜೆಕ್ಟ್‌ಗಳಿಗೆ ನಿಮ್ಮ ಕಾಲದಲ್ಲಿ, ಫೌಂಡೇಶನ್ ಹಾಕಿದವುಗಳು ನಮ್ಮ ಕಾಲದಲ್ಲಿ ಮುಗಿದಿರಬಹುದು. ಅವುಗಳ ಬಗ್ಗೆ ಹೇಳುವುದನ್ನು ಬಿಟ್ಟು ಬರೇ ಚುಚ್ಚು ಮಾತನಾಡಿದರೆ ನಾನು ಅದನ್ನು ಒಪ್ಪುವುದಿಲ್ಲ. ಅದು ಸಮಂಜಸವೂ ಅಲ್ಲ. ನೀವೆ ಇದರ ಬಗ್ಗೆ ಅಂಕಿ ಅಂಶ ಕೊಟ್ಟು ಅರಿವು ಇಲ್ಲದ ರೀತಿಯಲ್ಲಿ ಮಾತನಾಡುತ್ತಿದ್ದರೆ ನಾನೇನು ಹೇಳಲಿ. ಇವೊತ್ತು ಎಲ್ಲಾ ಪ್ರಾಜೆಕ್ಟ್‌ಗಳನ್ನೂ ಸೇರಿಸಿದರೆ, ಅದರಲ್ಲಿ ಭದ್ರಾ ಇರಬಹುದು, ಮಿನಿ ಹೈಡಲ್ ಸ್ಕೀಮ್ಸ್ ಇರಬಹುದು, ವಿಂಡ್ ಎನರ್ಜಿ ಇರಬಹುದು, ರಾಯಚೂರು ಥರ್ಮಲ್ ಇರಬಹುದು, ಸೂಪ ಡ್ಯಾಮ್ ಇರಬಹುದು, ಲಿಂಗನಮಕ್ಕಿ ಇರಬಹುದು ಮತ್ತು ಶರಾವತಿ ಇರಬಹುದು. ಇಷ್ಟೆಲ್ಲಾ ಪ್ರಾಜೆಕ್ಟ್‌ಗಳನ್ನೂ ನಮ್ಮ ಜೆ.ಹೆಚ್. ಪಟೇಲರೇ ಫೌಂಡೇಶನ್ ಹಾಕಿ ವಿದ್ಯುತ್ ತಯಾರು ಮಾಡಿ ರೈತರಿಗೆ ಕರೆಂಟ್ ಕೊಟ್ಟು ಅನುಕೂಲ ಮಾಡಿಕೊಟ್ಟಿದ್ದಾರೇನು? ಏಕೆಂದರೆ ಅವರು ಮಾತನಾಡುತ್ತ ಹೇಳಿದರಲ್ಲ, ನಾವೇನು ಮಾರ್ವಾಡಿ ಮಕ್ಕಳೇ ಎಂದು. ಮಾರ್ವಾಡಿಗಳೂ ಮನುಷ್ಯರೇ, ನಾನು ಅದರ ಬಗ್ಗೆ ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಕಾಂಗ್ರೆಸ್ ಪಕ್ಷವಿದ್ದಾಗ ಇವೊತ್ತು ಏನು 3470 ಮೆಗಾವ್ಯಾಟ್ ಕರೆಂಟ್ ಉತ್ಪಾದನೆಯಾಗುತ್ತಿದೆ ಅದರಲ್ಲಿಯೇ ನಾವು ಐ.ಪಿ. ಸೆಟ್‌ಗೆ ಕರೆಂಟ್‌ನ್ನು ಕೊಟ್ಟು ಮ್ಯಾನೇಜ್ ಮಾಡುತ್ತಿದ್ದೇವಲ್ಲ. ಲುಕ್ಸಾನು ಆಗಿರಬಹುದು. ಆ ಲುಕ್ಸಾನನ್ನು 1980 ರಿಂದ ಇಲ್ಲಿಯವರೆಗೆ ಕೊಟ್ಟುಕೊಂಡು ಬಂದಿದ್ದೇವೆ. ಆದರೆ ಆ ವಿಷಯವನ್ನು ಇವರು ಹೇಳುವುದಿಲ್ಲ. ಈಗ ಇದ್ದದ್ದನ್ನು ಹೇಗೆ ಮ್ಯಾನೇಜ್ ಮಾಡಬೇಕು ಎನ್ನುವುದಕ್ಕೆ ಒಂದು ಸಲ್ಯೂಶನ್ ತಾವು ಹೇಳಬೇಕು. ಅದನ್ನು ಬಿಟ್ಟು, ಅವರು ಏನೂ ಮಾಡಿಲ್ಲ ಅದಕ್ಕಾಗಿ ಈಗಲಾದರೂ ನಾವೇನಾದರೂ ಮಾಡಬೇಕು ಎಂಬ ವಿಚಾರ ಹೇಳುತ್ತಿದ್ದಾರೆ. ಇನ್ನೊಂದು ವಿಚಾರವನ್ನು ನಾನು ಅವರ ಗಮನಕ್ಕೆ ತರುತ್ತಿದ್ದೇನೆ. ಅವರು ಈಗಾಗಲೇ ಬಂದು ನೋಡಿರಬಹುದು. ಪುಟ ಸಂಖ್ಯೆ 28 ರಲ್ಲಿ ಜಾಯಿಂಟ್ ಹೌಸ್ ಕಮಿಟಿ ರೆಕಮೆಂಡೇಶನ್ಸ್ ಇದೆ. ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ಇದರಲ್ಲಿ ರೆಕಮಂಡೇಶನ್ ಸಂಖ್ಯೆ 5 ಒಂದನ್ನು ಬಿಟ್ಟರೆ ಬೇರೆ ಯಾವ ರೆಕಮೆಂಡೇಶನ್‌ನ್ನೂ ಇಂಪ್ಲಿಮೆಂಟ್ ಮಾಡಿಲ್ಲ. ಅದರಲ್ಲಿ ಏನಿದೆಯೆಂದರೆ "Government may direct KEB to fix energy meters to all the IP sets in order to assess correct consumption of energy by agricultural sector, ಇದು ಒಂದನ್ನು ಮಾತ್ರ ಇಂಪ್ಲಿಮೆಂಟ್ ಮಾಡಿದ್ದಾರೆ. ಅದಕ್ಕೆ ನಾನು ಕೇಳುವುದೇನೆಂದರೆ 13 ರೆಕಮೆಂಡೇಶನ್‌ಲ್ಲಿ 12 ರೆಕಮೆಂಡೇಶನ್‌ನ್ನು ಏಕೆ ಇಂಪ್ಲಿಮೆಂಟ್ ಮಾಡಲಿಲ್ಲ? ಆ 12 ರೆಕಮೆಂಡೇಶನ್‌ನಲ್ಲಿ "Government may release subsidy to the KEB every year for subsidised power supply being given to I.P.Sets and Bhagya Jyothi/Kuttera

Jyothi installations. ಇದು ಒಂದು. "Government may direct KEB to conduct special drive to recover the outstanding revenue arrears within 6 months, ಅರಿಯರ್ಸ್ ಎಷ್ಟಿದೆಯೆಂದರೆ ಸುಮಾರು 768 ಕೋಟಿ ರೂಪಾಯಿಗಳು ಇದೆ. ಇದರಲ್ಲಿ ರೈತರಿಗೆ ಐ.ಪಿ.ಸೆಟ್‌ಗೆ ಕೊಟ್ಟ ವಿದ್ಯುತ್ ಬಾಕಿ ವಸೂಲಾಗಬೇಕಾಗಿರುವುದು ಕೇವಲ 62 ಕೋಟಿ ರೂಪಾಯಿಗಳು. ಅಂದರೆ ಸುಮಾರು 700 ಕೋಟಿ ರೂಪಾಯಿಗಳು ದೊಡ್ಡ ದೊಡ್ಡ ಇಂಡಸ್ಟ್ರಿಯಲಿಸ್ಟ್‌ಗಳಿಂದ ಬಾಕಿ ಬರಬೇಕಾಗಿದೆ. ಸೆಂಟ್ರಲ್ ಅಂಡ್ ಸ್ಟೇಟ್ ಗೌರ್ನಮೆಂಟ್ ಅಂಡರ್‌ಟೇಕಿಂಗ್ಸ್, ಫ್ಯಾಕ್ಟರೀಸ್‌ಗಳಿಂದ ಸುಮಾರು 187 ಕೋಟಿ ರೂಪಾಯಿಗಳು ಬಾಕಿ ಬರಬೇಕಾಗಿದೆ. ವೇರಿಯಸ್ ಲೋಕಲ್ ಬಾಡೀಸ್‌ಗಳಿಂದ 157 ಕೋಟಿ ರೂಪಾಯಿಗಳ ಬಾಕಿ ವಸೂಲಾಗಬೇಕಾಗಿದೆ. ಬೆಂಗಳೂರು ವಾಟರ್ ಸಪ್ಲೈ ಅಂಡ್ ಸಿವಿರೇಜ್‌ನಿಂದ 77 ಕೋಟಿ ರೂಪಾಯಿಗಳ ಬಾಕಿ ವಸೂಲಾಗಬೇಕಾಗಿದೆ. ಇವೆಲ್ಲವನ್ನೂ ಇನ್ನು 6 ತಿಂಗಳಲ್ಲಿ ವಸೂಲಿ ಮಾಡಬೇಕೆಂದು ಜಾಯಿಂಟ್ ಹೌಸ್ ಕಮಿಟಿ ರೆಕಮೆಂಡೇಶನ್‌ನಲ್ಲಿ ಹೇಳಿದೆ.

ಶ್ರೀ ಜೆ.ಹೆಚ್. ಪಟೇಲ್:- ಮಾನ್ಯ ಅಧ್ಯಕ್ಷರೇ, ನಾನು ಹೇಳುವುದೇನೆಂದರೆ, Public Sector Undertakings both State as well as Central, ಇವೆಲ್ಲಾ ಲುಕ್ಸಾನ್‌ನಲ್ಲಿ ಇವೆ. ಮುನಿಸಿಪಾಲಿಟಿಯವರು ಇನ್ನೂ ಬಿಲ್ ಚುಕ್ತಾ ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅದಕ್ಕೆ ರೈತರ ಮೇಲೆ ಹೊರೆ ಹೊರಿಸುತ್ತೀರೋ?

ಶ್ರೀ ಜೆ.ಹೆಚ್. ಪಟೇಲ್:- ಇವೊತ್ತು ಯಾವ ಸಂಸ್ಥೆಗಳ ಮೇಲೆ ಕಠೋರವಾದ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೋ ಅಂಥವುಗಳು ಇವೊತ್ತು ಬಾಕಿ ಕೊಡಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇವೊತ್ತು ಕೆ.ಇ.ಬಿ. ಲೋನ್ ತೆಗೆದುಕೊಂಡಿದ್ದರ ಮೇಲೆ ಪಬ್ಲಿಕ್ ಮೇಲೆ ಇಂಟರೆಸ್ಟ್ ಹಾಕುತ್ತೀರಿ. ಆದರೆ ಸದನ ಸಮಿತಿ ಕೊಟ್ಟಿರುವ ರೆಕಮೆಂಡೇಶನ್‌ನಲ್ಲಿ 700 ಕೋಟಿ ರೂಪಾಯಿಗಳ ಬಾಕಿ ಏನಿದೆ ಅದನ್ನು 6 ತಿಂಗಳೊಳಗಾಗಿ ವಸೂಲಿ ಮಾಡಬೇಕೆಂದು ಹೇಳಲಾಗಿದೆ. ಆದರೆ ಇದರ ಕಡೆ ಏಕೆ ನೀವು ಗಮನ ಕೊಟ್ಟಿಲ್ಲ. ಇದಲ್ಲದೇ 43 ಸಾವಿರ ಕೆ.ಇ.ಬಿ. ಉದ್ಯೋಗಿಗಳಿಗೆ ಕೊಡುತ್ತಿರುವ ಪುಕ್ಕಟೆ ವಿದ್ಯುತ್ ಸರಬರಾಜನ್ನು ನಿಲ್ಲಿಸಬೇಕೆಂದು ರೆಕಮೆಂಡೇಶನ್‌ನಲ್ಲಿ ಹೇಳಿದೆ, ಅದನ್ನು ನೀವು ನಿಲ್ಲಿಸಿದ್ದೀರಾ? ಇದಲ್ಲದೇ ಒಂದು ವಿಜಿಲೆನ್ಸ್ ಕಮಿಟಿ ಮಾಡಿ ಎಲ್ಲೆಲ್ಲಿ ಕಮರ್ಶಿಯಲ್ ಲೀಕೇಜ್ ಇದೆ ಅದನ್ನು ನಿಲ್ಲಿಸಬೇಕು ಎಂದು ರೆಕಮೆಂಡೇಶನ್‌ನಲ್ಲಿ ಹೇಳಿದೆ, ಅದನ್ನು ನೀವು ಮಾಡಿದ್ದೀರಾ? ಸದನ ಸಮಿತಿ ಕೊಟ್ಟಿರುವ ಒಟ್ಟು 13 ರೆಕಮೆಂಡೇಶನ್‌ನಲ್ಲಿ 12 ರೆಕಮೆಂಡೇಶನ್‌ನ್ನು ಇಂಪ್ಲಿಮೆಂಟ್ ಮಾಡಿಲ್ಲ. ಇದೊಂದು ರೆಕಮೆಂಡೇಶನ್ ಮಾತ್ರ ಇಂಪ್ಲಿಮೆಂಟ್ ಮಾಡಿದ್ದೀರಿ. ಈ ನಮ್ಮ ಪ್ರಶ್ನೆಗಳಿಗೆ ನಿಮ್ಮಲ್ಲಿ ಉತ್ತರ ಇಲ್ಲ. ಇದನ್ನು ಕೇಳಿದರೆ ನೀವು ಹಿಂದೆ ಕೆಡಿಸಿ ಹೋಗಿದ್ದೀರಿ ಎಂದು ಹೇಳಿಕೊಂಡು ಸಮರ್ಥನೆ ಮಾಡಿಕೊಳ್ಳುತ್ತಾ ಅದನ್ನು ನಾವು ಇಂದು ಸರಿ ಮಾಡುತ್ತಿದ್ದೇವೆ ಎಂದು ಹಾರಿಕೆ ಉತ್ತರವನ್ನು ಹೇಳುತ್ತೀರಿ. ಈ ರೀತಿಯ ಹಾರಿಕೆ ಉತ್ತರ ನಮಗೆ ಬೇಡ. ಈಗ ನಾವೆಲ್ಲರೂ ಸೇರಿ ಒಂದು ತೀರ್ಮಾನ ಮಾಡಿದ್ದೇವೆ. ದಿನಾಂಕ 31-12-96 ರಲ್ಲಿ ಇಶ್ಯೂ ಮಾಡಿದ ಗೌರ್ನ್‌ಮೆಂಟ್ ಆರ್ಡರ್

ಏನಿದೆ ಅದರಲ್ಲೂ ಮುಖ್ಯವಾಗಿ ಎ.ಇ.ಹೆಚ್.ಗೆ ಸಂಬಂಧಪಟ್ಟ ಹಾಗೆ, ಸಿಂಗಲ್ ಫೇಸಿಂಗ್ ಇರತಕ್ಕಂಥದ್ದರ ಬಗ್ಗೆ, ರೈತರು ಅನಧಿಕೃತವಾಗಿ ಪಂಪ್‌ಸೆಟ್ ಹಾಕಿಕೊಂಡಿರುವ ಬಗ್ಗೆ ಪೆನಾಲ್ಟಿ ಹಾಕುತ್ತೇವೆಂದು ಹೇಳಿರುವುದು, ಪೆನಾಲ್ಟಿ ಕಟ್ಟದೇ ಹೋದರೆ ಅಂಥವರನ್ನು ಜೈಲಿಗೆ ಕಳುಹಿಸುವ ಬಗ್ಗೆ ಮತ್ತು ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೇವೆಂದು ಆ ಆರ್ಡರ್‌ನಲ್ಲಿ ಏನು ಇದೆ ಇವುಗಳನ್ನು ಸರ್ಕಾರ ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ನಾವು ಹೇಳಿದ್ದೇವೆ. ಆದರೆ ಸರ್ಕಾರ ಅದಕ್ಕೆ ಒಪ್ಪುತ್ತಿಲ್ಲ. ಆದ ಕಾರಣ ನಾವೆಲ್ಲರೂ ಸೇರಿ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಆ ಆರ್ಡರ್‌ನ್ನು ವಿತ್‌ಡ್ರಾ ಮಾಡಲೇಬೇಕು ಎಂದು ಒತ್ತಾಯಿಸುತ್ತಿದ್ದೇವೆ. ವಿತ್‌ಡ್ರಾ ಮಾಡಲಿಲ್ಲ ಎಂದರೆ ನಾವು ಧರಣಿ ಕೂರುತ್ತೇವೆ.

(ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಸದನದ ಬಾವಿಯಲ್ಲಿ ಧರಣಿ ಕುಳಿತರು)

ಶ್ರೀ ವೈ. ರಾಮಕೃಷ್ಣ:- ಮಾನ್ಯ ಅಧ್ಯಕ್ಷರೇ, ಈಗಾಗಲೇ ಹೊರಡಿಸಿರುವ ಎರಡೂ ಸರ್ಕಾರಿ ಆದೇಶವನ್ನು ವಿತ್‌ಡ್ರಾ ಮಾಡುತ್ತೀರೋ ಅಥವಾ ಪುನರ್‌ಪರಿಶೀಲನೆ ಮಾಡುತ್ತೀರೋ ಅಥವಾ ಎರಡೂ ಆರ್ಡರನ್ನು ರಿವೈಸ್ ಮಾಡುತ್ತೀರೋ ಅಥವಾ ನೀವು ಸದನ ಸಮಿತಿಯನ್ನಾದರೂ ಮಾಡಿ ರಿವೈಸ್ ಮಾಡಿಸಿ. ಇಷ್ಟನ್ನು ನೀವು ಮಾಡುವುದಕ್ಕೆ ಆಗದಿದ್ದರೆ ನಾವು ಬೇರೆ ವಿಧಿಯಿಲ್ಲದೇ ನಿಮ್ಮ ನಿರ್ಧಾರವನ್ನು ವಿರೋಧಿಸಿ ನಾವು ಕೂಡ ಧರಣಿ ಕೂರುತ್ತೇವೆ.

(ಬಿ.ಜೆ.ಪಿ. ಸದಸ್ಯರು ಕೂಡ ಸದನದ ಬಾವಿಯಲ್ಲಿ ಧರಣಿ ಕುಳಿತರು)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಸದನ ಸಮಿತಿ ಮಾಡಿರತಕ್ಕಂಥ ಅನೇಕ ಶಿಫಾರಸ್ಸುಗಳನ್ನು ಸರ್ಕಾರ ಒಪ್ಪಿಲ್ಲ. ಇದು ಸ್ಪಷ್ಟವಾಗಿ ಎಲ್ಲರಿಗೂ ಗೊತ್ತಿದೆ. ವರದಿಯಲ್ಲಿ ಬಾಕಿ ಇರತಕ್ಕಂಥ 700 ಕೋಟಿ ರೂಪಾಯಿಗಳನ್ನು ಸರ್ಕಾರ ವಸೂಲಿ ಮಾಡಬೇಕು ಎಂದು ಹೇಳಲಾಗಿದೆ. ಆದರೆ ಸರ್ಕಾರ ಅದನ್ನು ಮಾಡಿಲ್ಲ. 6 ತಿಂಗಳೊಳಗಾಗಿ ಈ ಕೆಲಸವನ್ನು ಮಾಡಬೇಕು ಎಂದು ವರದಿಯಲ್ಲಿ ಹೇಳಲಾಗಿತ್ತು. ಇದಲ್ಲದೇ ಒಟ್ಟು 13 ರೆಕಮೆಂಡೇಶನ್‌ನಲ್ಲಿ 12 ರೆಕಮೆಂಡೇಶನ್ಸ್‌ನ್ನು ಸರ್ಕಾರ ಒಪ್ಪಿಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೇ, ರೈತರುಗಳೇ ವಾಲಂಟರಿಯಾಗಿ ಬಂದು ನಾವು ಹಾಕಿರುವ ಪೆನಾಲ್ಟಿಯನ್ನು ಒಪ್ಪಿಕೊಂಡು ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಕಟ್ಟಿ ರೆಗ್ಯುಲರೈಸ್ ಮಾಡಿಸಿಕೊಂಡಿದ್ದಾರೆ. ಆದರೆ ಈಗ ಉಳಿದಿರುವ ಬಾಕಿ ವಸೂಲಿಯಾಗ-ಬೇಕಾಗಿರುವುದು ಪಬ್ಲಿಕ್ ಸೆಕ್ಟಾರ್ ಕಂಪನಿಗಳಿಂದ, ಕಾರ್ಪೊರೇಶನ್‌ಗಳಿಂದ, ಮುನಿಸಿಪಾಲಿಟಿ-ಯಿಂದ, ವಾಟರ್ ಸಪ್ಲೈ ಬೋರ್ಡ್‌ನವರಿಂದ ಮಾತ್ರ.

(ಗೊಂದಲ)

ಶ್ರೀ ಬಿ. ಟಿ. ಶಿವಪ್ಪ:- ಇದನ್ನು ಸದನ ಸಮಿತಿಗೆ ರೆಫರ್ ಮಾಡಿ.

ಶ್ರೀ ಸಿದ್ಧರಾಮಯ್ಯ:- ಸದನ ಸಮಿತಿ ಲಿಮಿಟೆಡ್ ಪರ್ಪ್‌ಸ್‌ಗೆ ಮಾಡಿದ್ದು, ಅದು ಮುಗಿದು ಹೋಯಿತು.

ಅಧ್ಯಕ್ಷರು:- ಈಗಾಗಲೇ ಸಾಕಷ್ಟು ಹೊತ್ತು ಆಗಿದೆ. ವೈ. ರಾಮಕೃಷ್ಣರವರೇ ಈಗ ಅಡ್ಜೆರ್ನ್ ಮಾಡೋಣವೇ.

(ಈ ಹಂತದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿಯ ಮಾನ್ಯ ಸದಸ್ಯರುಗಳೆಲ್ಲರೂ ಬಾವಿಯಲ್ಲೆ ಧರಣಿ ನಡೆಸಿದ್ದರು)

ಮಾನ್ಯ ಖರ್ಗೆಯವರೇ, ಈಗಾಗಲೇ ಹೊತ್ತಾಗಿದೆ, ಈಗ ಸಭೆಯನ್ನು ಮುಕ್ತಾಯಮಾಡಿ ಮತ್ತು ನಾಳೆ ಸೇರೋಣ.

(ಗೊಂದಲ)

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೇ, ಮುನಿಸಿಪಾಲಿಟಿಯಲ್ಲಿ ಬಾಕಿ ಇದ್ದು, ಅವರಿಗೆ ಸಂಬಳ ಕೊಡುವುದಕ್ಕೆ ನಾವು ಮೀಟಿಂಗ್ ಮಾಡಿ ಅವರಿಗೆ ನಾವು ಸಂಬಳ ಕೊಟ್ಟಿದ್ದೇವೆ. ಸಂಬಳ ಕೊಡುವುದಕ್ಕೆ ದುಡ್ಡು ಇಲ್ಲದೆ ಎಲ್ಲಾ ಬಂದು ಗಲಾಟೆ ಮಾಡಿಕೊಂಡು ಕುಳಿತಿದ್ದರು. ಅವರಿಗೆ ಸಂಬಳ ಕೊಟ್ಟೆವು. ಅಲ್ಲಿ ವಿದ್ಯುಚ್ಛಕ್ತಿ ಬಾಕಿ ಈಗ ವಸೂಲು ಮಾಡುವುದಕ್ಕಾಗುತ್ತದೆಯೇ? ಇನ್ನು ವಾಟರ್ ಸಪ್ಲೈ ಬೋರ್ಡ್‌ನವರ ಮೇಲೆ ಕೇಸ್ ಹಾಕಿ ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ಕರೆಂಟ್ ಡಿಸ್‌ಕನೆಕ್ಟ್ ಮಾಡುವುದಕ್ಕಾಗುತ್ತದೆಯೇ? ಈ ತರಹ ಸುಮಾರು 300-400 ಕೋಟಿ ರೂಪಾಯಿಗಳ ಬಾಕಿ ಇದೆ. ಮೈಸೂರು ಸಿಟಿಯಲ್ಲಿ ಅನ್ ಆಥರೈಸ್ಡ್ ಕನ್‌ಸ್ಟ್ರಕ್ಷನ್ ಆಗಿರುವ ಕಡೆಯೆಲ್ಲಾ ಅವರೇ ಕಂಬ ನೆಟ್ಟು ಕನೆಕ್ಷನ್ ತೆಗೆದುಕೊಂಡಿದ್ದಾರೆ.

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ:- ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ವಿನಂತಿ. ಅನ್ ಆಥರೈಸ್ಡ್ ಕನೆಕ್ಷನ್‌ನಲ್ಲಿ ಎರಡು ವಿಧವಿದೆ. ಅದನ್ನು ಅವರು ತಿಳಿದುಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಕೆಲವರು ಅಪ್ಲಿಕೇಷನ್ ಹಾಕಿದ್ದರೆ ಎಸ್ಟಿಮೇಟ್ ಸ್ಯಾಂಕ್ಷನ್ ಆಗಿ ವರ್ಕ್ ಆರ್ಡರ್ ಇಶ್ಯೂ ಆಗಿದೆ. ಆದರೆ ಪ್ರಿಯಾರಿಟಿ ಲಿಸ್ಟ್‌ನಲ್ಲಿ ಇಲ್ಲ ಎಂದು ಅವರೇ ತೆಗೆದುಕೊಂಡು ಬಿಟ್ಟಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್:- ಅವರೇ ಕಂಟ್ರಾಕ್ಟರ್ ಮೂಲಕ ಕಂಬ ಕೊಟ್ಟು ಕೆ.ಇ.ಬಿ.ಯಿಂದ ವೈರ್ ತೆಗೆದುಕೊಂಡು ಮಾಡಿದ್ದು ಅಂತಹವಕ್ಕೆ ಸ್ಯಾಂಕ್ಷನ್ ಆಗಿ ಪ್ರಿಯಾರಿಟಿಯಲ್ಲಿ ಏನಾದರೂ ಮಿಸ್ಟೇಕ್ ಆಗಿ ಮುಂಚೆ ಕೊಟ್ಟಿದ್ದಕ್ಕೆ ಅಲ್ಲಿ.

ಶ್ರೀ ಹೆಚ್.ಎನ್. ನಂಜೇಗೌಡ:- ತಮ್ಮ ಮುಖೇನ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಇದರಲ್ಲಿ ಸ್ವಲ್ಪ ಕನ್‌ಫ್ಯೂಷನ್ ಇದೆ. ಅವರಿಗೆ ಈಗ ತಕ್ಷಣ ವಿತ್‌ಡ್ರಾ ಮಾಡುವುದಕ್ಕೆ ಕಷ್ಟವಾದರೆ ಬೇಕಾದರೆ ಚೇಂಬರ್‌ನಲ್ಲಿ ಕರೆಯಿರಿ. ಕನ್‌ಫ್ಯೂಷನ್ ಏನಿದೆ ಅದನ್ನು ವಿವರಣೆ ಕೊಡುತ್ತಾರೆ, let us understand the problem; let them also give proper remedy. ಈಗ ಅವರಿಗೆ ರೈತರನ್ನು ಕಂಡರೆ ಆಸಕ್ತಿ ಇಲ್ಲ ಎಂದು ನಾನು ಹೇಳುವುದಿಲ್ಲ. ಅವರಿಗೂ ಆಸಕ್ತಿ ಇದೆ, ನಮಗೂ ಆಸಕ್ತಿ ಇದೆ, ಎಲ್ಲರಿಗೂ ಆಸಕ್ತಿ ಇದೆ. ಆದರೆ ಆ ಆಸಕ್ತಿ

ಎಷ್ಟರಮಟ್ಟಿಗೆ ಹೋಗಬೇಕು ಎನ್ನುವುದಕ್ಕೆ ಸ್ವಲ್ಪ ಮಾತನಾಡಿದರೆ ಒಳ್ಳೆಯದು. ನಾನಂತೂ ಅದನ್ನು ಅರ್ಥಮಾಡಿಕೊಂಡಿಲ್ಲ. ನಾನು ಹೇಳುತ್ತೇನೆ, I admit my ignorance on the subject. ಆದುದರಿಂದ ಈಗ ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನಪಡುತ್ತಿದ್ದೇನೆ. There appears to be some confusion.

MR. SPEAKER:- You have some idea about the un-authorised connections ಏನು ಇಗ್ನೊರೆನ್ಸ್ ಇದ್ದರೂ ಕೂಡ ಡಿಸ್‌ಕನೆಕ್ಟ್ ಮಾಡಿಬಿಡುತ್ತಾರೆ.

ಶ್ರೀ ಹೆಚ್.ಎನ್. ನಂಜೇಗೌಡ:- ಡಿಸ್‌ಕನೆಕ್ಟ್ ಮಾಡಿಬಿಡುತ್ತಾರೆ, ಕ್ರಿಮಿನಲ್ ಕೇಸ್ ಹಾಕುತ್ತಾರೆ. ಇದು ಸ್ವಲ್ಪ ಅತೀ ಆಯಿತು ಎನಿಸುತ್ತದೆ.

ಅಧ್ಯಕ್ಷರು:- ಈಗ ತಾವು ಸಲಹೆ ಮಾಡಿದಂತೆ ಸಮಯ ಈಗಾಗಲೇ 5.45 ಆಗಿದೆ. ಈಗ ಸಭೆಯನ್ನು ಮುಕ್ತಾಯ ಮಾಡೋಣ. ನಾಳೆ ಸದನ ಪ್ರಾರಂಭವಾಗುವುದಕ್ಕಿಂತ ಒಂದು ಗಂಟೆ ಮೊದಲೆ ಎಂದರೆ 10.00 ಗಂಟೆಗೆ ನನ್ನ ಚೇಂಬರ್‌ನಲ್ಲಿ ಕುಳಿತುಕೊಂಡು ಮಾತನಾಡೋಣ. ಅಲ್ಲಿಗೆ ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿಬಿಟ್ಟು, ಕನ್‌ಫ್ಯೂಷನ್ ಏನಿದೆ ಅದನ್ನು ನಿವಾರಣೆ ಮಾಡಿಕೊಂಡು ನಂತರ ನಾವು ಸದನಕ್ಕೆ ಬರೋಣ. ಈಗ ಸಭೆಯನ್ನು ಸನ್ಮಾನ್ಯ ಹಿರಿಯ ಸದಸ್ಯರಾದ ಮಾನ್ಯ ನಂಜೇಗೌಡರು ಸಲಹೆ ಕೊಟ್ಟಂತೆ ಹಾಗೂ ವಾಟಾಳ್ ನಾಗರಾಜ್‌ರವರು ಹೇಳುತ್ತಿರುವಂತೆ ಯಾರು ರೈತರಿಗೆ ವಿರೋಧ ಇರಬೇಕು, ರೈತರಿಗೆ ಹಿಂಸೆ ಮಾಡಬೇಕು ಎನ್ನುವ ಉದ್ದೇಶ ಇಲ್ಲ. ಸರ್ಕಾರಿ ಆಜ್ಞೆಯಲ್ಲಿ ಅಥವಾ ಕೆ.ಇ.ಬಿ. ಹೊರಡಿಸಿರತಕ್ಕಂಥ ಆದೇಶದಲ್ಲಿ ಏನಾದರೂ ತಪ್ಪು ತಿಳುವಳಿಕೆ ಇದ್ದರೆ, ಹಾಗೂ ರೈತರಿಗೆ ಹೆಚ್ಚು ಪ್ರಯೋಜನ ಮಾಡತಕ್ಕಂಥ ದೃಷ್ಟಿಯಿಂದ ನಮಗೆ ಈ ಇಕ್ಕಟ್ಟು ಏನು ಉದ್ಭವಿಸಿದೆ ಇದನ್ನು ಪರಿಹಾರ ಮಾಡಿಕೊಳ್ಳುವ ದೃಷ್ಟಿಯಿಂದ ನಾಳೆ ಬೆಳಿಗ್ಗೆ 10.00 ಗಂಟೆಗೆ ಪಕ್ಷದ ಮುಖಂಡರು ಹಾಗೂ ಸನ್ಮಾನ್ಯ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಸಂಬಂಧಿಸಿದ ಎಲ್ಲಾ ಅಧಿಕಾರಿಗಳನ್ನು ನಾನು ಕರೆಯಿಸುತ್ತೇನೆ. 10 ಗಂಟೆಯಿಂದ 11.00 ಗಂಟೆಯವರೆಗೆ ಚರ್ಚೆ ಮಾಡಿ ಇದಕ್ಕೆ ಒಂದು ಪರಿಹಾರ ಕಂಡು ಹಿಡಿದುಕೊಂಡು ನಂತರ 11.00 ಗಂಟೆಗೆ ಸದನವನ್ನು ಪ್ರಾರಂಭ ಮಾಡೋಣ. ಈಗ ಸದನವನ್ನು ಮುಂದೂಡಿ ಮತ್ತೆ ನಾಳೆ ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ 5.00 ಗಂಟೆ 45 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 14ನೇ ಫೆಬ್ರವರಿ ಮಾಹೆ 1997ರ ಶುಕ್ರವಾರದೆಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸಿರುತ್ತದೆ)